ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 29
೧೮ ಮೇ ೧೯೫೮
*
ಪುಟ ೧೦ ಬೆಲೆ: ೧೩ ನಯೇ ಪೈಸೆ
★

ಜತ್ತಿಯುವರ ಮಂತ್ರಿಮಂಡಲದ ಭವಿಷ್ಯವೇನು ?

ನಿಜಲಿಂಗಪ್ಪನವರ ಪತನವಾದ ನಂತರ ಅಧಿಕ ಮತಗಳಿಸಿ ಮೈಸೂರು ಕಾಂಗ್ರೆಸ್ ಶಾಸನ ಸಭಾ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಶ್ರೀ ಬಿ. ಡಿ. ಜತ್ತಿಯವರು ತಮ್ಮ ಮಂತ್ರಿ ಮಂಡಲವನ್ನು ರಚಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಜತ್ತಿಯುವರ ಆಯ್ಕೆಯ ನಂತರದಲ್ಲಿ ಅವರನ್ನು ಆತ್ಮೀಯವಾಗಿ ಪ್ರಶಂಸಿದ "ಮಿತ್ರರು" ಈಗ ಮಂತ್ರಿಮಂಡಲದ ರಚನೆಯತ್ತ ಗಮನವಿತ್ತಿದ್ದಾರೆ.

ಜತ್ತಿಯವರ ಸಂಪುಟದ ಭವಿಷ್ಯ ಸಚಿವರ ಆಯ್ಕೆಯ ಮೇಲೆ ಅವಲಂಬಿಸಿದೆ. ಮೈಸೂರು ಕಾಂಗ್ರೆಸ್ ಶಾಸನ ಸಭಾ ಪಕ್ಷದಲ್ಲಿರುವ ವಿವಿಧ ಗುಂಪುಗಳನ್ನು ತೃಪ್ತಿಗೊಳಿಸಿ ಯಶಸ್ವಿಯಾಗುವುದರ ಮೇಲೆ ಅವಲಂಬಿಸಿದೆ ಎಂಬ ಉದ್ಗಾರಗಳು ಪತ್ರಿಕೆಗಳಲ್ಲಿ ಈಗಾಗಲೇ ಬಂದಿವೆ. ಕಾಂಗ್ರೆಸ್ಸಿನ ಇಂದಿನ ಸಂಘಟನೆಯ, ಮಟ್ಟದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿರುವ ತಿಕ್ಕಾಟದಲ್ಲಿ, ಸ್ವಾರ್ಥತೆ ಮತ್ತು ಗುಂಪು ಕಟ್ಟುವುದರಲ್ಲಿ ಸಚಿವ ಸ್ಥಾನವು ಪ್ರತಿ ಕಾಂಗ್ರೆಸ್ ಸದಸ್ಯನಿಗೂ ಮುಖ್ಯವಾದುದಾಗಿದೆ. ಕಾಂಗ್ರೆಸ್ ಶಾಸನ ಸಭಾ ಸದಸ್ಯರೆಲ್ಲರೂ ನಾನು ಮುಂದು ತಾನು ಮುಂದು ಎಂದು ಸಚಿವ ಪದವಿಗೆ ಓಡುತ್ತಿದ್ದಾರೆ. ತಮಗೆ ಸಚಿವ ಪದವಿ ದೊರಕಲೇಬೇಕೆಂದೂ ಇಲ್ಲದಿದ್ದಲ್ಲಿ ದೇಶದ ಸರ್ವ ನಾಶವೇ ಆಗುವುದೆಂದು ವಾದಿಸುವ ಕಾಂಗ್ರೆಸ್ಸಿಗರೂ ಇದ್ದಾರೆ. ಇಂಥ ಸನ್ನಿವೇಶದಲ್ಲಿ ಜತ್ತಿಯವರ ಹೊಸ ಸಚಿವ ಸಂಪುಟ ಮೈಸೂರಿನ ಜನತೆಯ ಮೇಲೆ ಅಧಿಕಾರ ನಡೆಸಲು ಅಧಿಕಾರಕ್ಕೆ ಬರುವುದಿದೆ.

ಈಗಾಗಲೇ ದೆಹಲಿ ಯಾತ್ರೆ ಮುಗಿಸಿಕೊಂಡು ಜತ್ತಿಯವರು ಹಿಂತಿರುಗಿದ್ದಾರೆ. ಹೈ ಕಮಾಂಡಿನೊಂದಿಗೆ ಚರ್ಚೆ ನಡೆಸಿದ ಬಳಿಕ ಯಾರು ಯಾರನ್ನು ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳಬೇಕೆಂದು ಲೆಕ್ಕ ಹಾಕಿರಬಹುದು. ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರೊಂದಿಗೂ, ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸಾಹುಕಾರ ಚನ್ನಯ್ಯನವರೊಂದಿಗೂ ಚರ್ಚೆ ನಡೆಸಿದ್ದಾರೆ. ಕಾಂಗ್ರೆಸ್ ಹೈ ಕಮಾಂಡು ತಮಗೆ ಮಂತ್ರಿಗಳನ್ನು ಆರಿಸಿಕೊಳ್ಳಲು ಸಂಪೂರ್ಣವಾದ ಸ್ವಾತಂತ್ರ್ಯ ಕೊಟ್ಟಿರುವುದಾಗಿ ಜತ್ತಿಯವರು ತಿಳಿಸಿದ್ದಾರೆ. ಆದರೆ ಇದು ಕೇವಲ ತೋರಿಕೆಗೆ ಮಾತ್ರ ಎಂಬುದು ಎಲ್ಲರಿಗೂ ತಿಳಿದಿದೆ.

ಈ ತಿಂಗಳ 20ರ ಸುಮಾರಿಗೆ ಸಚಿವ ಸಂಪುಟದ ಬಗ್ಗೆ ತೀರ್ಮಾನವಾಗುವುದೆಂದು ಹೇಳಲಾಗಿದೆ. ಆದರೆ ಇದು ಇನ್ನೂ ಮುಂದೆ ಹೋದಲ್ಲಿ ಆಶ್ಚರ್ಯವೇನಿಲ್ಲ. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿದ್ದ ಸಚಿವರಾರೂ ಈ ಸಂಪುಟದಲ್ಲಿ ಸೇರುವುದಿಲ್ಲ ಎಂದು ಖಚಿತವಾಗಿ ಹೇಳಲಾಗುತ್ತಿದೆ. ಜತ್ತಿಯವರು ಪೂರ್ಣವಾಗಿ ಬೇರೆ ಜನರನ್ನೇ ತೆಗೆದುಕೊಳ್ಳುವುದಾಗಿ ತಿಳಿದುಬಂದಿದೆ. ಪ್ರಾದೇಶಿಕ, ಜಾತೀಯ, ಮತ್ತು ಗುಂಪುಗಳ ಆಧಾರದ ಮೇಲೆ ಸಚಿವರ ಆಯ್ಕೆ ಮತ್ತು ಅಧಿಕಾರದ ಹಂಚಿಕೆ ಇವುಗಳಿಗಾಗಿ ಜತ್ತಿಯವರು ಈಗ ಮಾತುಕತೆ ನಡೆಸುತ್ತಿದ್ದಾರೆ.

ಎಲ್ಲ ಗುಂಪುಗಳಿಗೂ ಸಾಕಷ್ಟು ಪ್ರಾತಿನಿಧ್ಯ ಕೊಡಲು ಸಚಿವರ ಸಂಖ್ಯೆಯನ್ನು ಹೆಚ್ಚಿಸುವ ನಿರೀಕ್ಷೆ ಇದೆ. ಹನ್ನೆರಡು ಮಂದಿ ಸಚಿವರು ಮತ್ತು ಆರು ಮಂದಿ ಉಪಮಂತ್ರಿಗಳೂ ಇರಬೇಕೆಂದು ಒತ್ತಾಯವಿದೆ. ಕಾಂಗ್ರೆಸ್ ಹೈ ಕಮಾಂಡ್ ಹೆಚ್ಚು ಕಡಿಮೆ ಇದಕ್ಕೆ ಒಪ್ಪಿಗೆ ಇತ್ತಂತಿದೆ. ಸಂಖ್ಯೆ ಹೆಚ್ಚಿಸದಿದ್ದಲ್ಲಿ ಪ್ರಾತಿನಿಧ್ಯವಿಲ್ಲದೆ ಮಂತ್ರಿ ಮಂಡಲಕ್ಕೆ ಆಪತ್ತು ಬಂದೀತೆಂಬ ಭೀತಿ ಇದೆ. ಒಟ್ಟಿನಲ್ಲಿ ಜತ್ತಿಯವರ ಮಂತ್ರಿ ಮಂಡಲ ಸಾಕಷ್ಟು ದೊಡ್ಡದಾಗಿರುವುದಕ್ಕೆ ಸಾಕು.

ಮುಂಬಯಿಯಲ್ಲಿ ಮೊರಾರ್ಜಿ ಮಂತ್ರಿಮಂಡಲದಲ್ಲಿ ಉಪಮಂತ್ರಿಯಾಗಿದ್ದ ಜತ್ತಿಯವರ ಆಡಳಿತೆ ಎಷ್ಟು ಮಟ್ಟಿಗಿರುವುದೆಂದು ಕಾದು ನೋಡಬೇಕಿದೆ. ತಾವೇ ತಯಾರಿಸಿದ ಭೂಸುಧಾರಣಾ ವರದಿಯ ಮೇಲೆ, ಎಷ್ಟುಮಟ್ಟಿನ ಕಾಯಿದೆ ತರುವರೆಂಬುದನ್ನು ನೋಡಬೇಕಿದೆ. ಇಂದು ಜತ್ತಿಯವರಿಗೆ ಬೆಂಬಲವಿತ್ತಿರುವಂಥ ಪ್ರಮುಖರೆಲ್ಲರೂ ಸಾಮಾನ್ಯವಾಗಿ ಭೂಸುಧಾರಣಾ ವರದಿಯನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಇದೇ ಅಲ್ಲದೆ ಕಾರ್ಮಿಕ ಕ್ಷೇತ್ರದಲ್ಲಿ ಮತ್ತಿತರ ಕ್ಷೇತ್ರಗಳಲ್ಲಿ ಜತ್ತಿಯವರ ಸರಕಾರವು ಯಾವ ತೆರನ ಧೋರಣೆ ತಳೆಯುವುದೆಂದು ನೋಡಬೇಕಿದೆ. ನಿಜಲಿಂಗಪ್ಪನವರ ಸರಕಾರವು ಕಾರ್ಮಿಕ ವಿರೋಧಿಯೊಬ್ಬರನ್ನು ಕಾರ್ಮಿಕ ಸಚಿವರಾಗಿ ನೇಮಿಸಿದ್ದಿತು, ಕೊಡಗಿನಲ್ಲಿ ಮುಖ್ಯ ಮಂತ್ರಿಯಾಗಿದ್ದಾಗ ಪೋಲೀಸು ರಾಜ್ಯ ನಡೆಸಿದ್ದವರನ್ನೇ ಪೋಲೀಸು ಮಂತ್ರಿಯಾಗಿ ಮಾಡಿತ್ತು. ಜತ್ತಿಯವರ ಸಂಪುಟದಲ್ಲಿ ಈ ಇಲಾಖೆಗಳಿಗೆ ಯಾರು ಬರುತ್ತಾರೆ ?

ಜತ್ತಿಯವರ ಸಂಪುಟದ ಭವಿಷ್ಯ ಅವರು ಕಾಂಗ್ರೆಸ್ಸಿನೊಳಗಣ ಗುಂಪುಗಳನ್ನು ಹೇಗೆ ತೃಪ್ತಗೊಳಿಸುವುದೆಂಬುದರ ಮೇಲೆ ಹೊಂದಿಕೊಂಡಿರುವುದು ನಿಜ. ಆದರೆ ಅದೇ ಸಮಯದಲ್ಲಿ ಅವರ ಮಂತ್ರಿ ಮಂಡಲವು ಕಾರ್ಯರೂಪದಲ್ಲಿ ಅನುಸರಿಸುವ ಧೋರಣೆಯ ಮೇಲೂ ಹೊಂದಿಕೊಂಡಿದೆ ಎಂದು ತಿಳಿಸಬೇಕಾಗಿದೆ.

ಆಲ್ಜೀರಿಯ ಪ್ರಶ್ನೆಯ ಮೇಲೆ ಫ್ರಾನ್ಸ್‌ನಲ್ಲಿ ಅಂತರ್ಯುದ್ಧ ಪರಿಸ್ಥಿತಿ!

ಆಲ್ಜೀರಿಯ ಪ್ರಶ್ನೆಯ ಮೇಲೆ ಹಲವು ಸರಕಾರಗಳು ಉರುಳಿರುವ ಫ್ರಾನ್ಸ್ ಇಂದು ಅದೇ ಪ್ರಶ್ನೆಯ ಮೇಲೆ ಅಂತರ್ಯುದ್ಧದ ಪರಿಸ್ಥಿತಿಯನ್ನೆದುರಿಸುತ್ತಿದೆ. ಬೋರ್ಜಿಸ್ ಮನ್ನೇರಿ ಸರಕಾರ ಉರುಳಿದ ನಂತರ ಏರ್ಪಟ್ಟಿದ್ದ ರಾಜಕೀಯ ಬಿಕ್ಕಟ್ಟಿನಿಂದ ಪಾರಾಗಿ ಫ್ಲಿಮ್‌ಲಿನ್‌ರವರು ಸರಕಾರ ರಚಿಸಲು ಮುಂದೆ ಬಂದಿರುವ ಸಂದರ್ಭದಲ್ಲಿ ಆಲ್ಜೀರಿಯ ಪ್ರಶ್ನೆಯ ಬಗ್ಗೆ ಘಟನೆಗಳು ತೀವ್ರಗೊಂಡು ಅಂತರ್ಯುದ್ಧ ಪರಿಸ್ಥಿತಿ ಏರ್ಪಟ್ಟಿದೆ. ಮಂತ್ರಿ ಮಂಡಲದಲ್ಲಿ ಒಡಕು ಉಂಟಾಗಿದೆ. ಆಲ್ಜೀರಿಯದಲ್ಲಿ ಸೈನ್ಯ ಪಡೆಯು ಅಧಿಕಾರ ವಹಿಸಿಕೊಂಡು ಫ್ಲಿಮ್ಲಿನ್ ಸರಕಾರದ ರಾಜೀನಾಮೆಗೆ ಒತ್ತಾಯ ಪಡಿಸಿದೆ. ಫ್ಲಿಮ್ಲಿನ್‌ರವರ ಸರಕಾರವು ಆಲ್ಜೀರಿಯದಲ್ಲಿ ಫ್ರಾನ್ಸ್‌ನ ಹಿತ ಸಾಧಿಸುವುದಿಲ್ಲವೆಂದೂ, ಜನರಲ್ ಡಿಗಾಲ್‌ರವರು ಅಧಿಕಾರಕ್ಕೆ ಬರಬೇಕೆಂದೂ ಒತ್ತಾಯ ಪಡಿಸಿದ್ದಾರೆ.

ಆಲ್ಜೀರಿಯದಲ್ಲಿರುವ ಸೈನ್ಯ ಪಡೆಯು ಫ್ರಾನ್ಸ್‌ನಲ್ಲಿರುವ ಸರಕಾರದ ಆಜ್ಞೆಗಳನ್ನು ಮುರಿದು, ಮಿಲಿಟರಿ ಒಳಸಂಚು ನಡೆಸಿ ಯಶಸ್ವಿಯಾಗಿದೆ. ಫ್ರಾನ್ಸ್‌ನಲ್ಲಿರುವ ತೀವ್ರ ಪ್ರತಿಗಾಮಿಗಳು, ಬಲ ಪಂಥವಾದಿಗಳು ಈ ಒಳಸಂಚಿಗೆ ಬೆಂಬಲವಿತ್ತಿದ್ದಾರೆ. ಸುಮಾರು 150 ಮಂದಿ ಬಲ ಪಂಥವಾದಿ ಪ್ರತಿಗಾಮಿಗಳನ್ನು ಈಗಾಗಲೇ ದಸ್ತಗಿರಿ ಮಾಡಲಾಗಿದೆ.

ಆಲ್ಜೀರಿಯದಲ್ಲಿ ಮಿಲಿಟರಿ ಒಳಸಂಚಿನ ನಾಯಕರಾದ ಜನರಲ್ ಮಸ್ಸುರವರು ಅಧಿಕಾರ ವಹಿಸಿಕೊಂಡಿದ್ದಾರೆ. ಸಾರ್ವಜನಿಕ ರಕ್ಷಣ ಸಮಿತಿಯೊಂದನ್ನು ತಾತ್ಕಾಲಿಕವಾಗಿ ರಚಿಸಿ, ಮುಂದೆ ರಾಷ್ಟ್ರೀಯ ರಕ್ಷಣಾ ಸರಕಾರವನ್ನು ರಚಿಸುವುದಾಗಿ ಘೋಷಿಸಿದ್ದಾರೆ.

ಆಲ್ಜೀರಿಯದ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕುವುದೇ ಈ ಮಿಲಿಟರಿ ಒಳಸಂಚಿನ ಉದ್ದಿಶ್ಯವಾಗಿದೆ. ಫ್ರಾನ್ಸ್‌ನ ರಾಜ್ಯಾಂಗ ಘಟನೆಯನ್ನು ಉಲ್ಲಂಘಿಸಿ ಅದರ ಮೇಲೆ ಸಾರ್ವಜನಿಕ ರಕ್ಷಣಾ ಸರಕಾರದ ಹೆಸರಿನಲ್ಲಿ ಮಿಲಿಟರಿ ಸರ್ವಾಧಿಕಾರ ನಡೆಸುವುದು ಉದ್ದಿಶ್ಯವಾಗಿದೆ. ಆಲ್ಜೀರಿಯದಲ್ಲಿ ಹತ್ತು ಲಕ್ಷಕ್ಕೂ ಮೀರಿ ಫ್ರೆಂಚರು ವಾಸಿಸುತ್ತಿದ್ದಾರೆ. ಕಳೆದ ಐದು ವರುಷಗಳಿಂದಲೂ ವಸಾಹತುಶಾಹಿಯಿಂದ ಬಿಡುಗಡೆ ಹೊಂದಲು, ಸಂಪೂರ್ಣ ಸ್ವಾತಂತ್ರ್ಯ ಪಡೆಯಲು ಆಲ್ಜೀರಿಯದ ಜನತೆ ಹೋರಾಟ ನಡೆಸುತ್ತಿದ್ದಾರೆ. ಎಷ್ಟೇ ಕಗ್ಗೊಲೆಯನ್ನು ನಡೆಸಿದರೂ, ದಬ್ಬಾಳಿಕೆ ನಡೆಸಿದರೂ, ಸ್ವಾತಂತ್ರ್ಯ ಸಂಗ್ರಾಮವನ್ನು ಹತ್ತಿಕ್ಕಲು ಫ್ರೆಂಚ್ ಸಾಮ್ರಾಜ್ಯಶಾಹಿಗಳಿಗೆ ಸಾಧ್ಯವಾಗದಿದೆ.

ವಿಶ್ವದಾದ್ಯಂತ ಪ್ರಜಾ ಪ್ರಭುತ್ವ ಸರಕಾರಗಳು ಮತ್ತು ಜನತೆ ಆಲ್ಜೀರಿಯದಲ್ಲಿ ಫ್ರೆಂಚ್ ಸಾಮ್ರಾಜ್ಯಶಾಹಿಯು ನಡೆಸುತ್ತಿರುವ ತೀವ್ರ ದಬ್ಬಾಳಿಕೆಯನ್ನು ಖಂಡಿಸಿವೆ; ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಬೆಂಬಲವನ್ನಿತ್ತಿದೆ. ಆದರೆ ಫ್ರೆಂಚ್ ಸಾಮ್ರಾಜ್ಯವಾದಿಗಳು ಆಲ್ಜೀರಿಯದ ಪ್ರಶ್ನೆಯನ್ನು ಬಗೆಹರಿಸದೆ, ದಬ್ಬಾಳಿಕೆಯ ನೀತಿಯನ್ನೇ ಅನುಸರಿಸಿಕೊಂಡು ಬಂದಿದೆ.

ಒಂದಾದ ಮೇಲೊಂದರಂತೆ ಈ ಪ್ರಶ್ನೆಯ ಮೇಲೆ ಸರಕಾರ ಉರುಳುತ್ತಿದ್ದರೂ ಪ್ರಶ್ನೆಯ ಇತ್ಯರ್ಥಕ್ಕೆ ಮಾತ್ರ ಮಾರ್ಗವಾಗಿಲ್ಲ. ಫ್ರಾನ್ಸ್ ಅಧ್ಯಕ್ಷ ರೀನೆಕೋಟಿಯವರು ಫ್ರಾನ್ಸ್ ಇಂದು ಅಂತರ್ಯುದ್ಧದ ಬಾಗಿಲಲ್ಲಿದೆ ಎಂದು ತಿಳಿಸಿದ್ದಾರೆ. ಫ್ಲಿಮ್‌ಲಿನ್‌ರವರ ಸರಕಾರ ಅಧಿಕಾರ ವಹಿಸಿಕೊಂಡ ಕೆಲವೇ ಘಂಟೆಗಳ ಕಾಲದಲ್ಲಿ ಮಿಲಿಟರಿ ಒಳಸಂಚು ನಡೆದಿದೆ. ಇದು ಹಿಂದಿನಿಂದಲೂ ಯೋಚಿಸಲ್ಪಟ್ಟಿದ್ದುದು ಎಂದು ತಿಳಿಯ ಬರುತ್ತದೆ.

ಬಹುಪಕ್ಷಗಳಿಂದ ಕೂಡಿರುವ ಫ್ರಾನ್ಸ್ ದೇಶದಲ್ಲಿ ಆಲ್ಜೀರಿಯದ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವನ್ನು ಸತತವಾಗಿ ಕೊಡುತ್ತಿರುವುದು ಕಮ್ಯೂನಿಸ್ಟ್ ಪಕ್ಷವೊಂದೇ ಆಗಿದೆ. ಮಿಲಿಟರಿ ಒಳಸಂಚು ನಡೆದ ಕೂಡಲೆ ಮೇ 14ರಂದು ಕಮ್ಯೂನಿಸ್ಟ್ ಕಛೇರಿಯೊಳಗಣ ಮತ್ತು ಕಮ್ಯೂನಿಸ್ಟ್ ಪಕ್ಷದ ದಿನಪತ್ರಿಕೆಯ ಕಛೇರಿಯಲ್ಲಿಯೂ ಬಾಂಬುಗಳು ಇಡಲ್ಪಟ್ಟಿದ್ದು ಪತ್ತೆಯಾಗಿದೆ. ಬಲಪಂಥವಾದಿಗಳು ಮತ್ತು ತೀವ್ರ ಪ್ರತಿಗಾಮಿಗಳೂ, ಆಲ್ಜೀರಿಯದ ಸ್ವಾತಂ

(ಕೊನೇ ಪುಟ ನೋಡಿ)

ಯುಗೋಸ್ಲಾವಿಯ ಕಮ್ಯೂನಿಸ್ಟ್ ಲೀಗಿನ ಧೋರಣೆ ಮತ್ತು ಮಾರ್ಕ್ಸ್ ಸಿದ್ಧಾಂತ

ಎನ್. ವಿಲ್. ಉಪಾಧ್ಯಾಯ

ಕಳೆದ ತಿಂಗಳು ನಡೆದ ಯುಗೋಸ್ಲಾವಿಯದ ಕಮ್ಯೂನಿಸ್ಟ್ ಲೀಗಿನ ಅಧಿವೇಶನದಲ್ಲಿ ಚರ್ಚಿಸಲ್ಪಟ್ಟ ಹೊಸ ಕಾರ್ಯಕ್ರಮವು ಹಲವರ ಕುತೂಹಲವನ್ನು ಕೆರಳಿಸಿದೆ. ಅದರಲ್ಲಿ ಅಡಕವಾಗಿರುವ ಕೆಲವಂಶಗಳು ಚರ್ಚಾಸ್ಪದವಾಗಿದ್ದು ಇತರ ಕಮ್ಯೂನಿಸ್ಟ್ ಪಕ್ಷಗಳ ಟೀಕೆಗಳಿಗೆ ಗುರಿಯಾಗಿವೆ. ಅಷ್ಟೇ ಅಲ್ಲದೆ ಪಂಡಿತ್ ನೆಹರೂರವರು ತಮ್ಮ ಪ್ರಧಾನಿ ಪಟ್ಟದಿಂದ ಸ್ವಲ್ಪ ನಿವೃತ್ತರಾಗಬೇಕೆಂಬ ವೈರಾಗ್ಯ ಮನೋಭಾವದಲ್ಲಿದ್ದರೂ ಸಹ ಎ.ಐ.ಸಿ.ಸಿ ಅಧಿವೇಶನದಲ್ಲಿ ಕಮ್ಯೂನಿಸ್ಟರನ್ನು ಟೀಕಿಸುವ ಉದ್ದಿಶ್ಯದಿಂದ ಯುಗೋಸ್ಲಾವಿಯದ ಕಮ್ಯೂನಿಸ್ಟ್ ಪಾರ್ಟಿಯ ಬಗ್ಗೆ ಭಾರತ ಕಮ್ಯೂನಿಸ್ಟ್ ಪಾರ್ಟಿಯು ತಾಳಿದ ಧೋರಣೆಯನ್ನು ಟೀಕಿಸಿದ್ದಾರೆ. "ಭಾರತ ಕಮ್ಯೂನಿಸ್ಟ್ ಪಾರ್ಟಿಯ ವಿಚಾರ ಯಂತ್ರ ಪರದೇಶದಲ್ಲಿದೆ" ಎಂದು ಆರೋಪಿಸಿ ಭಾರತ ಕಮ್ಯೂನಿಸ್ಟ್ ಪಾರ್ಟಿಯು ಮೊದಲೊಂದು ಸಂದೇಶವನ್ನು ಯುಗೋಸ್ಲಾವಿಯಕ್ಕೆ ಕಳಿಸಿದ್ದರೂ, ಕೆಲ ಸಮಯದ ನಂತರ ರಷ್ಯ ಮತ್ತಿತರ ಪಕ್ಷಗಳು ಯುಗೋಸ್ಲಾವಿಯವನ್ನು ಟೀಕಿಸಿದಾಗ ಭಾರತ ಕಮ್ಯೂನಿಸ್ಟ್ ಪಕ್ಷವು ಇನ್ನೊಂದು ಸಂದೇಶವನ್ನು ಕಳಿಸಿದೆಂದು ಹೇಳಿದ್ದಾರೆ. ಕಾಂಗ್ರೆಸ್ ಸಂಸ್ಥೆಯಲ್ಲಿ ಅನೇಕರಿಗೆ ಸಮಾಜವಾದ ಸಿದ್ಧಾಂತದಲ್ಲಿ ನಂಬಿಕೆಯಿಲ್ಲದ್ದರಿಂದ ಸಂಸ್ಥೆಯಲ್ಲಿ ಗೊಂದಲವೆದ್ದಿದೆಂದು ಎ.ಐ.ಸಿ.ಸಿ. ಸಭೆಯಲ್ಲಿ ಚರ್ಚೆಯಾಗುತ್ತಿದ್ದಾಗ ನೆಹರೂರವರು ನಡುವೆ ಎದ್ದು ಭಾಷಣ ಮಾಡುತ್ತಾ "ಕಾಂಗ್ರೆಸ್ ಬ್ರಾಂಡ್" ಸಮಾಜವಾದದ ವೈಶಿಷ್ಟ್ಯವನ್ನು ಹೊಗಳಿ ಅದು ಕಮ್ಯೂನಿಸ್ಟ್ ಸಿದ್ಧಾಂತಗಳಂತೆ ಜಡವಲ್ಲವೆಂದು ಹೇಳಿ ಯುಗೋಸ್ಲಾವಿಯದ ಘಟನೆಯನ್ನೂ ತೋರಿಸಿದ್ದಾರೆ. ಕಾಂಗ್ರೆಸ್ಸಿಗರ ಸಮಾಜವಾದವೆಂದರೇನೆಂದು ಭಾರತದ ಜನತೆಗೆ ಸಾಕಷ್ಟು ಮನದಟ್ಟಾಗಿದೆ. ಆ ಸಮಾಜವಾದದಲ್ಲಿ ಶ್ರೀಮಂತರು ಇನ್ನೂ ಹೆಚ್ಚು ಶ್ರೀಮಂತರಾಗುವುದು, ಬಡವರು ಇನ್ನು ಹೆಚ್ಚು ಬಡವರಾಗುತ್ತಿರುವುದು ಜನತೆಯ ಅನುಭವವಾಗಿರುವುದರಿಂದ ಅದರ ಬಗ್ಗೆ ಹೆಚ್ಚೇನೂ ಹೇಳುವ ಅವಶ್ಯಕತೆ ಇಲ್ಲ.

ಕಾಂಗ್ರೆಸ್ಸಿನೊಳಗಿನ ಒಳಜಗಳ, ಗುಂಪು ರಾಜಕೀಯ, ಅಧಿಕಾರ ಲಾಲಸೆ, ಸ್ವಾರ್ಥಗಳಿಂದ ಬಹಳವಾಗಿ ನೊಂದು ರಾಜಕೀಯ ಸನ್ಯಾಸತ್ವವನ್ನೇ, ತಾತ್ಕಾಲಿಕವಾಗಿಯಾದರೂ, ಸ್ವೀಕರಿಸಬೇಕೆಂದಿದ್ದ ಪಂಡಿತ್ ನೆಹರೂರವರು ಕಮ್ಯೂನಿಸ್ಟ್ ಪಕ್ಷಗಳನ್ನು ತೆಗಳುವುದರಲ್ಲಿ ಮಾತ್ರ ಏನೂ ಹಿಂಜರಿಯಲಿಲ್ಲ. ಬಹುಶಃ ಅವರನ್ನು ಪೀಡಿಸುತ್ತಿರುವ ತೀವ್ರ ಮನೋವ್ಯಥೆಯಿಂದಾಗಿ, ವಿಚಾರ ಶಕ್ತಿಯು ಸ್ವಲ್ಪ ಮಂದಾಗಿದ್ದರಿಂದಲೇ ಕಮ್ಯೂನಿಸ್ಟರನ್ನು ಟೀಕಿಸಿದ್ದರೂ ಇರಬಹುದು. ಇತ್ತೀಚೆಗೆ ಕಮ್ಯೂನಿಸ್ಟ್ ಪಾರ್ಟಿಯ ಪ್ರಭಾವವು ತೀವ್ರ ಬೆಳೆಯುತ್ತಿದ್ದು, ಅಮೃತಸರ ಅಧಿವೇಶನದಲ್ಲಾದ ತೀರ್ಮಾನಗಳಿಂದ ಇನ್ನು ಹೆಚ್ಚಿನ ಜನ ವಿಭಾಗಗಳ ಮೇಲೆ ಪರಿಣಾಮಕಾರಿಯಾದ ಪ್ರಭಾವ ಬೀರಿ ಕಮ್ಯೂನಿಸ್ಟ್ ಪಾರ್ಟಿ ಮುಂದುವರಿಯುತ್ತಿರುವುದನ್ನು ಸಹಿಸಲಾರದೆ ಒಳಜಗಳದಲ್ಲಿ ತೊಳಲಾಡುತ್ತಿರುವ ನಿರಾಶಾಮಗ್ನರಾದ ಕಾಂಗ್ರೆಸ್ಸಿಗರಿಗೆ ಸ್ವಲ್ಪವಾದರೂ ಕುತೂಹಲ ಕೆರಳಿಸುವ ಉದ್ದಿಶ್ಯದಿಂದ ನೆಹರೂ ಮಾತಾಡಿರಬಹುದು. ಆದರೆ ಅದು ಹುರುಳಿಲ್ಲದ ಆರೋಪವಾಗಿದೆ. ಅವರ ಆರೋಪ ಹೊಸದೇನಲ್ಲ. ಭಾರತ ಕಮ್ಯೂನಿಸ್ಟರು ಇತರರನ್ನು ಯಾಂತ್ರಿಕವಾಗಿ ಅನುಸರಿಸುವವರೆಂದೂ, ವಿದೇಶಗಳ ಗುಲಾಮರೆಂದೂ ಆರೋಪವನ್ನು ದೀರ್ಘಕಾಲದಿಂದ ಕೇಳುತ್ತಿದ್ದೇವೆ. ನೆಹರೂರವರ ಆರೋಪದ ರಾಗ ಹಳೆದ್ದು, ಧಾಟಿ ಮಾತ್ರ ಹೊಸತಾಗಿರಬಹುದು.

ಯುಗೋಸ್ಲಾವಿಯ ಕಮ್ಯೂನಿಸ್ಟ್ ಲೀಗ್‌ಗೆ ಎರಡು ಸಂದೇಶ ಕಳಿಸಲು ಕಾರಣವೇನೆಂಬುದನ್ನು ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಕಚೇರಿಯು ಸ್ಪಷ್ಟೀಕರಣ ಮಾಡಿದೆ. ಮಾರ್ಚ್ 19 ರಂದು ಕಮ್ಯೂನಿಸ್ಟ್ ಲೀಗಿನ ಅಧಿವೇಶನಕ್ಕೆ ಶುಭ ಸಂದೇಶವನ್ನು ಕಳಿಸಲಾಗಿತ್ತು. ಆಗ ಅವರ ಕರಡು ಕಾರ್ಯಕ್ರಮ ಪ್ರಕಟವಾಗಿರಲಿಲ್ಲ. ನಂತರ ಪ್ರಕಟಿಸಲ್ಪಟ್ಟ ಕರಡು ಹೊಸ ಕಾರ್ಯಕ್ರಮದಲ್ಲಿ ನಾವು ಒಪ್ಪಲಾರದ ಹಲವು ಅಂಶಗಳಿದ್ದರಿಂದ ಅದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಕಳಿಸಲಾಗಿತ್ತು. ಇದರಲ್ಲಿ ಯಾವ ತಪ್ಪಿದೆ? ಇದು ಇತರರ ಪ್ರೇರಣೆಯಿಂದಾಗಿದೆಂದು ಹೇಳುವುದು ನಿರಾಧಾರವಾಗಿದೆ. ರಷ್ಯ ಮತ್ತಿತರ ಪಕ್ಷಗಳೂ ಈ ಕಾರ್ಯಕ್ರಮವನ್ನು ಟೀಕೆ ಮಾಡಿವೆ. ಕಮ್ಯೂನಿಸ್ಟ್ ಲೀಗಿನ ಕರಡು ಕಾರ್ಯಕ್ರಮ ಮಾರ್ಕ್ಸ್ ಸಿದ್ಧಾಂತಕ್ಕೂ, ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಅನುಭವಕ್ಕೂ ವಿರೋಧವಾಗಿದ್ದರಿಂದ ಇತರ ಕಮ್ಯೂನಿಸ್ಟ್ ಪಕ್ಷಗಳು ಟೀಕಿಸಿರುತ್ತವೆ. ಮಾರ್ಕ್ಸ್‌ವಾದವನ್ನವಲಂಬಿಸುವ ಭಾರತ ಕಮ್ಯೂನಿಸ್ಟ್ ಪಾರ್ಟಿಯು ಕೆಲವರ ಮನವೊಲಿಸಲು ತನ್ನ ಮೂಲಭೂತ ಧೋರಣೆಯನ್ನು ಕೈ ಬಿಡಲು ತಯಾರಿಲ್ಲ. ಅದು ಯಾರ ಪ್ರಚೋದನೆಗೂ ಬಲಿ ಬೀಳಲಿಕ್ಕಿಲ್ಲ.

ಯುಗೋಸ್ಲಾವಿಯ ಕಮ್ಯೂನಿಸ್ಟ್ ಲೀಗಿನ ಕಾರ್ಯಕ್ರಮದಲ್ಲಿ ಹಲವು ಸರಿಯಾದ ಅಂಶಗಳಿದ್ದರೂ, ಅದರಲ್ಲಿ ನಮೂದಿಸಿದ ಕೆಲ ವಿಚಾರಗಳು ಮಾರ್ಕ್ಸ್–ಲೆನಿನ್ ಸಿದ್ಧಾಂತಕ್ಕೆ ವಿರೋಧವಾಗಿವೆ ಮತ್ತು ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ತತ್ವ ಮತ್ತು ನೀತಿಗೆ ವಿರೋಧವಾಗಿವೆ. ಮುಖ್ಯವಾಗಿ ಸದ್ಯದ ಅಂತರರಾಷ್ಟ್ರೀಯ ಪರಿಸ್ಥಿತಿಯ ವಿಮರ್ಶೆ, ಎರಡು ಪ್ರಪಂಚ ಸಮಾಜ ವ್ಯವಸ್ಥೆ, ರಷ್ಯಾ ಮತ್ತಿತರ ಕಮ್ಯೂನಿಸ್ಟ್ ರಾಷ್ಟ್ರಗಳ ಅನುಭವ, ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆ, ಸಮಾಜವಾದಿ ರಾಷ್ಟ್ರಗಳೊಳಗಿನ ಪರಸ್ಪರ ಸಂಬಂಧ ಮುಂತಾದ ಪ್ರಶ್ನೆಗಳ ಬಗ್ಗೆ ತಪ್ಪು ಅಭಿಪ್ರಾಯಗಳು ಲೀಗಿನ ಕಾರ್ಯಕ್ರಮದಲ್ಲಿವೆ. ಅನೇಕ ಅಂಶಗಳ ಬಗ್ಗೆ ಕಳೆದ ನವಂಬರ್ ತಿಂಗಳಲ್ಲಿ ವಿಶ್ವದ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಹೊರಡಿಸಿದ್ದ ಸಂಯುಕ್ತ ಘೋಷಣೆಗೆ ವಿರುದ್ಧವಾದ ಅಭಿಪ್ರಾಯಗಳು ಯುಗೋಸ್ಲಾವಿಯದ ಲೀಗಿನ ಕಾರ್ಯಕ್ರಮದಲ್ಲಿವೆ.

ಕಮ್ಯೂನಿಸ್ಟ್ ಲೀಗಿನ ಕಾರ್ಯಕ್ರಮದಲ್ಲಿ ಆಧುನಿಕ ಬಂಡವಾಳಶಾಹಿ ಸಮಾಜದ ಬಗ್ಗೆ ಮತ್ತು ಅದು ಸಮಾಜವಾದಕ್ಕೆ ಬದಲಾವಣೆಯಾಗುವುದರ ಬಗ್ಗೆ ಹೆಚ್ಚು ಗಮನ ಕೊಡಲಾಗಿದೆ. ಅವರ ಅಭಿಪ್ರಾಯದಲ್ಲಿ ಕ್ರಾಂತಿಕಾರೀ ಸಮಾಜವಾದಿ ಬದಲಾವಣೆಯ ಜೊತೆಗೆ ಬಂಡವಾಳಶಾಹಿಯು ಸಮಾಜವಾದಕ್ಕೆ ವಿಕಾಸ ಹೊಂದುವ ಬದಲಾವಣೆಯೂ ಆಗುತ್ತಿದೆಂದು ಹೇಳಿದ್ದಾರೆ. ಸಮಾಜವಾದಿ ಸಮಾಜವು ವಿಕಾಸ ಗೊಳ್ಳುವುದೆಂಬುದನ್ನು ಸಿದ್ಧಪಡಿಸಲು ಮಾರ್ಕ್ಸ್ ಸಿದ್ಧಾಂತಕ್ಕೆ ವಿರೋಧವಾದ ಕಾರಣಗಳನ್ನು ಕೊಡಲಾಗಿದೆ. ಆಧುನಿಕ ಬಂಡವಾಳಶಾಹಿ ಸಮಾಜದಲ್ಲಿ ಬಂಡವಾಳಶಾಹಿ ರಾಜ್ಯದ ಹಿಡಿತ ಬಲಗೊಳ್ಳುವುದೆಂದು ಹೇಳುವುದರಲ್ಲೇನೂ ತಪ್ಪಿಲ್ಲ. ಆದರೆ ಗುತ್ತೇದಾರಿ ಬಂಡವಾಳಶಾಹಿಗೂ ರಾಜ್ಯಕ್ಕೂ ಇರುವ ಸಂಬಂಧದ ನಿರೂಪಣೆಯಲ್ಲಿ ಲೀಗಿನ ಕಾರ್ಯಕ್ರಮ ತಪ್ಪು ಮಾಡಿದೆ.

ರಾಜ್ಯ (ಸರಕಾರ) ದ ಹಿಡಿತದಿಂದ ಗುತ್ತೇದಾರಿ ಬಂಡವಾಳಶಾಹಿಯ ಅಧಿಕಾರ ವ್ಯಾಪ್ತಿ ಕುಂಠಿತವಾಗುತ್ತದೆಂದು ಕಾರ್ಯಕ್ರಮದಲ್ಲಿ ಹೇಳಿರುವುದು ವಾಸ್ತವಾಂಶಕ್ಕೆ ವಿರುದ್ಧವಾಗಿದೆ. ಕೆಲವು ಕೈಗಾರಿಕಾ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಿದ್ದರಿಂದ ಬ್ರಿಟನ್‌ನಲ್ಲಾಗಲಿ ಇಟಲಿ, ಫ್ರಾನ್ಸ್‌ಗಳಲ್ಲಾಗಲಿ ಗುತ್ತೆದಾರಿ ಬಂಡವಾಳಶಾಹಿಯ ಆರ್ಥಿಕ ಅಧಿಕಾರದ ಮೂಲಕ್ಕೇನೂ ಧಕ್ಕೆ ತಗಲಲಿಲ್ಲ. ತಾಂತ್ರಿಕವಾಗಿ ಹಿಂದುಳಿದ ಮತ್ತು ಹೆಚ್ಚು ಲಾಭದಾಯಕವಲ್ಲದ ಕೈಗಾರಿಕೆಗಳಿಂದ ಬಂಡವಾಳಶಾಹಿಯನ್ನು ಅದು ವಿಮುಕ್ತಗೊಳಿಸಿದೆಯಷ್ಟೆ. ಅದರ ಹೊರೆಯನ್ನು ತೆರಿಗೆ ಕೊಡುವ ಜನ ಸಮುದಾಯದ ಮೇಲೆ ಹಾಕಿ ಬಂಡವಾಳಶಾಹಿಗಳು ಹೆಚ್ಚು ಲಾಭ ಬರುವ ಕೈಗಾರಿಕೆಗಳಲ್ಲಿ ತಮ್ಮ ಬಂಡವಾಳವನ್ನು ಹಾಕಲು ಅವಕಾಶ ಕಲ್ಪಿಸಿದೆ ಅಗ್ಗದರದಲ್ಲಿ ರಾಷ್ಟ್ರೀಕೃತ ಕೈಗಾರಿಕೆಗಳಿಂದ ಕಲ್ಲಿದ್ದಲು, ವಿದ್ಯುತ್ ಶಕ್ತಿ ಮುಂತಾದುವುಗಳು ಬಂಡವಾಳಗಾರರಿಗೆ ದೊರೆಯುವಂತಾಗಿದೆ ಇದು ಸ್ಟೇಟ್ ಮೊನೊಪೊಲಿಸ್ಟ್ ಕಪಿಟಲಿಸಂ (ರಾಜ್ಯ–ಗುತ್ತೇದಾರಿ ಬಂಡವಾಳಶಾಹಿ) ಆಗಿದ್ದು ಇದರಿಂದ ಗುತ್ತೇದಾರಿ ಬೆಳೆಯುವುದು; ಅವರ ಕೈಯಲ್ಲೇ ಇನ್ನು ಹೆಚ್ಚು ಆರ್ಥಿಕ ಮತ್ತು ರಾಜಕೀಯ ಅಧಿಕಾರ ಕೇಂದ್ರೀಕೃತವಾಗುವುದು; ಇದರಿಂದ ಕಾರ್ಮಿಕ ಹಿತಕ್ಕೆ ಧಕ್ಕೆ ತಗಲುವುದು. ಲೀಗಿನ ಕಾರ್ಯಕ್ರಮದ ಅಭಿಪ್ರಾಯದಲ್ಲಿ ರಾಜ್ಯವು ವರ್ಗೋತ್ತರ ಸಂಘಟನೆಯಾಗಿದ್ದು ಬಂಡವಾಳಶಾಹಿ ಸಮಾಜದ ಬಂಡವಾಳ ಮತ್ತು ಕಾರ್ಮಿಕ ವಿರೋಧಿ ವರ್ಗಗಳಿಂದ ಬೇರೆಯಾಗಿರುತ್ತದೆ.

ಬಂಡವಾಳಶಾಹಿ ರಾಜ್ಯ ಕಾರ್ಮಿಕ ವರ್ಗ ಹಕ್ಕನ್ನು ಮೊಟಕು ಮಾಡುತ್ತಿರುವುದರಲ್ಲಿ ಸಂಶಯವಿಲ್ಲ. ಆದರೆ ಅದು ಗುತ್ತೇದಾರಿ ಬಂಡವಾಳಶಾಹಿಗೇನಾದರೂ ಧಕ್ಕೆ ತರುತ್ತದೆಂಬುದಕ್ಕೆ ಯಾವ ಆಧಾರವೂ ಇಲ್ಲ. ಅದು ಸಣ್ಣ ಅಥವಾ ಮಧ್ಯವರ್ಗದ ಬಂಡವಾಳಶಾಹಿಗಳ ವಿರುದ್ಧ ಹೋಗಿ ಹಿರಿ ಬಂಡವಾಳಶಾಹಿಗಳ ಹಿತಕ್ಕೆ ಅನುಕೂಲ ಮಾಡಬಹುದು. ಅಥವಾ ಕೆಲವು ಕೈಗಾರಿಕೆಗಳ ಮೇಲೆ ನಿಯಂತ್ರಣ ತರಬಹುದಾದರೂ ಒಟ್ಟಿನಲ್ಲಿ ಗುತ್ತೇದಾರಿ ಬಂಡವಾಳಶಾಹಿಗಳ ಹಿತರಕ್ಷಣೆ ಮಾಡುತ್ತದೆ.

ಕಾರ್ಮಿಕ ವರ್ಗದ ಪಾತ್ರದ ಬಗ್ಗೆಯೂ ತಪ್ಪು ಅಭಿಪ್ರಾಯಗಳು ಅದರಲ್ಲಿವೆ. ಬಂಡಪಾಳ ಶಾಹಿ ಸಮಾಜವಾದಲ್ಲಿರುವ "ಸಮಾಜವಾದಿ ಗುಣ" ಗಳನ್ನು ಬೆಳೆಸುವುದರಿಂದ ಸಮಾಜವಾದ ಪದ್ಧತಿ ಬರಬಹುದೆಂದು ಸೂಚಿಸಿದೆ. "ಕಾರ್ಮಿಕ ವರ್ಗದ ರಾಜಕೀಯ ಚಟುವಟಿಕೆಗಳನ್ನು ಬಲಪಡಿಸುವುದರಿಂದ ಸಮಾಜವಾದ ವಿಕಾಸಗೊಳ್ಳುವುದೆಂದು" ಹೇಳಿ ಈ ಚಟುವಟಿಕೆಗಳೆಂದರೆ "ಸರಕಾರಿ ಯಂತ್ರದಲ್ಲಿ ಮುಖ್ಯ ಪಾತ್ರವಹಿಸಲು ಹೋರಾಡುವುದೆಂದ," ತಿಳಿಸಿದೆ.

ಸಮಾಜವಾದ ಸ್ಥಾಪನೆಯಾಗಲು ಕಾರ್ಮಿಕವರ್ಗ, ಅದರ ಮುಂದಳವ ನಾಯಕತ್ವದಲ್ಲಿ ರಾಜ್ಯಾಧಿಕಾರವನ್ನು ವಶಪಡಿಸಕೊಂಡು, ಕಾರ್ಮಿಕವರ್ಗದ ರಾಜಕೀಯ ಅಧಿಕಾರ ಸ್ಥಾಪಿಸಿ, ಯಾವುದೇ ರೂಪದಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರ ಸ್ಥಾಪಿಸಿ ಅದರ ಮೂಲಕ ಉತ್ಪಾದನಾ ಶಕ್ತಿಗಳನ್ನು ರಾಷ್ಟ್ರೀಕರಣಮಾಡಿ, ಸಮಾಜವಾದೀ ಬದಲಾವಣೆಯನ್ನು ತರಲು ಸಾಧ್ಯವೆಂಬುದನ್ನು ನಮ್ಮ ಚರಿತ್ರೆಯ ಅನುಭವ ಮತ್ತು ಮಾರ್ಕ್ಸ್–ಲೆನಿನ್ ಸಿದ್ಧಾಂತದ ಆಧಾರದ ಮೇಲೆ ಆಧುನಿಕ ಸಮಾಜದ ಬೆಳವಣಿಗೆ ತೋರಿಸಿದೆ.

ಸಮಾಜವಾದಿ ಬದಲಾವಣೆಯು, ಆಯಾ ದೇಶದ ಪರಿಸ್ಥಿತಿಗನುಗುಣವಾಗಿ, ಒತ್ತಾಯ ಪೂರ್ವಕವಾಗಿಯಾಗಲಿ ಅಥವಾ ಶಾಂತಿಯುತವಾಗಲಿ ಆಗಬಹುದು. ಆದರೆ ಶಾಂತಿಯುತ ಬದಲಾವಣೆಯು ಸಹ ಕ್ರಾಂತಿಕಾರಿಯಾಗಿಯೇ ಆಗಿರುವುದು. ಯುಗೋಸ್ಲಾವಿಯ ನಾಯಕರು ಹಿಂಸಾಯುತ ಅಥವಾ ಶಾಂತಿಯುತ ಕ್ರಾಂತಿಯ ಬಗ್ಗೆ ಹೇಳುತ್ತಿಲ್ಲ. ಅವರು ಕ್ರಾಂತಿಕಾರಿ ಬದಲಾವಣೆಯ ಬದಲು "ವಿಕಾಸಿಕ" ಅಥವಾ ನಿಧಾನ ಬೆಳವಣಿಗೆಯಾಗುವ (ಇದು ಕ್ರಾಂತಿಕಾರಿಯಲ್ಲ) ಮಾರ್ಗವನ್ನು ಉಲ್ಲೇಖಿಸಿದ್ದಾರೆ.

ಕಾರ್ಮಿಕ ವರ್ಗ ಈ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ಮಾಡಿ ಸಮಾಜವಾದಿ ಸಮಾಜ ಸ್ಥಾಪಿಸಬೇಕಾದರೆ ಮಾರ್ಕ್ಸ್–ಲೆನಿನ್‌ವಾದಿ ಪಕ್ಷದ ನಾಯಕತ್ವದಿಂದಲೇ ಸಾಧ್ಯ. ಆದರೆ ಯುಗೋಸ್ಲಾವಿಯದ ನಾಯಕರು ಪಾರ್ಟಿಯ ನಾಯಕತ್ವವನ್ನು ಅಲ್ಲಗಳೆದಿದ್ದಾರೆ. ಕ್ರಾಂತಿಕಾರಿ ಧೋರಣೆಯನ್ನು ತಿರಸ್ಕರಿಸಿದ್ದ ಪರಿಣಾಮವಿದು.

ಅಂತರರಾಷ್ಟ್ರೀಯ ಪರಿಸ್ಥಿತಿಯ ವಿಷಯದಲ್ಲಿ ಅವರು ದೊಡ್ಡ ತಪ್ಪುಮಾಡಿದ್ದಾ

(೯ನೇ ಪುಟ ನೋಡಿ)

ಸೋವಿಯೆತ್ ನಾಡಿನ ಪತ್ರಿಕೋತ್ಸವ ದಿನ

— ಪಾವೆಲ್ ಕೊಷೆಲೇವ್, ಪತ್ರಿಕೋದ್ಯಮಿ —

ಪ್ರತಿವರ್ಷವೂ ಮೇ ದಿನಾಂಕ ೫ರಂದು ಸೋವಿಯತ್ ಜನತೆಯು ಪತ್ರಿಕೋತ್ಸವ ದಿನವನ್ನಾಚರಿಸುತ್ತಾರೆ. ಅದು ವಾಸ್ತವವಾಗಿಯೂ ಬೋಲ್ಷೆವಿಕ್ "ಪ್ರಾವ್ದಾ" (ಸತ್ಯ) ಪತ್ರಿಕೆಯ ಜನ್ಮದಿನೋತ್ಸವ. ೪೩ ವರ್ಷಗಳ ಹಿಂದೆ ಆ ದಿನದಂದು, ಈ ಸಾಮುದಾಯಿಕ ಕಾರ್ಮಿಕರ ವೃತ್ತ ಪತ್ರಿಕೆಯು,—ವಿ. ಐ. ಲೆನಿನ್‌ರವರ ಉಪಕ್ರಮ ಸೂಚನೆಯ ಪ್ರಕಾರ,—ರಶಿಯದಲ್ಲಿ ಪ್ರಕಟವಾಗಲು ಪ್ರಾರಂಭವಾಯಿತು.

ಕ್ರೂರ ಜಾರ್-ವಾದೀ ಆಡಳಿತದ ಪರಿಸ್ಥಿತಿಗಳಲ್ಲಿ ಸಮರಶೀಲ ಕ್ರಾಂತಿಕಾರೀ ಮುಖಪತ್ರದ ಉದ್ಭವವು, ಕಾರ್ಮಿಕ ಜನತೆಗೆ ನಿಜವಾದ ಉತ್ಸವ ದಿನವಾಗಿದ್ದಿತು. ಕಾರ್ಮಿಕರು ತಮ್ಮ ಪತ್ರಿಕೆಯನ್ನು ಪ್ರೀತಿಸುತ್ತಿದ್ದರು, ತಮ್ಮ ಜೀವನದ ವಿಷಯವಾಗಿಯೂ, ವಿಪ್ಲವಕಾರೀ ಹೋರಾಟದ ಬಗ್ಗೆಯೂ ಆದರಲ್ಲಿ ಅವರು ಬರೆಯುತ್ತಿದ್ದರು; ಮುದ್ರಣಾಲಯದ ಮತ್ತು ಸಂಪಾದಕ ಮಂಡಲದ ನಿರ್ವಹಣೆಯ ಸಲುವಾಗಿ ನಿಧಿಗಳನ್ನು ಕೂಡಿಸಿ ಅವರು ಆರ್ಥಿಕ ಬೆಂಬಲವನ್ನು ಪತ್ರಿಕೆಗೆ ನೀಡುತ್ತಿದ್ದರು. ಹಳ್ಳಿಗಳೊಂದಿಗೆ ಸಂಬಂಧವನ್ನು ಹೊಂದಿದ್ದ ಕಾರ್ಮಿಕರ ಮುಖಾಂತರ ಪತ್ರಿಕೆಯು ರೈತರಿಗೂ ಕೂಡ ತಲುಪಿ ಅವರ ಆತ್ಮಸಾಕ್ಷಿಯನ್ನು ರೂಪಿಸಿ, ಜಾರ್‌ವಾದದ ವಿರೋಧವಾಗಿ ಹೋರಾಟಕ್ಕಾಗಿ ಅವರಿಗೆ ಸ್ಫೂರ್ತಿಯನ್ನು ನೀಡುತ್ತಿದ್ದಿತು.

ಈಗ 'ಪ್ರಾವ್ದಾ' ಪತ್ರಿಕೆಯ ಧ್ವನಿಯು (ರಶಿಯನ್ ಭಾಷೆಯಲ್ಲಿ 'ಪ್ರಾವ್ದಾ' ಎಂದರೆ 'ಸತ್ಯ' ಎಂದರ್ಥ) ಪ್ರಪಂಚದ ಮೇಲೆಲ್ಲೆಡೆಯೂ ಅನುರಣಿಸುತ್ತಿದೆ. ಸಣ್ಣದಾಗಿದ್ದ ಕಾರ್ಮಿಕರ ಪತ್ರಿಕೆಯು, ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಸಮರಶೀಲ ಮುಖಪತ್ರವಾಗಿ ಮಾರ್ಪಟ್ಟಿದೆ ಪ್ರತಿದಿನವೂ ಈ ಅಧಿಕೃತ ಪತ್ರಿಕೆಯ ೫೫ ಲಕ್ಷ ಪ್ರತಿಗಳು ಸೋವಿಯತ್ ಜನತೆಗೆ ಸತ್ಯವನ್ನು ತಂದು ಮುಟ್ಟಿಸುತ್ತವೆ.

ಸೋವಿಯೆತ್ ಕಾಲಾವಧಿಯ ವರ್ಷಗಳಲ್ಲಿ ಸೋವಿಯೆತ್ ನಾಡಿನ ಪತ್ರಿಕಾ ಪ್ರಪಂಚವು ಮಹತ್ತರ ಶಕ್ತಿಯಾಗಿ ವಿಕಾಸಗೊಂಡಿದೆ. ೬೦ ಭಾಷೆಗಳಲ್ಲಿ ೭,೫೦೦ ಕ್ಕಿಂತಲೂ ಹೆಚ್ಚು ವಾರ್ತಾ ಪತ್ರಿಕೆಗಳು ಪ್ರಕಟವಾಗುತ್ತಿದ್ದುವು, ಅವು ಇಂದು ಸೋವಿಯೆತ್ ಒಕ್ಕೂಟದಲ್ಲಿ ಪ್ರತಿದಿನವೂ ೫೩೦ ಲಕ್ಷ ಪ್ರತಿಗಳ ಪ್ರಸಾರವನ್ನು ಹೊಂದಿವೆ. ಈ ಕೇಂದ್ರೀಯ ಪತ್ರಿಕೆಗಳಲ್ಲದೆ, ಅನೇಕ ಪ್ರಜಾತಂತ್ರೀಯ, ಪ್ರಾದೇಶಿಕ, ಪ್ರಾಂತೀಯ ಮತ್ತು ಜಿಲ್ಲಾ ವಾರ್ತಾ ಪತ್ರಿಕೆಗಳೂ, ಬಹುಸಂಖ್ಯೆಯಲ್ಲಿ ಕಾರಖಾನೆಗಳ ಮತ್ತು ಗೋಡೆಗಳ ವಾರ್ತಾ ಪತ್ರಿಕೆಗಳೂ ಇಲ್ಲಿ ಪ್ರಕಟವಾಗುತ್ತವೆ. ಮಕ್ಕಳು, ಎಳೆಯ ಜನರು, ಸಾಹಿತ್ಯ—ಕಲಾ ಕ್ಷೇತ್ರಗಳ ಕಾರ್ಯಕರ್ತರು, ಸಾರ್ವಜನಿಕ ವಿದ್ಯಾಭ್ಯಾಸದ ಮತ್ತು ವೈದ್ಯಶಾಖೆಯ ಕಾರ್ಯಕರ್ತರು—ಇವರಿಗಾಗಿ ವಿಶಿಷ್ಟ ವರ್ತಮಾನ ಪತ್ರಿಕೆಗಳಿವೆ. ಕೃಷಿ ಕಾರ್ಮಿಕರು, ರೈಲ್ವೆ ಕೆಲಸಗಾರರು, ನಾವಿಕರು, ವಾಣಿಜ್ಯ ವೃತ್ತಿ ಕಾರ್ಮಿಕರು, ಇತ್ಯಾದಿ ಕಾರ್ಮಿಕರ ಸಲುವಾಗಿಯೂ ಕೂಡ ವಾರ್ತಾ ಪತ್ರಿಕೆಗಳಿವೆ. ಇದು ನೈಜವಾದ ಜನತಾ ಪತ್ರಿಕಾ ಪ್ರಪಂಚ, ಬಂಡವಾಳವಾದೀ ಪತ್ರಿಕಾ ಪ್ರಪಂಚದಿಂದ ತೀರಾ ಭಿನ್ನವಾಗಿದೆ, ಆದರ ಪ್ರಗಾಢ ತಾತ್ವಿಕ ತಿರುಳಿಗಾಗಿಯೂ, ಸೂತ್ರಬದ್ಧ ದೃಕ್ಪಥ, ಸತ್ಯತೆ ಮತ್ತು ಜನತೆಯೊಡನೆಯ ಸನ್ನಿಹಿತ ಸಂಬಂಧ—ಇವುಗಳಿಗಾಗಿ, ಈ ಪತ್ರಿಕೆಗಳು ಎದ್ದು ಕಾಣುತ್ತವೆ. ಕಮ್ಯೂನಿಸ್ಟ್ ಪಾರ್ಟಿಯು ಪತ್ರಿಕಾ ಪ್ರಪಂಚವನ್ನು,-ಜನಸಮುದಾಯಗಳಿಗೆ ಶಿಕ್ಷಣ ನೀಡುವ, ನವಜೀವನ ನಿರ್ಮಾಣ ಕಾರ್ಯದಲ್ಲಿ ಅವರಿಗೆ ತರಬೇತು ನೀಡುವ ಶಕ್ತಿಯುತ ಸಾಧನವಾಗಿ ಮಾರ್ಪಡಿಸಿದೆ.

ಮಹಾ ಅಕ್ಟೋಬರ್ ಸಮಾಜವಾದೀ ಕ್ರಾಂತಿಯ ಪ್ರಪ್ರಥಮ ದಿನಗಳಿಂದಲೂ ಎಳೆಯ ಸೋವಿಯತ್ ರಾಜ್ಯವು,—ದೇಶದ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ, ಪ್ರಥಮ ವಿಶ್ವ ಯುದ್ಧದಿಂದ ಹಾಳಾಗಿದ್ದ, ಹಿಂದುಳಿದ ಆರ್ಥಿಕ ವ್ಯವಸ್ಥೆಯ, ಸಮಾಜವಾದೀ ರೂಪಾಂತರದ ಮಹತ್ತರ ಮುಖ್ಯ ಕಾರ್ಯಭಾರವನ್ನು ಎದುರಿಸಿತು, ಆದುದರಿಂದಲೇ ರಚನಾತ್ಮಕ ಶ್ರಮದ ವಿಷಯವು, ಸಮಾಜವಾದದ ನಿರ್ಮಾತೃಗಳ ಆರ್ಥಿಕ ಶಿಕ್ಷಣದ ವಿಷಯವು, ಸೋವಿಯೆತ್ ವರ್ತಮಾನ ಪತ್ರಿಕೆಗಳ ಮುಖ್ಯ ವಿಷಯಗಳಲ್ಲೊಂದಾಗಿದ್ದಿತು,

ಸೋವಿಯೆತ್ ಪರಿಸ್ಥಿತಿಗಳಲ್ಲಿ ವರ್ತಮಾನ ಪತ್ರಿಕೆಯು, ನೂತನ ಜೀವನದ ಸಲುವಾಗಿ ಹೋರಾಟ ನಡೆಸುತ್ತಿರುವ ಕಾರ್ಮಿಕ ಜನತೆಗೆ ಸಾಮುದಾಯಿಕ ಪ್ರಚಾರ ಸಾಧನವಾಗಿಯೂ, ಸಂಘಟಕ ಶಕ್ತಿಯಾಗಿಯೂ ಇದ್ದಿತು, ಇದು ಕಠಿಣ, ಜಟಿಲ ಸಂಘರ್ಷವಾಗಿತ್ತು. ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಪುನಸ್ಥಾಪನೆಯ ಹಿಂಬದಿಯಲ್ಲಿಯೇ ಔದ್ಯೋಗೀಕರಣದ ಮಹತ್ತರ ಕಾರ್ಯ ಪ್ರಾರಂಭವಾಯಿತು. ನಾಲ್ಕನೆಯ ದಶಕದ ಆದಿಭಾಗದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು, ವ್ಯವಸಾಯದ ಸಾಮುದಾಯಿಕ ಸಾಮೂಹಿಕೀಕರಣಕ್ಕಾಗಿ ರೈತರನ್ನು ಹುರಿದುಂಬಿಸಿತು. ಇದನ್ನನುಸರಿಸಿಯೇ, ಕಾರಖಾನೆಗಳಲ್ಲಿಯೂ, ಯಂತ್ರಸ್ಥಾವರಗಳಲ್ಲಿಯೂ ಸಮಾಜವಾದೀ ಸ್ಪರ್ಧೆಯು ಪ್ರಾರಂಭವಾಯಿತು. ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ವಿಕಾಸದ ಸಲುವಾಗಿ ಸಿದ್ಧಗೊಳಿಸಲಾದ ಪಂಚವಾರ್ಷಿಕ ಯೋಜನೆಗಳನ್ನು ನಿಯತ ಕಾಲಕ್ಕೆ ಮೊದಲೇ ಈಡೇರಿಸಲು, ಕಾರಖಾನೆಗಳಲ್ಲಿಯೂ, ಸಾಮುದಾಯಿಕ ಹಾಗೂ ರಾಜ್ಯ ಕೃಷಿಕ್ಷೇತ್ರಗಳಲ್ಲಿಯೂ, ಯಂತ್ರ ಉಳುಮೆ ಯಂತ್ರ—ನಿಲ್ದಾಣಗಳಲ್ಲಿಯೂ ಸಮಾಜವಾದೀ ಸ್ಪರ್ಧೆ ಪ್ರಾರಂಭವಾಯಿತು.

ಪ್ರತಿಯೊಂದು ಕಡೆಯೂ, ಸಮಾಜವಾದದ ನಿರ್ಮಾಣದ ಎಲ್ಲ ಘಟ್ಟಗಳಲ್ಲಿಯೂ, ಪತ್ರಿಕೆಗಳು ಮುಂಚೂಣಿಯಲ್ಲಿಯೇ ಇದ್ದುವು, ಹೊಸ ಕಾರಖಾನೆಗಳ, ಯಂತ್ರ ಸ್ಥಾವರಗಳ ನಿರ್ಮಾಣದ ಪ್ರಗತಿಯನ್ನು ವರ್ತಮಾನ ಪತ್ರಿಕೆಗಳು ಚೆನ್ನಾಗಿ ವಿವರಿಸಿದುವು, ಸಾಮುದಾಯಿಕ ಕೃಷಿಯ ಪ್ರಯೋಜನಗಳ ಕುರಿತು ರೈತರ ಮನವೊಪ್ಪಿಸಿದುವು, ಸಮಾಜವಾದೀ ಸ್ಪರ್ಧೆಗೆ ಉತ್ತೇಜನವನ್ನಿತ್ತುವು ಮತ್ತು ಸಾಮಾನ್ಯ ಸೋವಿಯತ್ ಮನುಷ್ಯನ ಜೀವನವನ್ನು ಸುಧಾರಿಸುವುದಕ್ಕಾಗಿ ತಯಾರಿಸಲಾಗಿದ್ದ, ಕಮ್ಯೂನಿಸ್ಟ್ ಪಾರ್ಟಿಯ ನೀತಿಯನ್ನು, ವಾಸ್ತವ ಪೂರ್ಣವಾದ, ಸರಳ ರೀತಿಯಲ್ಲಿ ವಿವರಿಸಿದುವು.

ಸೋವಿಯೆತ್ ಪತ್ರಿಕಾ ಪ್ರಪಂಚದ ಇನ್ನೊಂದು ನಿರ್ದಿಷ್ಟ ಲಕ್ಷಣವು ಯಾವುದೆಂದರೆ, ಆದರ ಜನತಾ, ಜನಾಧಿಪತ್ಯವಾದೀ ಸ್ವರೂಪ. ಕಾರ್ಮಿಕರ ಮತ್ತು ರೈತರ ಮಧ್ಯದಿಂದ ಬರುವ ಸ್ವಯಂ ಸೇವಕ ಸುದ್ಧಿಗಾರರ ದೊಡ್ಡ ಪಡೆಗಳ ಮೇಲೆ ಅವಲಂಬಿಸದಿರುವ ಒಂದು ಪತ್ರಿಕೆಯನ್ನಾದರೂ ಸೋವಿಯೆತ್ ಒಕ್ಕೂಟದಲ್ಲಿ ಕಾಣುವುದಸಾಧ್ಯ. ಸೋವಿಯೆತ್ ರಾಜ್ಯಶಕ್ತಿಯ ಪ್ರಥಮ ವರ್ಷಗಳಲ್ಲಿ ಹುಟ್ಟಿ, ಕಾರ್ಮಿಕ ಮತ್ತು ರೈತ ಸುದ್ದಿಗಾರರ ಚಳವಳಿಯು ಬಲುಬೇಗನೆ ಸಾಮುದಾಯಿಕ ಪ್ರಮಾಣಕ್ಕೆ ಬೆಳೆಯಿತು, ಮತ್ತು ದೇಶದಲ್ಲೆಲ್ಲೆಡೆಯೂ ಹಬ್ಬಿಕೊಂಡಿತು. ಸಾವಿರಾರು ಮಂದಿ ಔದ್ಯೋಗಿಕ, ಕಚೇರಿ ಕಾರ್ಮಿಕರೂ ಮತ್ತು ರೈತರೂ, ವರ್ತಮಾನ ಪತ್ರಿಕೆಗಳ ಸಕ್ರಿಯ ಸ್ವಯಂಸೇವಕ ಸುದ್ದಿಗಾರರಾದರು, ಅವರು ತಮ್ಮ ವರದಿಗಳಲ್ಲಿ ವರ್ಗಶತ್ರುಗಳ ಒಳಸಂಚುಗಳನ್ನು ಎದೆಗಾರಿಕೆಯಿಂದ ಬಯಲಿಗಿಟ್ಟರು, ನಿರ್ಲಕ್ಷ್ಯದ ಕಾರ್ಮಿಕರನ್ನು ಟೀಕಿಸಿದರು, ನವಜೀವನದ ಲಕ್ಷಣಗಳ ಬಗ್ಗೆಯೂ, ಶ್ರಮದ ವಿಜಯಗಳ ವಿಷಯವಾಗಿಯೂ ಬರೆದರು.

ಸೋವಿಯೆತ್ ವಾರ್ತಾಪತ್ರಿಕೆಗಳಿಗೆ ಕಾರ್ಮಿಕ ಜನತೆಯಿಂದ ಬರುವ ಪತ್ರಗಳು ಸಮಾಚಾರನಿಧಿ ಮೂಲಗಳಾಗಿವೆ, ಕಾರ್ಮಿಕ ಮತ್ತು ರೈತ ಸುದ್ದಿಗಾರರು ಪತ್ರಿಕೆಗಳ ಮುಂಚೂಣಿ ಪಕ್ತಿದಾರರಾಗಿದ್ದಾರೆ. ಅವರ ಸಹಾಯದಿಂದ ವಾರ್ತಾ ಪತ್ರಿಕೆಗಳು ಉತ್ಪಾದನಾ ಸಮೀಕ್ಷೆಗಳನ್ನು, ನ್ಯೂನತೆಗಳ ಕುರಿತು, ಚರ್ಚೆಗಳನ್ನು ಕುರಿತು, ಮುಂಚೂಣಿ ಕಾರ್ಮಿಕರ ಮತ್ತು ಇಡೀ ಸಾಮುದಾಯಿಕ ಸಂಘಟನೆಗಳ ಪಟ್ಟಿ-ಪ್ರಕಟನೆಗಳನ್ನೂ ನಡೆಸುತ್ತವೆ. ಇವು ಮತ್ತು ಇನ್ನಿತರ ಕ್ರಮಗಳು,—ಔದ್ಯೋಗಿಕ ಸಂಸ್ಥೆಗಳ, ಸಾಮುದಾಯಿಕ ಮತ್ತು ರಾಜ್ಯ ಕೃಷಿಕ್ಷೇತ್ರಗಳ ಉತ್ಪಾದನಾ-ಚಟುವಟಿಕೆಗಳಲ್ಲಿ ಸಕ್ರಿಯವಾಗಿ, ಫಲಪ್ರದವಾಗಿ ಕೈಹಾಕಲು ಸೋವಿಯೆತ್ ವಾರ್ತಾ ಪತ್ರಿಕೆಗಳಿಗೆ ಸಾಧ್ಯತೆಯನ್ನು ಉಂಟು ಮಾಡುತ್ತವೆ.

ತಮ್ಮ ಸರದಿಯಲ್ಲಿ ವಾರ್ತಾಪತ್ರಿಕೆಗಳು,—ಅವುಗಳ ಕಾರ್ಮಿಕ, ರೈತ ಸುದ್ದಿಗಾರರು ಪತ್ರಿಕೋದ್ಯಮ ನಿಪುಣತೆಯನ್ನು ಪಡೆಯಲು ಅವರಿಗೆ ಸಹಾಯ ಮಾಡುತ್ತವೆ. ಅವು ಪಾಠ್ಯಕ್ರಮಗಳನ್ನೂ, ಪ್ರೌಢ ವ್ಯಾಸಂಗ ಗೋಷ್ಠಿಗಳನ್ನೂ, ಸಮ್ಮೇಲನಗಳೂ, ಮಹಾಸಭೆಗಳೂ ಅನೇಕ ಪ್ರಾಂತಗಳಲ್ಲಿ ನಡೆದಿವೆ. ಸೋವಿಯೆತ್ ಜನತೆಯು ಕಮ್ಯೂನಿಜಮ್ಮಿನ ಭೌತಿಕ, ತಾಂತ್ರಿಕ ನೆಲೆ ನಿರ್ಮಿಸುತ್ತಿದ್ದಾರೆಂಬ ವಾಸ್ತವಾಂಶಕ್ಕೆ ಸಂಬಂಧ ಪಟ್ಟಂತೆ ಪತ್ರಿಕೆಗಳ ಮುಂಬಂದಿರುವ ಅನೇಕ ಹೊಸ ಜಟಿಲ ಕಾರ್ಯಭಾರಗಳನ್ನು, ಸಂಪಾದಕ ಮಂಡಲಗಳೂ, ಸ್ವಯಂಸೇವಕ ಸುದ್ದಿಗಾರರೂ ಅಲ್ಲಿ ಚರ್ಚಿಸಿದ್ದಾರೆ.

ಸೋವಿಯೆತ್ ಪತ್ರಿಕೆಗಳೂ ಮತ್ತು ಅವುಗಳ ಕಾರ್ಮಿಕ, ರೈತ ಸುದ್ದಿಗಾರರ ಬೃಹತ್ಸೇನೆಯೂ ಕಮ್ಯೂನಿಸ್ಟ್ ಸಮಾಜ ನಿರ್ಮಾಣ ಕಾರ್ಯದಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತಿವೆ.

——

ಕೋಪೆನ್ ಹೇಗೆನ್ನಿನಲ್ಲಿ ನಡೆದ 'ನಾಟೋ' ಸಲಹಾಸಮಿತಿ ಸಭೆ

ಆಕ್ರಮಣಕಾರೀ ಉತ್ತರ ಅಟ್ಲಾಂಟಿಕ್ ಕೂಟದ ಆಲೋಚನಾ ಸಮಿತಿಯ ಸಭೆಯು ಕೋಪೆನ್‌ಹೇಗನ್ನಿನ ಕ್ರಿಸ್ತಿಯಾನ್ಸ್‌ಬೋರ್ಗ್ ಕೋಟೆಯಲ್ಲಿ ಮೇ ದಿನಾಂಕ 5ರಂದು ಪ್ರಾರಂಭವಾಯಿತು. ಈ ಸೈನಿಕ ಸೇರ್ಪಡೆಗೆ ಸೇರಿದ 15 ದೇಶಗಳ ವಿದೇಶಾಂಗ ಮಂತ್ರಿಗಳು ಇದರಲ್ಲಿ ಹಾಜರಾಗಿದ್ದರು. ಸ್ಕಾಂಡಿನೇವಿಯದ ದೇಶವೊಂದರ ರಾಜಧಾನಿಯಲ್ಲಿ ನಡೆಯುವ 'ನ್ಯಾಟೋ' ಸಭೆಗಳಲ್ಲಿ ಇದೇ ಮೊದಲನೆಯದಾಗಿದೆ.

ಈ ಸಭೆಯ ಕಾರ್ಯಕ್ರಮವನ್ನು ಬಹಿರಂಗ ಪಡಿಸಿಲ್ಲ. ಆದರೂ ಕೂಡ, 'ನ್ಯಾಟೋ' ಸದಸ್ಯ-ರಾಜ್ಯಗಳ ವಿದೇಶಾಂಗ ಮಂತ್ರಿಗಳು ಚರ್ಚಿಸದಿರುವ ಸಮಸ್ಯೆಗಳು ಯಾವುವೆಂಬ ಬಗ್ಗೆ ಪತ್ರಿಕೆಗಳದು ಏಕಾಭಿಪ್ರಾಯವಾಗಿದೆ. ಪ್ರಸ್ತುತ ಸಭೆಯ ಹಿಂದಿನ ಸಮಾವೇಶವು ೧೯೫೪ರ ಡಿಸೆಂಬರ್ ತಿಂಗಳಲ್ಲಿ ಪ್ಯಾರಿಸ್ ನಗರದಲ್ಲಿ ನಡೆಯಿತು. ಪಶ್ಚಿಮ ಯೂರೋಪಿನ ದೇಶಗಳ ಭೂಭಾಗಗಳ ಮೇಲೆ ಅಮೆರಿಕನ್ ಪರಮಾಣು-ಆಕಾಶಬಾಣ ಸ್ಥಾವರಗಳನ್ನು ನೆಲೆಗೊಳಿಸಬೇಕೆಂದು ಆ ಸಭೆಯು ಒಂದು ನಿರ್ಣಯವನ್ನು ಸ್ವೀಕರಿಸಿತು. ಈ ನಿರ್ಣಯವು ಆ ದೇಶಗಳಲ್ಲಿ ಅತ್ಯಂತ ನಕಾರಾತ್ಮಕ ಪ್ರತಿಕ್ರಿಯೆಯನುಂಟುಮಾಡಿತು. ಪ್ರಸಕ್ತ ಮೇ ಸಭೆಯು ಡಿಸೆಂಬರ್ ತಿಂಗಳ ಸಭೆಯ ಮುಂದುವರಿದ ಸಮಾವೇಶವಾಗಿದ್ದು, ಪತ್ರಿಕೆಗಳ ವರದಿಗಳಿಂದ ತಿಳಿದು ಬರುವ ಪ್ರಕಾರ,—ಪರದೇಶಗಳ ಭೂಭಾಗಗಳ ಮೇಲೆ ಪರಮಾಣು ನೆಲೆಗಳನ್ನು ಬಹಿಷ್ಕರಿಸುವುದರ ಸಲುವಾಗಿಯೂ, ಪರಮಾಣು ಅಸ್ತ್ರ ಪರೀಕ್ಷ ಪ್ರಯೋಗಗಳನ್ನು ತಕ್ಷಣವೇ ನಿಲ್ಲಿಸುವುದರ ಸಲುವಾಗಿಯೂ, ಮತ್ತು ಶೃಂಗಸಮ್ಮೇಳನವನ್ನು ನಡೆಸುವುದರ ಸಲುವಾಗಿಯೂ ಜನ ಸಮೂಹಗಳು ಮಂಡಿಸುತ್ತಿರುವ ಒತ್ತಾಯದ ಬೇಡಿಕೆಗಳಿಗೆದಿರಾಗಿ ಏನು ಮಾಡಬೇಕೆಂಬುದನ್ನು, ಅಮೆರಿಕದ ಸಂಯುಕ್ತ ರಾಜ್ಯಗಳ ಆಕ್ರಮಣಕಾರೀ ಯೋಜನೆಗಳ ಕಾರ್ಯ

(೬ನೇ ಪುಟ ನೋಡಿ)

★ ಪಾರ್ಟಿ ಸಂಘಟನೆಯ ಬಗ್ಗೆ ಅ

[ಏಪ್ರಿಲ್ 6 ರಿಂದ 13 ರವರೆಗೆ ಅಮೃತಸರದಲ್ಲಿ ನಡೆದ ಭಾರತ ಕಮ್ಯೂನಿಸ್ಟ್ ಪಕ್ಷದ ವಿಶೇಷ ಅನುಮೋದಿತವಾದ ಗೊತ್ತುವಳಿಯ ಪೂರ್ಣ ಪಾಠವನ್ನು ಇಲ್ಲಿ ಪ್ರಕಟಿಸಲಾಗಿದೆ. —ಸಂ.]

★

ಭಾರತ ಕಮ್ಯೂನಿಸ್ಟ್ ಪಾರ್ಟಿಯು ನಮ್ಮ ದೇಶದ ರಾಜಕೀಯ ಜೀವನದಲ್ಲಿ ಪ್ರಮುಖ ಶಕ್ತಿಯಾಗಿ ಬೆಳೆದು ಬಂದಿದೆ. ಪಾರ್ಲಿಮೆಂಟಿನಲ್ಲೂ ಹಾಗೂ ಬಂಗಾಳ ಮತ್ತು ಆಂಧ್ರ ಶಾಸನ ಸಭೆಗಳಲ್ಲೂ ಅದು ಪ್ರಮುಖವಾದ ವಿರೋಧ ಪಕ್ಷವಾಗಿದೆ. ಕೇರಳ ರಾಜ್ಯದಲ್ಲಿ ಅದು ಸರಕಾರವನ್ನು ನಡೆಸುತ್ತಿದೆ. ಕಾರ್ಮಿಕ ವರ್ಗದ ನಡುವೆ ಅದು ಏಕೈಕವಾದ ಬೃಹತ್ ಶಕ್ತಿಯಾಗಿದೆ. ದೇಶದ ಎಲ್ಲ ಭಾಗಗಳಲ್ಲೂ ಪಾರ್ಟಿಯ ಪ್ರಭಾವವು ಬೆಳೆಯುತ್ತಿದೆ. ಈಗ ಕೆಲವು ತಿಂಗಳುಗಳಲ್ಲಿ ಪಾರ್ಟಿ ಸದಸ್ಯತ್ವವು ದ್ವಿಗುಣಗೊಂಡಿದೆ. ಆದರೆ ಇನ್ನು ಸಹ ಪಾರ್ಟಿಯು ಸೈದ್ಧಾಂತಿಕ, ರಾಜಕೀಯ ಹಾಗೂ ಸಂಘಟನಾತ್ಮಕವಾಗಿ ಗಂಭೀರವಾದ ನ್ಯೂನತೆಗಳಿಂದ ಕೂಡಿದೆ. ಅಮೃತಸರದಲ್ಲಿ ನಡೆದ ಪಾರ್ಟಿಯ ವಿಶೇಷ ಅಧಿವೇಶನದ ಮುಂದೆ ಮಂಡಿಸಲಾದ ಸಂಘಟನಾತ್ಮಕ ವರದಿಯಲ್ಲಿ ಈ ಕೆಲವು ನ್ಯೂನತೆಗಳನ್ನು ವಿವರಿಸಲಾಗಿದೆ. ಅಧಿವೇಶನದಲ್ಲಿ ಮಾತನಾಡಿದ ಪ್ರತಿನಿಧಿಗಳು ಈ ನ್ಯೂನತೆಗಳನ್ನು ಮತ್ತು ಇತರ ಅಂಶಗಳನ್ನು ಗಮನಕ್ಕೆ ತಂದಿದ್ದಾರೆ.

ಈ ನ್ಯೂನತೆಗಳನ್ನು ತೊಡೆದು ಹಾಕದ ಹೊರತು ಪಾರ್ಟಿಯು ತನ್ನ ಮುಂದಿರುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸಲಾಗುವುದಿಲ್ಲ ಎಂಬುದು ಸರ್ವ ವಿದಿತವಾಗಿದೆ. ಆದ್ದರಿಂದಾಗಿ ಈ ನ್ಯೂನತೆಗಳನ್ನು ನಿವಾರಿಸಲು ಪಾರ್ಟಿಯನ್ನು ಬಲಗೊಳಿಸಲು ಮತ್ತು ಕಮ್ಯೂನಿಸ್ಟ್ ಪಾರ್ಟಿಯನ್ನು ಸಾಮೂಹಿಕ ಪಾರ್ಟಿಯಾಗಿ ಬೆಳೆಸಲು, ತೀವ್ರವಾದ ಮತ್ತು ನಿರಂತರವಾದ ಯತ್ನಗಳನ್ನು ಮಾಡಬೇಕು.

ಈ ಕಾರ್ಯದತ್ತ ಎಲ್ಲ ಪಾರ್ಟಿ ಘಟಕಗಳೂ ಕೂಡಲೇ ಗಮನ ಕೊಡುವುದು ಅಗತ್ಯವಾಗಿದೆ. ಆದರೆ ಪಾರ್ಟಿಯ ಕೇಂದ್ರ ಸಂಘಟನೆಗಳು—ರಾಷ್ಟ್ರೀಯ ಮಂಡಲಿ, ಕೇಂದ್ರ ಕಾರ್ಯಕಾರಿ ಸಮಿತಿ ಮತ್ತು ಕೇಂದ್ರ ಸೆಕ್ರೆಟೇರಿಯಟ್—ಈ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಪಾರ್ಟಿಯ ಘಟನಾವಳಿಯಲ್ಲಿ ಸಾಮಾನ್ಯ ಕರ್ತವ್ಯಗಳನ್ನು ಕುರಿತು ಹೇಳಲಾಗಿದ್ದರೂ, ಕೆಲವು ಕರ್ತವ್ಯಗಳಿಗೆ ಗಮನ ಕೊಡುವುದು ಜರೂರಾಗಿದೆ.

1. ಪಾರ್ಟಿಯಲ್ಲಿ ಮೇಲಿನ ಮತ್ತು ಮಧ್ಯಮ ನಾಯಕತ್ವದ ನಡುವೆ ಐಕ್ಯತೆಯ ಮತ್ತು ಕಾರ್ಯಾಚರಣೆಯ ದೃಷ್ಟಿಕೋಣ ಬೆಳೆಯುವಂತೆ ಮಾಡುವ ಮತ್ತು ಪಾರ್ಟಿ ಕಾರ್ಯಕರ್ತರನ್ನು ಬೆಳೆಸುವ ದಿಶೆಯಲ್ಲಿ ಕೆಲಸ ಆರಂಭ ಮಾಡುವ ರೀತಿಯಲ್ಲಿ **ಪಾರ್ಟಿ ಶಿಕ್ಷಣ**ವನ್ನು ಕೊಡುವುದು ಇದರಲ್ಲಿ ಅತಿ ಮುಖ್ಯವಾದ ಕೆಲಸವಾಗಿದೆ. ಪಾರ್ಟಿ ಕೇಂದ್ರವು ಇದಕ್ಕಾಗಿ ವಿಷಯಗಳ ಪಟ್ಟಿ ತಯಾರಿಸಬೇಕು ಮತ್ತು ಪ್ರಾಂತಗಳಲ್ಲಿ ಹಾಗೂ ವಲಯಗಳಲ್ಲಿ ಪಾರ್ಟಿ ಶಾಲೆಗಳನ್ನು ಆರಂಭಿಸಲು ಸಹಾಯ ಮಾಡಬೇಕು.

2. **ನ್ಯೂ ಏಜ್** ಮಾಸ ಪತ್ರಿಕೆಯು ಪಾರ್ಟಿಯ ಸೈದ್ಧಾಂತಿಕ—ರಾಜಕೀಯ ಮಟ್ಟವನ್ನು ಉತ್ತಮಗೊಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳ ಮೇಲೆ, ಸಾಮೂಹಿಕ ಚಳವಳಿಯ ಅನುಭವಗಳು ಮತ್ತು ಪಾಠಗಳ ಮೇಲೆ, ಪಾರ್ಟಿಯನ್ನು ಕಟ್ಟುವುದರ ಮೇಲೆ ಮತ್ತು ಸೈದ್ಧಾಂತಿಕ ವಿಚಾರಗಳ ಮೇಲೆ ವಿಚಾರಾತ್ಮ ಲೇಖನಗಳನ್ನು ಪ್ರಕಟಿಸಬೇಕು.

ನ್ಯೂ ಏಜ್ ವಾರಪತ್ರಿಕೆಯನ್ನು ಉತ್ತಮಗೊಳಿಸಲು ಕೇಂದ್ರ ನಾಯಕತ್ವವು ಕ್ರಮ ತೆಗೆದುಕೊಳ್ಳಬೇಕು.

ಪ್ರಸ್ತುತ ವಿಷಯಗಳ ಬಗ್ಗೆ ಮತ್ತು ಪ್ರಮುಖ ಸಮಸ್ಯೆಗಳ ಬಗ್ಗೆ ಹೊತ್ತಗೆಗಳನ್ನು ತಪ್ಪದೆ ಅದು ಯೋಚಿಸಬೇಕು.

3. ಪೂರ್ಣ ಸಿದ್ಧತೆಯಿಂದ ಕೂಡಿದ ರಾಷ್ಟ್ರೀಯ ಮಂಡಲಿಯ ಸಭೆಗಳು ಮತ್ತು ಕೇಂದ್ರ ಕಾರ್ಯಕಾರಿ ಸಮಿತಿಯ ಕ್ರಮವಾದ ಸಭೆಗಳ ಮೂಲಕ ಪ್ರಸ್ತುತ ಪ್ರಶ್ನೆಗಳ ಬಗ್ಗೆ ಪಾರ್ಟಿಯ ನಾಯಕತ್ವದ ಭರವಸೆಯನ್ನೀಯಬೇಕು.

4. ಪ್ರಮುಖ ರಾಜಕೀಯ ಪ್ರಶ್ನೆಗಳ ಮೇಲೆ ಕೇಂದ್ರ ಕಾರ್ಯಕಾರಿ ಸಮಿತಿ ಮತ್ತು ಸೆಕ್ರೆಟೇರಿಯಟ್ ಪಾರ್ಲಿಮೆಂಟರಿ ಕಾರ್ಯಕಾರಿ ಸಮಿತಿಗೆ ನಾಯಕತ್ವವನ್ನೀಯಬೇಕು. ಅದು ಪಾರ್ಲಿಮೆಂಟರಿ ಕೆಲಸಕ್ಕೂ ಸದಸ್ಯರ ಶಿಸ್ತಿಗೂ ಜವಾಬುದಾರಿಯಾಗಿರಬೇಕು.

5. ಟ್ರೇಡ್ ಯೂನಿಯನ ರಂಗದಲ್ಲಿ ಕೆಲಸ ಮಾಡುವ ಪ್ರಮುಖ ಕಾಮ್ರೇಡುಗಳ ಉಪಸಮಿತಿಯನ್ನು ರಚಿಸಬೇಕು.

6. ರೈತರು ಮತ್ತು ವ್ಯವಸಾಯ ಕೂಲಿಗಾರರ ನಡುವೆ ಕೆಲಸ ಮಾಡುವುದರ ಮುಖ್ಯತ್ವದ ದೃಷ್ಟಿಯಿಂದ, ಮತ್ತು ಪಾರ್ಟಿಯು ಈ ಕೆಲಸವನ್ನು ಬಹಳ ಕಾಲದಿಂದ ನಿರ್ಲಕ್ಷಿಸಿರುವ ದೃಷ್ಟಿಯಿಂದ, ರೈತ ರಂಗದಲ್ಲಿ ದುಡಿಯುತ್ತಿರುವ ಪ್ರಮುಖ ಕಾಮ್ರೇಡುಗಳ ಒಂದು ಉಪ ಸಮಿತಿಯನ್ನು ರಚಿಸಬೇಕು ಮತ್ತು ರೈತರ ಹಾಗೂ ವ್ಯವಸಾಯ ಕೂಲಿಗಾರರ ಸಂಘಟನೆಗಳನ್ನು ಪುನರ್ಘಟಿಸುವ ಕಾರ್ಯಕ್ಕೆ ಪಾರ್ಟಿ ಕೇಂದ್ರವು ವಿಶೇಷ ಗಮನವನ್ನೀಯಬೇಕು.

7. ಶಾಂತಿ ಹೋರಾಟದ ಬಗ್ಗೆ ಪಾರ್ಟಿ ಘಟಕಗಳ ನಿರ್ಲಕ್ಷ್ಯ ಮನೋಭಾವವನ್ನು ನಿವಾರಿಸಲು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.

8. ಸ್ತ್ರೀಯರು, ವಿದ್ಯಾರ್ಥಿಗಳು ಮತ್ತು ಯುವ ಜನರ ನಡುವೆ ಕೆಲಸವನ್ನು ತೀವ್ರವಾಗಿ ನಡೆಸಬೇಕು. ಪ್ರಾಂತ ಮತ್ತು ಜಿಲ್ಲಾ ಸಮಿತಿಗಳು ಇದಕ್ಕೆ ಹೆಚ್ಚಿನ ಗಮನವನ್ನೀಯಬೇಕು. ಈ ಕೆಲಸದಲ್ಲಿ ನೆರವೀಯಲು, ಸಾಮಾನ್ಯ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಧೋರಣೆಗಳನ್ನು ನಿರೂಪಿಸಲು ಪಾರ್ಟಿ ಕೇಂದ್ರವು ಈ ರಂಗಗಳಲ್ಲಿ ದುಡಿಯುತ್ತಿರುವ ಪ್ರಮುಖ ಕಾಮ್ರೇಡುಗಳ ಸಭೆಯನ್ನು ಕರೆಯಬೇಕು ಮತ್ತು ಅವಶ್ಯವಿದ್ದೆಡೆ ಹಾಗೂ ಸಾಧ್ಯವಿದ್ದೆಡೆ ಉಪ ಸಮಿತಿಗಳನ್ನು ರಚಿಸಬೇಕು.

9. ಕೇಂದ್ರ ಮತ್ತು ಪ್ರಾಂತಗಳ ನಡುವೆ ಸಂಬಂಧವನ್ನು ಬಲಗೊಳಿಸುವ ಅಗತ್ಯತೆ ಹೆಚ್ಚಾಗಿದೆ. ಆದರೆ ಅದೇ ಸಮಯದಲ್ಲಿ ಈ ದಿಕ್ಕಿನಲ್ಲಿ ಕೆಲವು ಕ್ರಮಗಳನ್ನು ಮಾತ್ರ ತೆಗೆದುಕೊಳ್ಳಲು ಸಾಧ್ಯ. ಅದು ಪ್ರಧಾನ ಕಾರ್ಯದರ್ಶಿ ಮತ್ತು ಇತರ ಸೆಕ್ರೆಟೇರಿಯಟ್ ಸದಸ್ಯರುಗಳು ಮತ್ತು ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಪ್ರಾಂತಗಳಿಗೆ ಆಗಾಗ ಭೇಟಿ ಕೊಡುವುದು, ಪ್ರಾಂತ ಸಮಿತಿಗಳಿಂದ ಬಂದ ವರದಿಗಳನ್ನು ಪರಿಶೀಲಿಸುವುದು, ಅವರ ಪ್ರಶ್ನೆಗಳಿಗೆ ತೃಪ್ತವಾಗಿ ಜವಾಬು ಕೊಡುವುದು, ದೊಡ್ಡ ಪ್ರಶ್ನೆಗಳು ಎದ್ದಾಗ ಪ್ರವೇಶಿಸುವುದು ಮತ್ತು ಅವಶ್ಯವಿದ್ದಾಗ ಕೇಂದ್ರದಿಂದ ಮಾರ್ಗದರ್ಶನ ಕೊಡುವುದು.

ನಮ್ಮ ಚಳವಳಿ ಬಲಹೀನವಾಗಿರುವ ಹಿಂದಿ ಮಾತನಾಡುವ ಪ್ರದೇಶಗಳಿಗೆ ಕೇಂದ್ರವು ಹೆಚ್ಚಿನ ಗಮನ ಕೊಡುವುದು ಅಗತ್ಯ. ಕೇಂದ್ರವು ಹಿಂದಿ ಮತ್ತು ಉರ್ದುವಿನ ಪತ್ರಿಗಳನ್ನು ಆರಂಭಿಸಲು ಕ್ರಮ ತೆಗೆದುಕೊಳ್ಳಬೇಕು.

ಸೆಕ್ರೆಟೇರಿಯಟ್ಟು ಪ್ರಾಂತ ಸೆಕ್ರೆಟೇರಿಯಟ್‌ಗಳ ಸಭೆ ಸೇರಿಸಿ, ಪ್ರಾಂತದ ಮುಖ್ಯ ಪ್ರಶ್ನೆಗಳನ್ನು ಚರ್ಚಿಸಲು ಮತ್ತು ಅವನ್ನು ಪರಿಹರಿಸಲು ನೆರವೀಯಲು ಕಾರ್ಯಕ್ರಮ ತಯಾರಿಸಬೇಕು.

10. ನಾವು ಅನೇಕ ವರ್ಷಗಳಿಂದ ಪಾರ್ಟಿ ಕಾರ್ಯಕ್ರಮವಿಲ್ಲದೆ ಇದ್ದೇವೆ—ಮಾರ್ಕ್ಸ್‌ವಾದಿ—ಲೆನಿನ್‌ವಾದಿ ಸಿದ್ಧಾಂತವನ್ನು ಭಾರತದ ವಾಸ್ತವಿಕ ಪರಿಸ್ಥಿತಿಗಳಿಗೆ ಅಳವಡಿಸಿಕೊಂಡು ತಯಾರಿಸಲಾದ ಕಾರ್ಯಕ್ರಮವು ಇಡೀ ಪಾರ್ಟಿಯ ಭವಿಷ್ಯವನ್ನು ಸರಿಯಾಗಿ ಕಾಣಲು ಒಳ್ಳೆಯ ಅಸ್ತ್ರವಾಗಿರುತ್ತದೆ. ರಾಷ್ಟ್ರೀಯ ಮಂಡಲಿಯು ಈ ಕಾರ್ಯಕ್ರಮದ ಕರಡನ್ನು ಸಿದ್ಧಗೊಳಿಸಿ ಸದಸ್ಯರ ಮುಂದೆ ಚರ್ಚೆಗೆ ಇಡಬೇಕು.

11. ಪಾರ್ಟಿಯು ಸ್ಥಾಪನೆಯಾದಂದಿನಿಂದಲೂ ನಮ್ಮ ಸಾಧನೆಗಳು ಮತ್ತು ನ್ಯೂನತೆಗಳ ಬಗ್ಗೆ ನಮಗೆ ಸರಿಯಾದ ತಿಳುವಳಿಕೆಯಿಲ್ಲ. ಬೇರೆ ಬೇರೆ ಕಾಲಘಟ್ಟಗಳಲ್ಲಿ ಪಾರ್ಟಿಯನ್ನು ಸೇರಿದ ಕಾಮ್ರೇಡುಗಳು ಪಾರ್ಟಿಯ ಬೆಳವಣಿಗೆಯ ಬಗ್ಗೆ, ಪ್ರತಿ ಕಾಲಘಟ್ಟದಲ್ಲೂ ಅದರ ಸಾಧನೆಗಳು ಮತ್ತು ನ್ಯೂನತೆಗಳ ಬಗ್ಗೆ ಭಿನ್ನ ದೃಷ್ಟಿಕೋಣವುಳ್ಳವರಾಗಿದ್ದಾರೆ. ರಾಷ್ಟ್ರೀಯ ಚಳವಳಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಪಾತ್ರದ ಬಗ್ಗೆ ಸುಳ್ಳು ಮತ್ತು ತಪ್ಪಾದ ಭಾವನೆಗಳ ಆಧಾರಗೊಂಡಿರುವ ತಪ್ಪು ಕಲ್ಪನೆಗಳು ನಮ್ಮ ಹಿತೈಷಿಗಳು ಮತ್ತು ಬೆಂಬಲಿಗರ ನಡುವೆಯೇ ಅಲ್ಲದೆ, ಪಾರ್ಟಿಯಲ್ಲೂ ಸಹ ಇದೆ.

ಹಿಂದೆ ಮಾಡಲಾಗಿರುವ ಸಾಮಾನ್ಯ ನಿರೂಪಣೆ—ಅಂದರೆ ಚರಿತ್ರೆಯ ಈ ಕಾಲಾವಧಿಯಲ್ಲಿ ಪಾರ್ಟಿಯು ನಡೆಸಿದ ಕಾರ್ಯಾಚರಣೆಗಳ ಫಲವಾಗಿ ನಮ್ಮ ಪಾರ್ಟಿಯು ಇಂದಿನ ಸ್ಥಾನವನ್ನು ಪಡೆದಿದೆ ಎಂದು ಹೇಳಿರುವುದು—ಯಷ್ಟೇ ಸಾಲದು ನಮ್ಮ ಪಾರ್ಟಿಯ ಇತಿಹಾಸ ಮತ್ತು ಕಾರ್ಯದ ಬಗ್ಗೆ ಏಕೀಕೃತವಾದ ತಿಳುವಳಿಕೆ ಇರುವುದು ಅಗತ್ಯವಾಗಿದೆ. ಇದು ಬಹಳ ಕಷ್ಟದ ಕೆಲಸ ಮತ್ತು ಇದನ್ನು ಪೂರಯಿಸಲು ಸಾಕಷ್ಟು ಕಾಲ ಹಿಡಿಯುತ್ತದೆ. ಆದರೆ ಈ ಕೆಲಸವನ್ನು ಆದಷ್ಟು ಶೀಘ್ರವಾಗಿ ಡಾಕ್ಯುಮೆಂಟುಗಳನ್ನು ಸಂಗ್ರಹಿಸುವುದರ ಮೂಲಕ ಮತ್ತು ಪಾರ್ಟಿಯ ಇತಿಹಾಸದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಾಯಕತ್ವದಲ್ಲಿ ಕಾಮ್ರೇಡುಗಳೊಂದಿಗೆ ಚರ್ಚಿಸುವುದರ ಮೂಲಕ ಆರಂಭಿಸಬೇಕಾಗಿದೆ.

12. ಪಾರ್ಟಿ ಕೇಂದ್ರ ಕಛೇರಿಯಲ್ಲಿ ಮತ್ತು ಕೇಂದ್ರದ ಕೆಲಸದ ವಿವಿಧ ಶಾಖೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರಿಗೆ ಸರಿಯಾದ ಪಾರ್ಟಿ ಜೀವನವನ್ನು ಕಲ್ಪಿಸಲು ಮತ್ತು ಪಾರ್ಟಿ ಕೇಂದ್ರವು ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

ಪಾರ್ಟಿ ಕೇಂದ್ರದಿಂದ ರಚಿಸಲ್ಪಡುವ ಉಪ ಸಮಿತಿಯು ಸಾಮೂಹಿಕ ಸಂಘಟನೆಗಳ ಸಮಿತಿಗಳನ್ನು ಸ್ಥಾನಪಲ್ಲಟ ಮಾಡುವುದಿಲ್ಲ ಮತ್ತು ಪ್ರಾಂತೀಯ ಉಪ ಸಮಿತಿಗಳಿಗೆ ನಿರ್ದೇಶ ಕೊಡುವುದಿಲ್ಲ. ಅದರ ಕಾರ್ಯವು ಪಾರ್ಟಿ ಕೇಂದ್ರವು ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಪ್ರಾಂತ ಸಮಿತಿಗಳ ಮೂಲಕ ನೇತೃತ್ವಕೊಡಲು ಸಹಾಯಕವಾಗುವಂತೆ ನೆರವೀಯುವುದಾಗಿದೆ.

★

ಸಾಮೂಹಿಕವಾಗಿ ಕೆಲಸ ಮಾಡುವ, ತೀರ್ಮಾನಗಳನ್ನು ಕಾರ್ಯಗತಗೊಳಿಸುವುದರಲ್ಲಿ ವೈಯುಕ್ತಿಕ ಜವಾಬ್ದಾರಿ ತೆಗೆದುಕೊಳ್ಳುವ ಮತ್ತು ಕ್ರಮವಾಗಿ ಸಾಮೂಹಿಕವಾದ ತನಿಖೆ ನಡೆಸುವ ಆಧಾರದ ಮೇಲೆ ಕೇಂದ್ರ ಸೆಕ್ರೆಟೇರಿಯಟ್‌ನ ಸದಸ್ಯರುಗಳು ತಮ್ಮ ನಡುವೆ ಕೆಲಸವನ್ನು ಹಂಚಿಕೊಳ್ಳಬೇಕು. ಈಗಿರುವಂತೆ ವೈಯಕ್ತಿಕವಾಗಿ ಕೆಲಸ ಮಾಡುವ ಮತ್ತು ತನಿಖೆ ಇಲ್ಲದ ರೀತಿಯ ಪದ್ಧತಿ ಹೋಗಬೇಕು.

ಸೆಕ್ರೆಟೇರಿಯಟ್ಟಿನ ಪ್ರತಿ ಸದಸ್ಯರೂ ಕೇಂದ್ರ ಕಾರ್ಯಕಾರಿ ಸಮಿತಿಯ ನಿರ್ದಿಷ್ಟ ಶಾಖೆ ಅಥವ ಶಾಖೆಗಳ ಜವಾಬುದಾರರಾಗಿರುತ್ತಾರೆ ಮತ್ತು ವೈಯುಕ್ತಿಕವಾಗಿ ಅದರ ಕೆಲಸದ ನಿರ್ವಹಣೆಗೆ ಸೆಕ್ರೆಟಾರಿಯಟ್ಟಿಗೆ ಕ್ರಮವಾಗಿ ವರದಿ ಕಳಿಸಲು ಹಾಗೂ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದಕ್ಕೆ ಹೊಣಗಾರರಾಗಿರುತ್ತಾರೆ.

ಸೆಕ್ರೆಟೇರಿಯಟ್‌ನ ಸದಸ್ಯರು ತಮ್ಮ ಪೂರ್ಣ ಕಾಲವನ್ನು ಕೇಂದ್ರದ ಕೆಲಸಕ್ಕೆ ವಿನಿಯೋಗಿಸುತ್ತಾರೆ. ಆದರೆ ಅವರು ಕಡಿಮೆ ಸಂಖ್ಯೆಯಲ್ಲಿರುವುದರಿಂದ ಕೇಂದ್ರದ ಎಲ್ಲ ಕೆಲಸವನ್ನೂ ನಿರ್ವಹಿಸಲಾಗುವುದಿಲ್ಲ. ಕೇಂದ್ರದ ಕೆಲಸವನ್ನ ಸೆಕ್ರೆಟೇರಿಯಟ್ ಸದಸ್ಯರು ಮಾತ್ರವೇ ಅಲ್ಲದೆ ರಾಷ್ಟ್ರೀಯ ಮಂಡಲಿಯ ಸದಸ್ಯರೂ ಮಾಡಬೇಕು ಮತ್ತು ಮುಖ್ಯವಾಗಿ ಕೇಂದ್ರ ಕಾರ್ಯಕಾರೀ ಸಮಿತಿಯ ಸದಸ್ಯರು ಮಾಡಬೇಕು.

ಕೇಂದ್ರ ಕಾರ್ಯಕಾರೀ ಸಮಿತಿಯ ಸದಸ್ಯರು ಪ್ರಾಂತ ಸಮಿತಿಗಳ ಕಾರ್ಯವನ್ನು ನಡೆಸುವ ಮತ್ತು ಪ್ರಸ್ತುತ ಪಿ ಬಿ. ಕೆಲ ಸದಸ್ಯರು ಮಾಡುತ್ತಿರುವಂತೆ "ಅನುಕೂಲ" ವಿದ್ದಾಗ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಗೆ ಬರುವುದಷ್ಟೇ ಕೆಲಸವಲ್ಲ. ರಾಷ್ಟ್ರೀಯ ಮಂಡಲಿಯಿಂದ ಚುನಾಯಿಸಲ್ಪಟ್ಟ ಕೇಂದ್ರ ಕಾರ್ಯಕಾರೀ ಸಮಿತಿಯ ಸದಸ್ಯರು ಕೇಂದ್ರದ ಕೆಲಸವನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗುವುದರಲ್ಲಿ ರಾಷ್ಟ್ರೀಯ ಮಂಡಲಿಗೆ ಜವಾಬುದಾರರಾಗಿದ್ದಾರೆ. ಅವರಿಗೆ ಪ್ರಾಂತದ ಜವಾಬುದಾರಿಯಷ್ಟೇ ಅಲ್ಲದೆ ಕೇಂದ್ರದ ಜವಾಬುದಾರಿಯೂ ಇದೆ ಮತ್ತು ಅವರು ಅದನ್ನು ಕೇಂದ್ರ ಕಾರ್ಯಕಾರಿ ಸಮಿತಿ ಅಪೇಕ್ಷಿಸಿದಾಗ ನಿರ್ವಹಿಸಬೇಕು, ಉದಾಹರಣೆಗೆ ಕೆಲವು ಪ್ರಾಂತಗಳಿಗೆ ಭೇಟಿ ಕೊಡುವುದು, ಪಾರ್ಟಿ ಶಾಲೆಗಳನ್ನು ನಡೆಸುವುದು, ಅವುಗಳಿಗಾಗಿ ಸಿದ್ಧತೆ ನಡೆಸುವುದು ಮತ್ತು ಅಭ್ಯಾಸ ಮಾಡುವುದು, ಕೇಂದ್ರದ ಪತ್ರಿಕೆಗಳಿಗೆ ಲೇಖನ ಬರೆಯುವುದು ಇತ್ಯಾದಿ ಪ್ರಾಂತ ಸಮಿತಿಗಳು ರಾಷ್ಟ್ರೀಯ ಮಂಡಲಿಯ ಮತ್ತು ಕೇಂದ್ರ ಕಾರ್ಯಕಾರಿ ಸಮಿತಿಯ ತೀರ್ಮಾನಗಳನ್ನು ಕಾರ್ಯಗತಗೊಳಿಸುವ ಭರವಸೆಯನ್ನೀಯಬೇಕು.

ಕೇಂದ್ರ ಕಾರ್ಯಕಾರಿ ಸಮಿತಿಯ ಪ್ರತಿ ಸಭೆಯ ನಂತರವೂ ಅದರ ತೀರ್ಮಾನಗಳ ಬಗ್ಗೆ ವರದಿಗಳನ್ನು ರಾಷ್ಟ್ರೀಯ ಮಂಡಲಿಯ ಸದಸ್ಯರಿಗೆ ಕಳಿಸಬೇಕು.

ಇವೆಲ್ಲವನ್ನು ಮಾಡಲಾಗುವುದೆಂಬ ಭರವಸೆ ಏನಿದೆ ಎಂದು ಕಾಮ್ರೇಡುಗಳು ಕೇಳಬಹುದು? ಎಷ್ಟೇ ಭರವಸೆಗಳಿದ್ದರೂ, ಹಿಂದಿನ ಅನುಭವಗಳಿಂದ ಪಾರ್ಟಿ ಕೇಂದ್ರವು ಸರಿಯಾಗಿ ಕೆಲಸ ಮಾಡದಿರುವುದರಿಂದ ಪಾರ್ಟಿಯ ಕೆಲಸಕ್ಕೆ ತೊಂದರೆ ಬರುವುದೆಂದು ತಿಳಿದಿದ್ದರೂ ಅಂಥ ಕೇಂದ್ರವು ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲದಿದ್ದರೂ ಇವೆಲ್ಲ ಆಗುವುದು ಹೇಗೆ?

ಇರತಕ್ಕ ಒಂದೇ ಭರವಸೆಯೆಂದರೆ ಪಾರ್ಟಿ ಅಧಿವೇಶನದಲ್ಲಿ ಚುನಾಯಿಸಲ್ಪಡುವ ರಾಷ್ಟ್ರೀಯ ಮಂಡಲಿಯು ಅಂಥ ಕೇಂದ್ರವನ್ನು ಸ್ಥಾಪಿಸುವ ಭರವಸೆಯನ್ನಿತ್ತು, ಸಮರ್ಥವಾದ ಕೇಂದ್ರ ಕಾರ್ಯಕಾರೀ ಸಮಿತಿಯನ್ನು ಹಾಗೂ ಸೆಕ್ರೆಟೇರಿಯಟ್ಟನ್ನು ಆಯ್ಕೆ ಮಾಡುವುದೇ ಅಲ್ಲದೆ, ಅವುಗಳ ಕೆಲಸದ ಮೇಲೆ ಸಲಹೆಗಳು ಮತ್ತು ಟೀಕೆಗಳನ್ನು ಮಾಡುವುದರ ಮೂಲಕ ಪರಿಣಾಮಕಾರಿಯಾದ ಹತೋಟಿ ಇರಿಸಿಕೊಳ್ಳುವುದು, ತಮ್ಮ ಜವಾಬುದಾರಿಯನ್ನು ನಿರ್ವಹಿಸದಿರುವಂಥ ಸದಸ್ಯರನ್ನು ಹಿಂತೆಗೆಯದೆ ತೆಗೆದು ಹಾಕಿ ಬೇರೆಯವರನ್ನು ಆ ಸ್ಥಾನದಲ್ಲಿ ಆರಿಸುವುದು ಆಗಿದೆ.

ಅಷ್ಟೇ ಅಲ್ಲದೆ, ಕೇಂದ್ರ ಕಾರ್ಯಕಾರೀ ಸಮಿತಿಯ ಮತ್ತು ಸೆಕ್ರೆಟೇರಿಯಟ್ಟಿನ ಸದಸ್ಯರುಗಳು ಪ್ರತಿಯೊಬ್ಬರು ಏನು ಮಾಡಬೇಕು, ಎಲ್ಲಿ ಕೆಲಸ ಮಾಡಬೇಕು ಎಂಬುದನ್ನು ಅವರು ಇರತಕ್ಕ ಕೆಳಗಿನ ಘಟಕವೂ ಸಹ ತೀರ್ಮಾನಿಸಬೇಕೆನ್ನುವುದನ್ನು ತತ್ವವಾಗಿ ಪರಿಗಣಿಸಬೇಕು—ಮೇಲಿನ ಸಮಿತಿಯು ಈ ಬಗ್ಗೆ ತನ್ನ ಅಭಿಪ್ರಾಯವನ್ನು ಖಂಡಿತ ಕೊಡುವುದು.

ಪ್ರಾಂತ ಸಮಿತಿಗಳು

ಪ್ರಾಂತ ಸಮಿತಿಗಳು ತಮ್ಮ ಕೆಲಸವನ್ನು ಪುನರ್ಘಟಿಸಬೇಕು. ಅಲ್ಲಿಯು ಸೆಕ್ರೆಟೇರಿಯಟ್ ನಡೆಸುವುದು ಮುಖ್ಯವಾದುದಾಗಿದೆ.

ಆದರೆ ವಿವಿಧ
ಬೇರೆ ಬೇರೆ ರೀತಿ
ಬಗ್ಗೆ ಒಂದೇ ರೀ
ಪಣೆ ಮಾಡಲಾಗ
ಕೆಲವು ಸಾಮಾನ್ಯ
ಜಹುದು.

ಅನೇಕ ಪ್ರಾಂ
ವಾದ ನಾಯಕತ್ವ
ರು ಕಾಮ್ರೇಡು
ಹೆಚ್ಚು ಕೇಂದ್ರಿಕೃ
ಣೆಯಲ್ಲಿ ಅರಾಜ
ಮನೋವೃತ್ತಿ ಇ
ಬೆಳವಣಿಗೆಯನ್ನು
ಮಾತ್ರ ನೆನಪು
ಯಾವ ಕಾಮ್ರೇಡಿ
ಣಾಮಕಾರಿಯಾಗಿ
ವಷ್ಟು ಜವಾಬು
ಚ್ಚಾಗಿ ವಿಧಿಸಬಾ
ಜವಾಬುದಾರಿಯ
ಸದಸ್ಯರುಗಳ ನಡ

—ಸಾಮೂಹಿ
ಕ್ತಿಕ ಜವಾಬುದಾ
ನಿಖೆಯ ತತ್ವದ ಆ
ರ್ಶಿಯನ್ನು ಒಳಗೆ
ದಸ್ಯರ ಕೆಲಸವನ್ನು
ಬೇಕು.

—ಪ್ರಾಂತ ಸ
ದ ಸಿದ್ಧತೆ ನಡೆಸ
ಅನುಷ್ಠಾನಕ್ಕೆ ತ
ಏನು ಮಾಡಬೇ
ಬೇಕು.

—ಸೆಕ್ರೆಟೇರಿ
ತ್ತು ಪ್ರಾಂತ ಮಂ
ಲ್ಲಿಯೂ ಹಿಂದಿನ
ಓದಿ, ತೀರ್ಮಾನ
ರ್ಯಗತಗೊಳಿಸ
ಶೀಲಿಸಬೇಕು.

—ಪ್ರಾಂತ ಕ
ಮಂಡಲಿಯ ಸ
ಕ್ಕೆ ಕಳಿಸಬೇಕು.

—ಪಾರ್ಟಿ ಪ
ಮರ್ಶಿಸಬೇಕು,
ಸುವುದು ಹೇಗೆ,
ಪ್ರದೇಶದಲ್ಲೂ
ಅವನ್ನು ಸ್ವಯಂ
ಹೇಗೆ ಎಂಬುದ
ಚರ್ಚೆಯನ್ನು ಆ

—ಶಾಸನ ಸ
ಕೀಯ ಸಂಸ್ಥೆಗ
ನ್ನು ಕ್ರಮವಾಗಿ
ದನ್ನು ಪಾರ್ಟಿ ಸ

—ಇವೆಲ್ಲಕ್ಕಿಂ
ರ್ಯಕಾರಿ ಸಮಿ
ನಡುವೆ ಸಂಬಂ
ಇದಕ್ಕೆ **ಪ್ರಾಂ**
ಚಳವಳಿಯನ
ಹಾಗಿಲ್ಲದಿದ್ದಲ್ಲಿ
ತ್ತು ಆರ್ಥಿಕ ಕ್ಷೇ
ತಾದ್ಯಂತ ಯಾ
ವುದಿಲ್ಲ. ಪಾರ್ಟಿ
ಭಾಗಗಳಲ್ಲಿ
ನ್ನು ಪ್ರತಿಬಿಂಬಿ
ಸಾಮೂಹಿಕ ಸ
ತ್ರವೇ ಅಲ್ಲದೆ
ಕುರಿತು ಜಿಲ್ಲಾ
ಳೊಂದಿಗೆ ಚರ್ಚಿ
ಬೇಕು ಜಿಲ್ಲೆಗ
ಕಟವಾದ ಮಾ
ಬೆಳೆಸಬೇಕು.

ತಸರ ಅಧಿವೇಶನದ ಗೊತ್ತುವಳಿ ★

ನಿಸಿಪಾಲಿಟಿಗಳು, ಪಂಚಾಯತ್‌ಗಳ ಸಮಸ್ಯೆಗಳ ಬಗ್ಗೆ ಚರ್ಚಿಸಲು ವಿಶೇಷ ಸಮಸ್ಯೆಗಳ ಬಗ್ಗೆ ಚರ್ಚಿಸಲು ವಿಶೇಷ ಸಭೆಗಳನ್ನು ಕೂಡಿಸಬೇಕು.

—ಕೆಲಸವನ್ನು ಯೋಜಿಸುವಾಗ ವಿವಿಧ ಸಮಸ್ಯೆಗಳು ಮತ್ತು ಪಾರ್ಟಿಯ ಸಂಘಟನಾತ್ಮಕ ಶಕ್ತಿಯನ್ನು ಗಮನದಲ್ಲಿರಿಸಿಕೊಂಡು ಯಾವುದಕ್ಕೆ ಮೊದಲ ಗಮನ ಕೊಡಬೇಕೋ ಅದನ್ನು ಮಾಡಬೇಕು.

★

ಇವೆಲ್ಲದಕ್ಕೂ ಸೆಕ್ರೆಟೇರಿಯಟ್‌ಗಳು ಮತ್ತು ಪ್ರಾಂತ ಕಾರ್ಯಕಾರಿ ಸಮಿತಿಗಳು ಕೆಲಸ ಮಾಡುವುದರ ಮೇಲೆ ಹೊಂದಿಕೊಂಡಿದೆ. ಸೆಕ್ರೆಟೇರಿಯಟ್ ಸದಸ್ಯರಿಂದಲೇ ಎಲ್ಲ ಕೆಲಸವನ್ನೂ ಮಾಡಲಾಗುವುದಿಲ್ಲ. ಪ್ರಾಂತದ ಕೆಲಸದ ಜವಾಬುದಾರಿಯನ್ನು ಸೆಕ್ರೆಟೇರಿಯಟ್ ಸದಸ್ಯರಷ್ಟೇ ಅಲ್ಲದೆ, ಪ್ರಾಂತ ಕಾರ್ಯಕಾರಿ ಸಮಿತಿಯ ಸದಸ್ಯರೂ ಸಹ ಹೊತ್ತಿರಬೇಕು.

ಸಾಮೂಹಿಕವಾಗಿ ಕೆಲಸ ಮಾಡುವುದು, ವೈಯ್ಯಕ್ತಿಕ ಜವಾಬುದಾರಿ ಮತ್ತು ತನಿಖೆ

ಪಾರ್ಟಿಯ ಪ್ರತಿಯೊಂದು ಘಟಕದಲ್ಲೂ, ಮೊದಲಾಗಿ ಕೇಂದ್ರ, ಪ್ರಾಂತ ಮತ್ತು ಜಿಲ್ಲಾ ನಾಯಕತ್ವದ ಸೆಕ್ರೆಟೇರಿಯಟ್ಟುಗಳು ಸಾಮೂಹಿಕವಾಗಿ ಕೆಲಸ ಮಾಡುವುದು, ವೈಯಕ್ತಿಕ ಜವಾಬುದಾರಿ ಮತ್ತು ತನಿಖೆಯ ಆಧಾರದ ಮೇಲೆ ಕೆಲಸ ಮಾಡುವಂತೆ ಸಂಘಟನೆಯಾಗಬೇಕು.

ಇಂದು ಅದು ಅಭಾವವಾಗಿದೆ. ಸಾಮೂಹಿಕವಾಗಿ ಕೆಲಸ ಮಾಡುವುದೆಂದರೆ ಎಂದಿಗೂ ಮುಗಿಯದಂಥ ಸಭೆಯು ವೈಯಕ್ತಿಕ ಜವಾಬುದಾರಿ ಎಂಬುದು "ಸ್ವಾಯತ್ತತೆ" ಮತ್ತು "ಪ್ರವೇಶ ಮಾಡದಿರುವುದು" ಆಗಿದೆ ತನಿಖೆಯಂತೂ ಇಲ್ಲವೇ ಇಲ್ಲ. ಈ ರೀತಿಯಲ್ಲಿ ಪಾರ್ಟಿ ಕೆಲಸ ಮಾಡುವುದರಿಂದ ಅದು ಎಂದಿಗೂ ಉತ್ತಮಗೊಳ್ಳುವುದಿಲ್ಲ.

ಮೇಲಿನ ಸಮಿತಿಯ ಮತ್ತು ಕೆಳಗಿನ ಸಮಿತಿಗಳ ಹಾಗೂ ಸದಸ್ಯ ಸಮೂಹದ ತೀರ್ಮಾನಗಳನ್ನು ಕಾರ್ಯಗತ ಮಾಡುವುದು ಪ್ರತಿಯೊಂದು ಪಾರ್ಟಿ ಘಟಕದ ಸಾಮೂಹಿಕ ಜವಾಬುದಾರಿಯಾಗಿದೆ. ಆದರೆ ಸಮಿತಿಗಳಲ್ಲಿ, ಸೆಕ್ರೆಟೇರಿಯಟ್ಟುಗಳಲ್ಲಿ ಸಾಮೂಹಿಕ ತೀರ್ಮಾನಗಳು ಮತ್ತು ತನಿಖೆಯ ಆಧಾರದ ಮೇಲೆ ವೈಯಕ್ತಿಕ ಜವಾಬುದಾರಿಯ ತತ್ವವನ್ನು ಅನುಸರಿಸಬೇಕು. ಇದನ್ನು ಮಾಡಿದರೆ ಮಾತ್ರ ತೀರ್ಮಾನಗಳನ್ನು ಕೃತಿಗಿಳಿಸಲು ಸಾಧ್ಯ.

ಇಡೀ ಪಾರ್ಟಿಯನ್ನು ಸಕ್ರಿಯಗೊಳಿಸುವುದು, ಎಲ್ಲ ಕಾಮ್ರೇಡುಗಳಿಗೂ ಕೆಲಸ, ಪೂರ್ಣ ಕಾಲ ಕಾರ್ಯಕರ್ತರ ಮುಖ್ಯತ್ವ.

ಸಾಮೂಹಿಕ ಚಟುವಟಿಕೆಯ ರೂಪ ಮತ್ತು ಸಾಮೂಹಿಕ ಕೆಲಸದ ರೀತಿಯಲ್ಲಿ ಪರಿಪೂರ್ಣವಾದ ಬದಲಾವಣೆ ಅಗತ್ಯವಾಗಿದೆ. ಉತ್ತಮ ಜೀವನಕ್ಕಾಗಿ ಜನತೆಯ ಹೋರಾಟ ಮತ್ತು ಅವರ ಎಲ್ಲ ಚಟುವಟಿಕೆಗಳಿಗೆ ಶಾಖೆಗಳು ನಿಜವಾದ ನಾಯಕತ್ವ ವಹಿಸುವಂಥ ರೀತಿಯಲ್ಲಿ ಪಾರ್ಟಿಯ ಮೂಲ ಘಟಕಗಳು ಕೆಲಸ ಮಾಡಬೇಕು.

ನಮ್ಮ ಪಾರ್ಟಿಯು ಇಂಥ ಸ್ಥಾನವನ್ನು [illegible] ಪದದಲ್ಲಿ ಮಾತ್ರ ಬದಲಾವಣೆಯಾಗಿಲ್ಲ. ನಮ್ಮ ವಾಸ್ತವಿಕ ಚಟುವಟಿಕೆಗಳು ಪ್ರಧಾನವಾಗಿ ಚುನಾವಣೆಗಳು, ಸಮ್ಮೇಳನಗಳು ಮತ್ತು ಸ್ಥಳೀಯ ಹೋರಾಟಗಳು, ಮತ್ತೆ ಆಗಾಗ್ಗೆ ಕೆಲವು ಚಳವಳಿಗಳು ಇವಕ್ಕೆ ಹೊಂದಿಕೊಂಡಿವೆ. ಪಾರ್ಟಿಯ ದೈನಂದಿನ ಸಾಮಾನ್ಯ ಕಾರ್ಯವು ಮುಖ್ಯವಾಗಿ ಪೂರ್ಣಕಾಲದ ಕಾರ್ಯಕರ್ತರಿಂದ ನಡೆಸಲ್ಪಡುತ್ತದೆ. ಒಂದು ಕಡೆ ಕಾರ್ಯಕರ್ತರ ಅಭಾವ ಇನ್ನೊಂದೆಡೆ ಏನೂ ಕೆಲಸಮಾಡದೆ ಇರುವ ಅನೇಕ ಸದಸ್ಯರ ಸಮೂಹ: ಇದು ಇಂದು ನಮ್ಮ ಪಾರ್ಟಿಯ ಜೀವನದ ವಾಸ್ತವಿಕ ಸ್ವರೂಪವಾಗಿದೆ.

ಪೂರ್ಣ ಕಾಲದ ಕಾರ್ಯಕರ್ತರ ಮೇಲೆಯೇ ಅವಲಂಬಿಸಿರುವುದು—ಅವರಲ್ಲನೇಕರು ನಿಧಾನವಾಗಿ ಜನಜೀವನದಿಂದ ದೂರ ಸರಿಯುತ್ತಾರೆ—ಸ್ವಾರ್ಥತೆಗೆ, ಪಂಥವಾದಿತನಕ್ಕೆ ಮತ್ತು ಪಾರ್ಟಿಯೊಳಗೆ ಸಂಕುಚಿತ ದೃಷ್ಟಿಕೋಣಕ್ಕೆ ಎಡೆ ಕೊಡುತ್ತದೆ. ಅದು ಸಕ್ರಿಯ ಮತ್ತು ಅಕ್ರಿಯ ಎಂದು ಎರಡು ತಂಡದ ಪಾರ್ಟಿ ಸದಸ್ಯರನ್ನುಂಟುಮಾಡುತ್ತದೆ.

ರಾಜಕೀಯ ನಿರ್ಣಯವು ಸರ್ವತೋಮುಖವಾದ ಸಾಮೂಹಿಕ ಕಾರ್ಯವನ್ನು ಎತ್ತಿ ಹೇಳಿದೆ ಈ ಗೊತ್ತುವಳಿಗೆ ಅನುಗುಣವಾಗಿ ಪಾರ್ಟಿಯು ಪ್ರತಿಯೊಂದು ಕೆಲಸಕ್ಕೂ ಕಾಮ್ರೇಡುಗಳಿರುವಂತೆ ಮತ್ತು ಪ್ರತಿಯೊಬ್ಬ ಕಾಮ್ರೇಡಿಗೂ ಕೆಲಸವಿರುವಂತೆ ನಿರಂತರವಾದ ಚಟುವಟಿಕೆಯನ್ನಾರಂಭಿಸಬೇಕು.

ಇದಕ್ಕೆ ಸ್ಥಳೀಯ ಅಗತ್ಯತೆಗಳನ್ನು ಜಾಗರೂಕತೆಯಿಂದ ಅಭ್ಯಾಸ ಮಾಡುವುದು, ಪಂಚ ವಾರ್ಷಿಕ ಯೋಜನೆಯ ಮತ್ತು ಸರಕಾರದ ಅಭಿವೃದ್ಧಿ ಕಾರ್ಯಕ್ರಮದ ಯೋಜನೆಗಳ ನಿರ್ದಿಷ್ಟ ಕಾರ್ಯವನ್ನು ಗಮನಿಸುವುದು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿ ಜನತೆಯ ಹಿತವನ್ನು ಸಾಧಿಸುವ ಭರವಸೆಯಿಾಯುವುದು ಅಗತ್ಯವಾಗಿದೆ. ಹಾಗಿಲ್ಲದಿದ್ದಲ್ಲಿ ಸಾಮೂಹಿಕ ಸಂಘಟನೆಗಳನ್ನೂ ಸಹ ಕಟ್ಟುವುದು ದುಃಸ್ಸಾಧ್ಯವಾಗುತ್ತದೆ. ಅನೇಕ ಬಾರಿ ಇದನ್ನು ಒತ್ತಿ ಹೇಳಲಾಗಿದೆ ಮತ್ತು ನಿಜವಾಗಿ ಈ ದಿಶೆಯಲ್ಲಿ ಸ್ವಲ್ಪ ಪ್ರಗತಿಯನ್ನು ಸಾಧಿಸಲಾಗಿದೆ, ಆದರೆ ಅದು ತೀರಾ ಅಲ್ಪ, ಅಂಥ ಕಾರ್ಯದ ಬಗ್ಗೆ ನಾಯಕತ್ವದಲ್ಲಿರುವ ಸಮಿತಿಗಳು ಮತ್ತು ಕಾರ್ಯಕರ್ತರಲ್ಲಿ ಸಂಕುಚಿತವಾದಿ ಮತ್ತು ಪಂಥವಾದೀ ಧೋರಣೆ ಇನ್ನೂ ಪ್ರಧಾನವಾಗಿದೆ.

★

ಇಡೀ ಪಾರ್ಟಿಯನ್ನು ಸಕ್ರಿಯಗೊಳಿಸುವುದು ಮತ್ತು ಎಲ್ಲ ಸದಸ್ಯರಿಗೂ ಕೆಲಸವನ್ನು ವ್ಯವಸ್ಥೆ ಮಾಡುವುದು ಎಂದು ಒತ್ತಿ ಹೇಳಿದ ಮಾತ್ರಕ್ಕೆ ಪೂರ್ಣ ಕಾಲದ ಕಾರ್ಯಕರ್ತರ ಮುಖ್ಯತ್ವವನ್ನು ಅಲ್ಲಗಳೆಯುವುದೆಂತಲ್ಲ. ವಿಸ್ತಾರ ಹೊಂದುತ್ತಿರುವ ಪಾರ್ಟಿಯಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪೂರ್ಣ ಕಾಲದ ಕಾರ್ಯಕರ್ತರ ಅಗತ್ಯತೆ ಇದೆ, ಇದಕ್ಕೆ ಅವರ ಕನಿಷ್ಠ ಅವಶ್ಯಕತೆಗಳನ್ನಾದರೂ ಪೂರೈಸುವ ಭರವಸೆ ಇರಬೇಕು, ಅವರು ತಮ್ಮ ಜೀವನಕ್ಕಾಗಿ ಗೆಳೆಯರ ಮೇಲೆ ಮತ್ತು ಹಿತೈಷಿಗಳ ಮೇಲೆ ಅವಲಂಬಿಸಿರುವಂತಾಗಬಾರದು. ಪೂರ್ಣ ಕಾಲದ ಕಾರ್ಯಕರ್ತರಿಗೆ ಸಾಕಷ್ಟು ವೇತನವನ್ನು ಕ್ರಮವಾಗಿ ದೊರಕಿಸಿಕೊಡಬೇಕು. ಪಾರ್ಟಿ ಘಟಕಗಳ ಆಯುವ್ಯಯ ಅಂದಾಜು ಪಟ್ಟಿಯಲ್ಲಿ ಪೂರ್ಣ ಕಾಲದ ಕಾರ್ಯಕರ್ತರಿಗೆ ವೇತನ ಕೊಡುವುದನ್ನು ಒಂದು ಮುಖ್ಯ ಅಂಶವಾಗಿ ಪರಿಗಣಿಸಬೇಕು. ಪೂರ್ಣ ಕಾಲದ ಕಾರ್ಯಕರ್ತರಿಗೆ ವೈದ್ಯಕೀಯ ಸಹಾಯದತ್ತ ವಿಶೇಷ ಗಮನ ಕೊಡುವುದಗತ್ಯ.

ಪಾರ್ಟಿಯಲ್ಲಿರುವ ಪೂರ್ಣ ಕಾಲದ ಕಾರ್ಯಕರ್ತರ ಬಗ್ಗೆ ಸಮಗ್ರವಾದ ಪರಿಶೀಲನೆಯನ್ನು ಪ್ರಾಂತ ಸಮಿತಿಗಳು ಕೂಡಲೇ ನಡೆಸಬೇಕು. ಅವರು ಮಾಡುತ್ತಿರುವ ಕೆಲಸದ ಸ್ವಭಾವ, ಪಾರ್ಟಿ ಅಥವಾ ಸಾಮೂಹಿಕ ಸಂಘಟನೆಯು ಅವರಿಗೆ ಕೊಡುತ್ತಿರುವ ವೇತನ, ಇವನ್ನು ಪರಿಶೀಲಿಸಬೇಕು ಮತ್ತು ಈ ಅತೀ ಮುಖ್ಯವಾದ ಪ್ರಶ್ನೆಯ ಮೇಲೆ ಒಂದು ಧೋರಣೆಯನ್ನು ನಿರೂಪಿಸಬೇಕು.

ಪಾರ್ಟಿಯ ಹಣಕಾಸಿನ ಪರಿಸ್ಥಿತಿ

ಪಾರ್ಟಿ ಘಟಕಗಳ ತೀವ್ರ ಹಣಕಾಸಿನ ಮುಗ್ಗಟ್ಟಿಗೆ ಕಾರಣ ಜನಸಮೂಹಗಳು ಪಾರ್ಟಿ ನಿಧಿಗೆ ಹಣ ಕೊಡಲು ಹಿಂಜರಿಯುತ್ತಾರೆ ಎಂಬುದರಿಂದಲ್ಲ. ಅದಕ್ಕೆ ಕಾರಣ ಜನಸಮೂಹಗಳನ್ನು ಯೋಜನಾ ಬದ್ಧವಾದ ರೀತಿಯಲ್ಲಿ ಕೇಳುವ ಕ್ರಮವಿಲ್ಲದಿರುವುದಾಗಿದೆ. ಅಂಥ ರೀತಿಯಲ್ಲಿ ಕೇಳಿರುವೆಡೆಗಳಲ್ಲಿ, ಕೆಲವು ಪ್ರಾಂತಗಳಲ್ಲಿ ಕೆಲ ತಿಂಗಳಿಂದೀಚೆಗಿನ ಅನುಭವದಂತೆ ನಿಧಿ ಶೇಖರವಾಗಿದೆ.

ವರ್ಷದಲ್ಲಿ ಕೊನೆಯ ಪಕ್ಷ ಎರಡು ತಿಂಗಳಾದರೂ ಪ್ರಾಂತಾದ್ಯಂತವೂ ಪಾರ್ಟಿ ನಿಧಿ ಶೇಖಕರಣೆಯ ಕಾರ್ಯವನ್ನು ಪ್ರಾಂತ ಸಮಿತಿಯು ವ್ಯವಸ್ಥೆಗೊಳಿಸಬೇಕು, ಈ ಕಾರ್ಯದಲ್ಲಿ ಇಡೀ ಪಾರ್ಟಿಯನ್ನು ಸಜ್ಜುಗೊಳಿಸಬೇಕು. ಪ್ರತಿ ಪಾರ್ಟಿ ನಾಯಕರೂ, ಅದರಲ್ಲೂ ಪ್ರಭಾವವಿರುವಂಥವರು, ಈ ಕಾರ್ಯದಲ್ಲಿ ನೇರವಾಗಿ ಭಾಗವಹಿಸಬೇಕು.

ಕೇಂದ್ರ ಮತ್ತು ಪ್ರಾಂತ ಸಮಿತಿಗಳ ಆದಾಯದಲ್ಲಿ ಮುಖ್ಯವಾದ ಆಧಾರವು ಪಾರ್ಲಿಮೆಂಟ್ ಮತ್ತು ಶಾಸನ ಸಭಾ ಸದಸ್ಯರ ಲೆವಿ ಆಗಿದೆ. ಈ ವಿಷಯದಲ್ಲಿ ಇಂದು ಪರಿಸ್ಥಿತಿ ತುಂಬಾ ಅತೃಪ್ತಿಕರವಾಗಿದೆ. ಅನೇಕ ಮಂದಿ ಪಾರ್ಲಿಮೆಂಟ್ ಸದಸ್ಯರುಗಳು ತಮ್ಮ ವಂತಿಗೆಯನ್ನು ಸರಿಯಾಗಿ ಕೊಡುವುದಿಲ್ಲ. ಅವರಲ್ಲಿ ಕೆಲವರು ಪ್ರಾಂತ ಮತ್ತು ಜಿಲ್ಲಾ ಸಮಿತಿಗಳು ಹೆಚ್ಚು ಕೇಳುತ್ತಾರೆ ಎಂದು ಕಾರಣ ಕೊಡುತ್ತಾರೆ ಶಾಸನ ಸಭೆಗಳ ಬಗ್ಗೆಯಾದರೂ ಅನೇಕ ಪ್ರಾಂತಗಳಲ್ಲಿ ಬಾಕಿ ಇದೆ ಅನೇಕ ಪಾರ್ಲಿಮೆಂಟ್ ಸದಸ್ಯರು ಮತ್ತು ಶಾಸನ ಸಭಾ ಸದಸ್ಯರ ಇಂಥ ನಡವಳಿಕೆಯಿಂದ ಹಣಕಾಸಿನ ಪರಿಸ್ಥಿತಿ ಶೀಘ್ರಗೊಳ್ಳುವುದಷ್ಟೇ ಅಲ್ಲದೆ ಸದಸ್ಯರ ಮೇಲೆ ಬೇಸರದ ಪರಿಣಾಮವನ್ನು ಉಂಟುಮಾಡುತ್ತದೆ.

ಪ್ರಾಂತ ಸಮಿತಿಗಳು ನಿಧಾನವಾಗಿ ವರಮಾನದ ಅಂಶದ ಆಧಾರದ ಮೇಲೆ ಇತರ ಪಾರ್ಟಿ ಸದಸ್ಯರಿಂದ ಲೆವಿ ವಸೂಲಿ ಮಾಡುವುದನ್ನು ಜಾರಿಗೆ ತರಬೇಕು.

ಇದಲ್ಲದೆ, ಪಾರ್ಟಿ ಘಟಕಗಳ ಹಣವನ್ನು ಕೇಂದ್ರೀಕರಿಸಿ, ವೈಯಕ್ತಿಕವಾಗಿ ಖರ್ಚು ಮಾಡುವುದನ್ನು ತಪ್ಪಿಸಬೇಕು. ಪಾರ್ಟಿಗಾಗಿ ವಸೂಲಿ ಮಾಡಲಾಗುವ ಎಲ್ಲ ಹಣವನ್ನೂ ಘಟಕದ ಖಜಾಂಚಿಯ ಕೈಗೆ ಒಪ್ಪಿಸಬೇಕು ಮತ್ತು ಅದನ್ನು ಘಟಕದ ತೀರ್ಮಾನಕ್ಕೆ ಅನುಸಾರವಾಗಿ ಖರ್ಚು ಮಾಡಬೇಕು.

ಪಾರ್ಟಿ ಶಿಕ್ಷಣ

ಶಿಕ್ಷಣವನ್ನು ವ್ಯವಸ್ಥೆಗೊಳಿಸುವ ಅಗತ್ಯತೆಯನ್ನು ಒತ್ತಿ ಹೇಳಬೇಕಿಲ್ಲ. ಕೇಂದ್ರ ಕಾರ್ಯಕಾರೀ ಸಮಿತಿಯ ಶಿಕ್ಷಣ ಶಾಖೆಯನ್ನು ಸ್ಥಾಪಿಸುವ ಮತ್ತ ಅದು ಶಿಕ್ಷಣಕ್ಕೆ ವಿಷಯಗಳನ್ನು ತಯಾರಿಸುವ ಬಗ್ಗೆ ಹಿಂದೆಯೇ ಹೇಳಲಾಗಿದೆ. ಇದನ್ನು ಆಧಾರವಾಗಿರಿಸಿಕೊಂಡು ಸ್ವಲ್ಪ ಕಾಲದ ಪಾರ್ಟಿ ಶಾಲೆಗಳನ್ನು–ಸುಮಾರು ಏಳು ಅಥವಾ ಹತ್ತು ದಿನದ ಶಾಲೆ–ಪ್ರಾಂತಗಳಲ್ಲಿ ವ್ಯವಸ್ಥೆ ಮಾಡಬೇಕು. ಇದು ಅಗತ್ಯವಿದ್ದರೂ, ಇಷ್ಟೇ ಸಾಲದು.

ಜನಪ್ರಿಯ ಸಾಹಿತ್ಯವನ್ನು ತಯಾರಿಸುವುದು ಮತ್ತು ಪಾರ್ಟಿ ಶಾಲೆಗಳನ್ನು ನಡೆಸುವುದು, ಮುಖ್ಯವಾಗಿ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರಿಗೆ–ಮುಖ್ಯವಾಗಿ ಟ್ರೇಡ್ ಯೂನಿಯನ್‌ಗಳು ಮತ್ತು ರೈತಸಂಘಗಳ ಕಾರ್ಯಕರ್ತರಿಗೆ-ಮತ್ತು ಸ್ಥಳೀಯ ಸಂಸ್ಥೆಗಳು, ಸಹಕಾರ, ಸಾಮಾಜಿಕ ಅಭಿವೃದ್ಧಿ ಕೇಂದ್ರಗಳು, ಅಭಿವೃದ್ಧಿ ಸಮಿತಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರಿಗೆ ಶಾಲೆ ನಡೆಸುವುದೂ ಸಹ ಶಿಕ್ಷಣದ ಅಂಗವಾಗಿದೆ.

ನಮ್ಮ ಕಾರ್ಯಕರ್ತರಲ್ಲಿ ಅಖಿಲ ಭಾರತ ಗುರಿಗಳ ಬಗ್ಗೆ ಜಾಗೃತಿಯನ್ನು ಬಲಗೊಳಿಸುವುದು ಈಚೆಗಿನ ವರ್ಷಗಳಲ್ಲಿ ಅದು ಕಡಿಮೆಯಾಗುತ್ತಿದೆ, ಪಾರ್ಟಿ ಶಿಕ್ಷಣದ ಕರ್ತವ್ಯವಾಗಿದೆ. ಒಂದು ಪ್ರಾಂತದ ಕಾಮ್ರೇಡುಗಳಿಗೆ ಇತರ ಪ್ರಾಂತಗಳಲ್ಲಿ ಏನಾಗುತ್ತಿದೆ ಎಂಬುದು ಅತ್ಯಲ್ಪವಾಗಿ ತಿಳಿದಿರುತ್ತದೆ. ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಪಾರ್ಟಿ ನಾಯಕರುಗಳು ಭೇಟಿ ಇತ್ತು ತಮ್ಮ ಪ್ರಾಂತದಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಪ್ರಾಂತ ಸಮಿತಿಗಳು ಮತ್ತು ಕಾರ್ಯಕರ್ತರಿಗೆ ವರದಿ ಮಾಡುವಂತೆ ವ್ಯವಸ್ಥೆಗೊಳಿಸಬೇಕು. ಪ್ರಾಂತ ಸಮಿತಿಗಳು ತಮ್ಮ ಮುಖ್ಯವಾದ ಡಾಕ್ಯುಮೆಂಟುಗಳನ್ನು ಅನುವಾದಿಸಿ ಕೇಂದ್ರಕ್ಕೆ ಕಳಿಸಬೇಕು, ಇದರಿಂದ ಕೇಂದ್ರವು ಅದನ್ನು ಇತರ ಪ್ರಾಂತ ಸಮಿತಿಗಳಿಗೆ ಹಂಚಲು ಅನುಕೂಲವಾಗುತ್ತದೆ.

ಕಾರ್ಮಿಕ ವರ್ಗ ಮತ್ತು ರೈತರಿಂದ ಬರುವ ಬಹುಸಂಖ್ಯೆಯ ಪಾರ್ಟಿ ಸದಸ್ಯರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು ಮತ್ತು ಅವರಿಗೆ ಸಾಮಾನ್ಯ ಶಿಕ್ಷಣವನ್ನು ದೊರಕಿಸಬೇಕು. ಈ ಕಾರ್ಯವನ್ನು ಬಹು ಮುಖ್ಯವಾದ ಪಾರ್ಟಿ ಕಾರ್ಯವಾಗಿ ಪರಿಗಣಿಸಿ ಪ್ರತಿ ಘಟಕವೂ ಮಾಡುವಂತೆ ಭರವಸೆ ಕೊಡಬೇಕು.

ಪಾರ್ಟಿ ಸದಸ್ಯರಿಗೆ ಒಂದು ವರ್ಷದೊಳಗಾಗಿ ಪ್ರಾಂತದ ಪಾರ್ಟಿ ಪತ್ರಿಕೆಯನ್ನು ಓದಿ ಅರ್ಥ ಮಾಡಿಕೊಳ್ಳುವಷ್ಟು ಮತ್ತು ಪ್ರಸ್ತುತ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಬೆಳವಣಿಗೆಯನ್ನು ಅರ್ಥ ಮಾಡಿಕೊಳ್ಳುವಷ್ಟು ತಿಳುವಳಿಕೆಯನ್ನು ಕೊಡಬೇಕು

(ಮುಂದುವರಿಯುವುದು)

ದೊಡ್ಡಬಳ್ಳಾಪುರ ತಾಲ್ಲೂಕು—

ಆರೂಡಿ ರೈತ ಸಂಘದ ಬಹಿರಂಗ ಸಭೆ

ತಾ. 9—5—58ನೇ ಶುಕ್ರವಾರ ಸಂಜೆ 8-30ಕ್ಕೆ ದೊಡ್ಡಬಳ್ಳಾಪುರದ ತಾಲ್ಲೂಕು ಸಾಸಲು ಹೋಬಳಿ ಆರೂಡಿ ಗ್ರಾಮ ರೈತ ಸಂಘದವರು ಬಹಿರಂಗ ಸಭೆ ಏರ್ಪಡಿಸಿದ್ದರು. ಬನವತಿ, ಗುಂಡಪ್ಪ ನಾಯ್ಕನಹಳ್ಳಿ, ಗರಕೇನಹಳ್ಳಿ, ಗುನ್ನಾನಹಳ್ಳಿ ವಗೈರೆ ಗ್ರಾಮಗಳಿಂದಲೂ ಆರೂಡಿಯವರೂ ಸೇರಿ ಸುಮಾರು 400 ಜನ ರೈತರು ನೆರೆದಿದ್ದರು. ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ಎಚ್. ಮುಗುವಾಳಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದು ಬೆಂಗಳೂರಿನಿಂದ ಬಂದಿದ್ದ ಕೆ.ಪಿ.ಟಿ.ಯು.ಸಿ ಉಪಾಧ್ಯಕ್ಷರಾದ ಶ್ರೀ ಎಸ್. ಸೂರ್ಯನಾರಾಯಣ ರಾಯರನ್ನೂ, ಉತ್ತರ ತಾಲ್ಲೂಕು ರೈತ ಸಂಘದ ಖಜಾಂಚಿಗಳಾದ ಶ್ರೀ ರಾಜಣ್ಣನವರನ್ನೂ ಸಭಿಕರಿಗೆ ಪರಿಚಯ ಮಾಡಿಕೊಟ್ಟರು. ತಾಲ್ಲೂಕು ರೈತ ಸಂಘದ ಕಾರ್ಯದರ್ಶಿಗಳಾದ ಡಿ. ವಿ. ಗಂಗಾಧರರವರು, ಬಂದಿದ್ದ ಈ ನಾಯಕರುಗಳಿಗೂ ಸಭಿಕರುಗಳಿಗೂ ಸ್ವಾಗತವನ್ನು ಬಯಸಿ, ರೈತ ಸಂಘದ ಉದ್ದಿಶ್ಯಗಳನ್ನು ವಿವರಿಸಿ, ರೈತ ಸಂಘಕ್ಕೆ ಸದಸ್ಯರಾಗಿ ಸಂಘವನ್ನು ಬಲಪಡಿಸಬೇಕೆಂದು ಹೇಳಿದರು.

ಬೆಂಗಳೂರು ಉತ್ತರ ತಾಲ್ಲೂಕು ರೈತ ಸಂಘದ ಖಜಾಂಜಿ ರಾಜಣ್ಣನವರು, ತಮ್ಮ ತಾಲ್ಲೂಕಿನಲ್ಲಿ ರೈತ ಸಂಘ ಸ್ಥಾಪನೆಯಾದ ಮೇಲೆ ಅನೇಕ ಜೋಡೀ ಗ್ರಾಮಗಳಲ್ಲಿ ರೈತರೂ ಮತ್ತು ಜೋಡೀದಾರರ ಮಧ್ಯೆ ಇರುವ ಸಮಸ್ಯೆ ಪರಿಹಾರವಾಯಿತು, ರೈತರಿಗೆ ತಮ್ಮ ಹಕ್ಕುಬಾಧ್ಯತೆಗಳ ಬಗ್ಗೆ ಅರಿವುಂಟಾಯಿತು ಎಂದು ವಿವರಿಸಿದರು. ದೇಶಾದ್ಯಂತ ರೈತ ಸಂಘಗಳಾಗುತ್ತಿವೆ. ನಮ್ಮ ಸಮಸ್ಯೆಗಳನ್ನ ಪರಿಹಾರ ಮಾಡಿಕೊಳ್ಳಲೂ ಕೇಂದ್ರ ಪಾರ್ಲಿಮೆಂಟಿನ ವರೆಗೂ ಹೊಡೆದಾಡುವ ಅವಕಾಶವಿದೆ ಎಂದು ತಿಳಿಸಿದರು.

ಶ್ರೀ ಸೂರ್ಯನಾರಾಯಣ ರಾಯರು ಮಾತನಾಡುತ್ತಾ, ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದು 11 ವರ್ಷಗಳಾಯಿತು. ಚುನಾವಣೆಯ ಕಾಲ ಬಿಟ್ಟರೆ ಬೇರೆ ಕಾಲದಲ್ಲಿ ನಿಮ್ಮ ನೆನಪು ಕೂಡಾ ಮಾಡಿಕೊಳ್ಳುವುದಿಲ್ಲ. ಇದು ನಿಮ್ಮೂರಿನೊಳಗೇ ಅಲ್ಲ, ದೇಶದ ಎಲ್ಲಾ ಹಳ್ಳಿಗಳಲ್ಲೂ ಇವರು ಇದೇ ಮಾಡುತ್ತ ಇರುವುದು. ಎರಡೂವರೆ ಸಾವಿರ ಜನ ಈ ಊರಲ್ಲಿದ್ದೀರಿ. ಕುಡಿಯಲು ನೀರಿಲ್ಲ. ವಾಸಕ್ಕೆ ಒಂದಾದರೂ ನೆಟ್ಟಗಿರುವ ಮನೆಯಿಲ್ಲ. ಹುಲ್ಲು ಜೋಪಡಿಗಳಿಗೆ ಹುಲ್ಲು ನಚ್ಚಿಕೊಳ್ಳಲೂ ನಿಮಗೆ ಶಕ್ತಿಯಿಲ್ಲ. ನಿಮ್ಮ ದನಕರುಗಳನ್ನು ರಕ್ಷಿಸಿಕೊಳ್ಳಲು ಒಂದು ಪಶುಗಳ ಆಸ್ಪತ್ರೆಯೇ ಇಲ್ಲ. ನಿಮ್ಮ ಹೋಬಳಿಯಲ್ಲೇ ಇಲ್ಲ, ಅಲ್ಲೀಪುರದಲ್ಲಿ ಆಸ್ಪತ್ರೆ ಇದೆ, ಇಲ್ಲಿಂದ 6 ಮೈಲಿ ಆಗುತ್ತೆ. ಅಲ್ಲಿ 6 ತಿಂಗಳಿಂದ ಡಾಕ್ಟರೇ ಇಲ್ಲ. ಇದು ಕಾಂಗ್ರೆಸ್ ಸರ್ಕಾರ.

ಆದ್ದರಿಂದ ನಿಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಲು ರೈತರಾದ ನೀವು ಸಂಘಟಿತರಾಗದೆ, ಒಗ್ಗಟ್ಟಾಗದೆ ಏನನ್ನೂ ಸಾಧನೆ ಮಾಡಲಾಗುವುದಿಲ್ಲ. ರೈತರಿಗೂ ಕಾರ್ಮಿಕರಿಗೂ ನಿಕಟ ಸಂಬಂಧ ಬೆಳೆಯಬೇಕು, ನೀವು ಒಗ್ಗಟ್ಟಾಗಿ ಸಂಘವನ್ನು ಬಲಪಡಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ, ಎಲ್ಲರೂ ಹೆಚ್ಚು ಸಂಖ್ಯೆಯಲ್ಲಿ ಸಂಘದ ಸದಸ್ಯರಾಗಿರಿ, ಎಷ್ಟು ಜಾಗ್ರತೆ ನೀವು ಸಂಘಟಿತರಾಗುತ್ತೀರಾ ಅಷ್ಟು ಜಾಗ್ರತೆ ನಿಮ್ಮ ಗುರಿ ಸಾಧನೆಯಾಗುತ್ತೆ. ನಿಮ್ಮ ಕಾರ್ಯದರ್ಶಿಯವರಾದ ಎಂ. ಬೈರ ಹನುಮೇ ಗೌಡರು ಇಲ್ಲೇ ಇರುತ್ತಾರೆ. ನಿಮ್ಮ ಪೂರ್ಣ ಸಹಕಾರ ಕೊಟ್ಟು, ಸದಸ್ಯರ ಸಂಖ್ಯೆ ಹೆಚ್ಚಿಸಬೇಕೆಂದರು. ಶ್ರೀ ಚಿಕ್ಕ ಗಂಗಣ್ಣನವರಿಂದ ವಂದನಾರ್ಪಣೆಯಾದ ನಂತರ ಸಭೆ ಜಯಘೋಷಗಳೊಂದಿಗೆ ಕೊನೆಗೊಂಡಿತು.

ಉಜನಿಹೊಸಹಳ್ಳಿಯಲ್ಲಿ ಉದಯ ಸಂಘದ ಮಿತ್ರಕಲಾಮಂಡಲಿಯವರಿಂದ ನಾಟಕ ಪ್ರದರ್ಶನ

ತಾ. 8—5—'58ನೇ ಗುರುವಾರ ದೊಡ್ಡಬಳ್ಳಾಪುರದ ತಾಲ್ಲೂಕು ಸಾಸಲು ಹೋಬಳಿ ಉಜನಿ ಹೊಸಳ್ಳಿ ಗ್ರಾಮದಲ್ಲಿ, ಉದಯ ಸಂಘದ ಮಿತ್ರ ಕಲಾ ಮಂಡಲಿಯವರು ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ಎಚ್. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ "ಈಶ್ವರೀ ಸೂತ್ರ" ಶಿವಾಜಿ ಪ್ರಾಬಲ್ಯವೆಂಬ ನಾಟಕವನ್ನು ಬಹಳ ಚೆನ್ನಾಗಿ ಪ್ರದರ್ಶನ ಮಾಡಿದರು. ಹೆಂಗಸರೂ ಆದಿಯಾಗಿ 4 ಸಾವಿರಕ್ಕೂ ಮೇಲ್ಪಟ್ಟ ರೈತರು ನೆರೆದಿದ್ದರು. ಶ್ರೀ ಡಿ. ವಿ. ಗಂಗಾಧರ್‌ರವರೂ, ಅಧ್ಯಕ್ಷರೂ ಕೂಡ ಕಲಾವಿದರ ಬಗ್ಗೆ ಮೆಚ್ಚಿಗೆ ತೋರಿಸಿ, ನೆರೆದಿದ್ದ ಕಲಾಭಿಮಾನಿಗಳಿಗೆ ಹಿತವಚನಗಳನ್ನು ಹೇಳಿದರು.

ಕೋಪೆನ್ ಹೇಗೆನ್ನಿನಲ್ಲಿ ನಡೆದ 'ನಾಟೋ' ಸಲಹಾಸಮಿತಿಯ ಸಭೆ

(೩ನೇ ಪುಟದಿಂದ)

ಸಾಧನೆಯನ್ನು ಹೇಗೆ ಸಾಧಿಸಿ ಕೊಳ್ಳಬೇಕೆಂಬುದನ್ನೂ ಬಗೆಹರಿಸಬೇಕೆಂದು ಪ್ರಸ್ತುತ ಸಭೆಗೆ ಕರೆಯನ್ನು ನೀಡಲಾಗಿದೆ.

ಕೋಪೆನ್‌ಹೇಗೆನ್ನಿನಲ್ಲಿ 'ನಾಟೋ' ಕೂಟದ ಆಲೋಚನಾ ಸಮಿತಿಯ ಸಭೆಯು ಪ್ರಾರಂಭವಾಗುವುದಕ್ಕೆ ಒಂದು ದಿನ ಮೊದಲೇ, ಅಮೆರಿಕದ ಸಂಯುಕ್ತ ರಾಜ್ಯಗಳು—ಯೂರೋಪಿನಲ್ಲಿ ಪರಮಾಣು–ವಿಮುಕ್ತ ವಲಯದ ನಿರ್ಮಾಣದ ಸಲುವಾಗಿ ಮಂಡಿಸಲಾಗಿರುವ ಪೋಲಿಷ್ ಯೋಜನೆಯನ್ನು ತಿರಸ್ಕರಿಸುವ ಅಧಿಕೃತ ಪತ್ರವನ್ನು ಇತರ ದೇಶಗಳಿಗೆ ಕಳಿಸಿಕೊಟ್ಟದು ಗಣನೀಯವಾದ ವಿಷಯ. ಅಮೆರಿಕದ ಸಂಯುಕ್ತ ರಾಜ್ಯಗಳ ಈ ಚರ್ಯೆಯು 'ನಾಟೋ' ಆಲೋಚನಾ ಸಭೆಗೆ ಬಂದ ಅನೇಕ ಪ್ರತಿನಿಧಿಮಂಡಲಗಳಿಗೆ ಅಸಂತೃಪ್ತಿಯನ್ನುಂಟು ಮಾಡಿದೆಯೆಂದು ವಾರ್ತಾ ಪತ್ರಿಕೆಗಳು ವರದಿ ಮಾಡುತ್ತವೆ.

'ನಾಟೋ' ಆಲೋಚನಾ ಸಮಿತಿಯ ಪ್ರಥಮ ಬಹಿರಂಗ ಸಭೆಯು ಡೆನ್ಮಾರ್ಕ್ ದೇಶದ ಪ್ರಧಾನ ಮಂತ್ರಿ ಮತ್ತು ವಿದೇಶಾಂಗ ಮಂತ್ರಿಯವರಾದ ಹ್ಯಾನ್ಸೆನ್‌ರವರ ಭಾಷಣದ ಮೂಲಕ ಉದ್ಘಾಟಿಸಲ್ಪಟ್ಟಿತು. 'ನಾಟೋ' ಕೂಟವನ್ನು ಬಲಪಡಿಸುವ ಅವಶ್ಯಕತೆಯನ್ನೂ, 'ರಕ್ಷಣಾ' ಸಂಘಟನೆಯಾಗಿ 'ನಾಟೋ' ಕೂಟದ ಮಹತ್ವವನ್ನೂ ಅವರು ಒತ್ತಿ ಹೇಳಿದರು. ಅದೇ ವೇಳೆಯಲ್ಲಿ ಶಾಂತಿಯ ಸಲುವಾಗಿಯೂ ಮತ್ತು ಅಂತರರಾಷ್ಟ್ರೀಯ ಪ್ರಕ್ಷುಬ್ದತೆಯ ಸಡಿಲತೆಯ ಸಲುವಾಗಿಯೂ, ಡೇನಿಷ್ ಜನತೆಯು ಮತ್ತು ಇತರ ಸ್ಕ್ಯಾಂಡಿನೇವಿಯನ್ ದೇಶಗಳ ಜನತೆಗಳ ಅಭೀಪ್ಸೆಗಳನ್ನು ಅವರ ಭಾಷಣವು ಪ್ರತಿಬಿಂಬಿಸಿತು. ನಿರ್ದಿಷ್ಟವಾಗಿ ಅವರು ಹೀಗೆಂದರು: ಪ್ರಕ್ಷುಬ್ಧತೆಯ ಸಡಿಲತೆಯನ್ನು ಸಾಧಿಸಿಕೊಳ್ಳುವುದರ ಸಲುವಾಗಿ ಖಂಡಿತವಾಗಿಯೂ ಅಸ್ತಿತ್ವದಲ್ಲಿರುವ ಎಲ್ಲ ಸಾಧ್ಯತೆಗಳನ್ನೂ ನಾವು ಹುಡುಕಿ ನೋಡುವುದರಲ್ಲಿ ವಿಫಲರಾದರೆ, ನಾವು ನಮ್ಮ ದೇಶಗಳ ಜನತೆಗಳಿಗೆ ನಮ್ಮ ಕರ್ತವ್ಯವನ್ನು ಪಾಲಿಸಿದಂತಾಗುವುದಿಲ್ಲವೆಂಬುದು ಸ್ಪಷ್ಟವಾಗಿದೆ......... ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಪ್ರಕ್ಷುಬ್ಧತೆಯನ್ನು ತಗ್ಗಿಸುವ ಒತ್ತಡದ ಅವಶ್ಯಕತೆಯು ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಕಂಡುಬರುತ್ತದೆ ಮತ್ತು ಡೆನ್ಮಾರ್ಕಿನಲ್ಲಿ ಆ ಅವಶ್ಯಕತೆಯು ಕಡಮೆಯಾದುದೇನೂ ಅಲ್ಲ........ ಆದುದರಿಂದಲೇ ನಾವು, ಮಾಸ್ಕೋದಲ್ಲಿ ಈಗ ನಡೆಯುತ್ತಿರುವ ಪ್ರಾರಂಭಿಕ ದೌತ್ಯ ವಾರ್ತಾಲಾಪಗಳ ಪರಿಣಾಮಗಳನ್ನು ಅತ್ಯಂತ ಹತ್ತರದಿಂದ ಅನುಸರಿಸುತ್ತಿದ್ದೇವೆ.

ಲುಕ್ಸೆಂಬರ್ಗ್ ದೇಶದ ವಿದೇಶಾಂಗ ಮಂತ್ರಿ ಬೆಕ್‌ರವರು ತಮ್ಮ ಭಾಷಣದಲ್ಲಿ ಸೋವಿಯತ್ ವಿರೋಧದ ಮಿಥ್ಯಾ ಪ್ರಚಾರವನ್ನು ನಡೆಸಿದರು. 'ನಾಟೋ' ಕೂಟದ ಮಹಾ ಕಾರ್ಯದರ್ಶಿ ಸ್ಪಾಕ್‌ರವರು ಈ ಬಹಿರಂಗ ಸಭೆಯಲ್ಲಿ ಮಾತನಾಡಿದವರಲ್ಲಿ ಕಡೆಯವರಾಗಿದ್ದರು. ಅಟ್ಲಾಂಟಿಕ್ ಕೂಟವು "ಜನತೆಗಳು ಶಾಂತಿ–ಸ್ವಾತಂತ್ರ್ಯಗಳಲ್ಲಿ ಬಾಳಲು ಅವರಿಗಿರುವ ಹಕ್ಕನ್ನು ರಕ್ಷಿಸುವ" ಕಾರ್ಯಭಾರವನ್ನು ಸಾಧಿಸಿದೆಯೆಂದು ಅವರು ಪ್ರತಿಪಾದಿಸಿದರು ಮತ್ತು ಈ ಸಂದರ್ಭದಲ್ಲಿ 'ನಾಟೋ' ಕೂಟದ ದೇಶಗಳು ತಮ್ಮ "ರಕ್ಷಣಾ ಪ್ರಯತ್ನ"ಗಳನ್ನು ಮುಂದುವರಿಸಬೇಕೆಂದು ಅವರು ಈ ಸಂದರ್ಭದಲ್ಲಿ ಪ್ರೇರಣೆಯನ್ನಿತ್ತರು. 'ನಾಟೋ' ಕೂಟವು ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳುತ್ತಿದೆಯೆಂಬುದನ್ನು ರುಜುವಾತು ಪಡಿಸಲು ಸ್ಪಾಕ್ ಪ್ರಯತ್ನಿಸಿದರು; ಆದರೆ, 'ನಾಟೋ' ಕೂಡದಲ್ಲಿನ ಆರ್ಥಿಕ ಸಹಕಾರವು ಅನೇಕ ತೊಂದರೆಗಳನ್ನು ಎದುರಿಸಿತೆಂಬುದನ್ನೂ ಮತ್ತು "ದೊಡ್ಡ ಪ್ರಗತಿಯು ಉಂಟಾಗಿಲ್ಲವೆಂಬುದನ್ನೂ" ಅವರು ಒಪ್ಪಿಕೊಳ್ಳಲೇ ಬೇಕಾಯಿತು.

'ನಾಟೋ' ಕೂಟದ ಕಾರ್ಯದರ್ಶಿ ಕಚೇರಿಯ ಚಟುವಟಿಕೆಯ ಕುರಿತು ವರದಿಯನ್ನು ನೀಡಲು, ಮಧ್ಯಾಹ್ನದಲ್ಲಿ ತೆರೆಯಲಾದ ಖಾಸಗೀ ಸಭೆಯೊಂದರಲ್ಲಿ ಸ್ಪಾಕ್‌ರವರು ಪುನಃ ಮಾತನಾಡಿದರು.

"ತಾಸ್"

ಸುದ್ದಿ ಸಂಗ್ರಹ

ಕಾಂಗ್ರೆಸ್ ಎಂ.ಎಲ್.ಎ.ಗಳ ಟಿಕೇಟಿಲ್ಲದೆ ಪ್ರಯಾಣ

ಬಿಜಾಪುರ ಜಿಲ್ಲೆಯ ಸಿಂದಗಿ ಮತಕ್ಷೇತ್ರದಿಂದ ಬೆಂಗಳೂರು ಅಸೆಂಬ್ಲಿಗೆ ಕಾಂಗ್ರೆಸ್ಸಿನಿಂದ ಆರಿಸಿ ಬಂದಿರುವ ಶ್ರೀ ಶಂಕರಗೌಡಾ ಪಡಗಾನೂರ ಇವರು ಟಿಕೇಟಿಲ್ಲದೆ ಬೆಂಗಳೂರಿನಿಂದ ಬಿಜಾಪುರತನಕ ಪ್ರಯಾಣ ಬೆಳೆಸಿರುವರೆಂದೂ, ಬಿಜಾಪುರ ರೈಲ್ವೆ ಸ್ಟೇಷನ್ನಿನಲ್ಲಿ ಅವರನ್ನು ಹಿಡಿಯಲಾಯಿತೆಂದೂ ತಿಳಿದು ಬರುತ್ತದೆ. ಈ ಮಹಾಶಯರು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂಡ್ರುವುದರ ಸಲುವಾಗಿ ಬೆಂಗಳೂರಿಂದ ಅಸೆಂಬ್ಲಿ ಸಭೆಯನ್ನು ಬಿಟ್ಟು ಬಿಜಾಪುರಕ್ಕೆ ಹೊರಟಿದ್ದರಂತೆ. ಇವರು ತಮ್ಮ ಜೊತೆಯಲ್ಲಿ ಕೆಲವು ಗೆಳೆಯರನ್ನು ಕರಕೊಂಡು ಬೆಂಗಳೂರಿನಿಂದ ಮೊದಲನೇ ವರ್ಗದಲ್ಲಿ ಪ್ರಯಾಣ ಬೆಳೆಸಿದರಂತೆ. ಬಿಜಾಪುರ ಸ್ಟೇಷನಿನಲ್ಲಿ ಸುರಳೀತ ರೀತಿಯಿಂದ ಪಾರಾಗುವುದರ ಸಲುವಾಗಿ ತಾವು ತೆಲಗಿಯ ಹತ್ತಿರ ಯಾವುದೋ ಸ್ಟೇಷನ್ನಿನಿಂದ ಒಂದು ಮೂರನೇ ವರ್ಗದ ಟಿಕೇಟು ತಗೊಂಡಿದ್ದರಂತೆ. ಬಿಜಾಪುರ ಸ್ಟೇಷನ್ ಬಂದ ಕೂಡಲೇ ತಮ್ಮ ಗೆಳೆಯರನ್ನು ಹಾಗೆಯೇ ಬಿಟ್ಟು, ಹೊರಗೆ ಬುಕ್ಕಿಂಗ್ ಆಫೀಸಿನಲ್ಲಿ ಪ್ಲಾಟ್‌ಫಾರಂ ಟಿಕೇಟ್ ತಗೊಂಡು ಸ್ಟೇಷನಿನ ಒಳಗೆ ಹೋಗಿ, ತಮ್ಮ ಗೆಳೆಯರನ್ನು ಬಚಾವ್ ಮಾಡುವಾಗ ಪ್ರತ್ಯಕ್ಷ ಹಿಡಿಯಲ್ಪಟ್ಟರಂತೆ. ಬಿಜಾಪುರ ಸ್ಟೇಷನ್ನಿನಲ್ಲಿ ಮೊದಲನೇ ವರ್ಗದ ಡಬ್ಬಿಯಿಂದ ಇಳಿಯುವಾಗಲೇ ರೈಲ್ವೆ ಪೋಲೀಸ್ ಇವರನ್ನು ನೋಡಿ ಸಂಶಯದಿಂದ ಇವರ ಚಲನವಲನಗಳನ್ನು ಗುಪ್ತ ರೀತಿಯಿಂದ ನೋಡುತ್ತಿದ್ದು, ಪ್ಲಾಟ್‌ಫಾರಂ ಟಿಕೇಟನ್ನು ತನ್ನ ಗೆಳೆಯರಿಗೆ ಕೊಟ್ಟು ಹೊರಗೆ ಬರುವಾಗ ಇವರನ್ನು ಹಿಡಿದು ಚೌಕಾಶಿ ಮಾಡಲಾಯಿತಂತೆ. ಪೋಲೀಸ್ ಮತ್ತು ರೈಲ್ವೆ ಅಧಿಕಾರಿಗಳು ತರಬಂದಾಗ "ತಾನು ಕಾಂಗ್ರೆಸ್ ಎಂ. ಎಲ್. ಎ. ಇದ್ದೇನೆಂದು" ಬೆದರಿಕೆ ಹಾಕಿದರೆಂದೂ ಆದರೆ ರೈಲ್ವೆ ಅಧಿಕಾರಿಗಳು ಇದಕ್ಕೆ ಅಂಜಲಿಲ್ಲೆಂದೂ, ಕೆಲಗಿಯಿಂದ ಇವರ ಮೇಲೆ ಪರ ಚಾರ್ಜ ಮಾಡಲಾಯಿತೆಂದೂ ಮತ್ತು ಇವರ ಮೇಲೆ ರೈಲ್ವೆಗೆ ಮೋಸ ಮಾಡಿದರೆಂದು ಖಟ್ಲೆ ಹಾಕುವುದರ ಸಲುವಾಗಿ ಹೆಚ್ಚಿನ ಚೌಕಾಶಿ ನಡೆದಿದೆಂದೂ ತಿಳಿದು ಬರುತ್ತದೆ.

ಎಂ.ಎಲ್.ಎ. ಗಳಿಗೆ ಮೊದಲನೇ ವರ್ಗದ ಟಿಕೇಟಿನ ರೊಕ್ಕ ಮತ್ತು ಇತರ ಭತ್ತೆ ಸಿಗುತ್ತಿದ್ದರೂ, ರಾಷ್ಟ್ರದ ಅಭಿವೃದ್ಧಿ ಸಲುವಾಗಿ ದುಡಿಯುವ ಈ ಕಾಂಗ್ರೆಸ್ ಎಂ. ಎಲ್. ಎ. ತನ್ನದೇ ಆದ ಸರಕಾರವನ್ನು ಮೋಸ ಮಾಡುತ್ತಿರುವುದನ್ನು ನೋಡಿ ಜನರೆಲ್ಲ ಇದೆಂಥಾ ಕಾಂಗ್ರೆಸ್ ಮುಖಂಡರಪ್ಪಾ ಎಂದು ಉದ್ಗಾರ ತೆಗೆಯುತ್ತಿರುವರು. ಟಿಕೇಟಿಲ್ಲದೇ ಒಂದನೇ ವರ್ಗದಲ್ಲಿ ಪ್ರಯಾಣ ಮಾಡಬೇಕಾದರೆ ಇವರಲ್ಲಿ ಎಷ್ಟು ಧೈರ್ಯ ಮತ್ತು ಜಾಣತನವಿರಬೇಕು. ಮೈಸೂರು ರಾಜ್ಯದಲ್ಲಿಯ ನೌಕರದಾರರು ಖಾದಿ ಅರಿವೆ ಮತ್ತು ಗಾಂಧಿ ಟೊಪ್ಪಿಗೆಯನ್ನು ನೋಡಿ ಅಂಜುತ್ತಾರೆ ಮತ್ತು ಇಂಥಾ ಅರಿವೆ ಹಾಕಿಕೊಂಡವರು ಬೇಕಾದಂಥಾ ಕೆಲಸಗಳನ್ನು ಮಾಡುತ್ತಾರೆಂದು ಸಾರ್ವಜನಿಕರ ತಕರಾರು ಈ ಘಟನೆಯಿಂದಾಗಿ ಖರೆ ಅನಿಸಹತ್ತಿದೆ.

ಮೊನ್ನೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಹೈ ಕಮಾಂಡಿನವರು ಶ್ರೀ ಶಂಕರಗೌಡ ಪಡಗಾನೂರ ಇವರಿಗೆ ಟಿಕೇಟ್ ಕೊಡದೆ ಇವರ ಪತ್ನಿಯವರಿಗೆ ಕೊಟ್ಟಿದ್ದರು. ಶಂಕರಗೌಡರು ಡಮ್ಮಿ ಅಂತ ಅರ್ಜಿ ಕೊಟ್ಟಿದ್ದರು. ಆದರೆ ಅರ್ಜಿ ಪರ ತಗೊಳ್ಳುವ ಕೊನೆಯ ದಿವಸ ತಮ್ಮ ಪತ್ನಿಯವರಿಗೆ ಹೇಳಿ, ಅವರ ಅರ್ಜಿಯನ್ನು ಪರತ ತೆಗೆಸಿ ತಾನೇ ಉಮೇದುವಾರರಾಗಿ ನಿಂತು ಆರಿಸಿ ಬಂದರು. ಕಾಂಗ್ರೆಸ್ ಶಿಸ್ತಿನ ವಿರುದ್ಧ ಇವರು ವರ್ತಿಸಿದರೂ ಕೂಡ, ಕಾಂಗ್ರೆಸ್ಸಿನವರು ಇವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

ಈಗ ರೈಲ್ವೆಗೆ ಮೋಸ ಮಾಡುತ್ತಿರುವುದನ್ನು ನೋಡಿಯಾದರೂ ಕಾಂಗ್ರೆಸ್ಸಿನವರೂ, ಸರಕಾರದವರೂ ಇವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳುವರೇ ?

ಯದ್ದಲಗುಡ್ಡ ಗ್ರಾಮನಿವಾಸಿಗಳ ಗೋಳಾಟ!

ಬೆಳಗಾಂವ ಜಿಲ್ಲೆಯ ಗೋಕಾಕ ತಾಲೂಕ ಪೈಕಿ ಯದ್ದಲಗುಡ್ಡ ಗ್ರಾಮದಲ್ಲಿ ಹೆಚ್ಚಾಗಿ ಹಿಂದುಳಿದ ಜಾತಿಯ ಜನರಿದ್ದಾರೆ. ಮಳೆಗಾಲ ಆರಂಭವಾದೊಡನೆ ಊರ ಜನರಿಗೆ ಹೊರಗೆ ಹೋಗುವದೆಂದರೆ, ಪ್ರಾಣಸಂಕಟ ಸಮಾಜ ವಿಕಾಸ ಯೋಜನೆ ಆರಂಭವಾಗಿ 6-7 ವರ್ಷಗಳಾದರೂ ಈ ದುರ್ದೈವಿ ಹಳ್ಳಿಗೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಜನರು ಶ್ರಮದಾನದಿಂದ ಕೆಲಸ ಮಾಡಲಿಕ್ಕೆ ತಯ್ಯಾರು ಇದ್ದರೂ ಸಹ ಸಮಾಜ ವಿಕಾಸ ಯೋಜನೆಯ ಅಧಿಕಾರಿಗಳು ಇತ್ತಕಡೆಗೆ ಸ್ವಲ್ಪವಾದರೂ ಹಣಿಕೆ ಹಾಕಿ ನೋಡಲಿಲ್ಲ. ಗ್ರಾಮ ಸೇವಕನಂತೂ ಆರು ತಿಂಗಳಿಗೊಮ್ಮೆ ಊರಿಗೆ ಬಂದು ಒಣ ಜಂಭದ ಮಾತುಗಳನ್ನಾಡಿ ನುಣಚಿಕೊಂಡು ಹೋಗುವನು. ಊರಲ್ಲಿ ಬಹಳ ನೀರಾವರಿ ತೋಟಗಳಿದ್ದು ಒಬ್ಬರಿಗೂ ತಗಾಯಿ ಮೇಲೆ ಒಂದೂ ಸಹ ಎಂಜಿನ್ ಕೊಡಲಿಲ್ಲ. ಇಡೀ ನಮ್ಮ ಕುಂದರನಾಡಿನಲ್ಲಿ ಪ್ರತಿಯೊಂದು ಊರಿಗೆ ರಸ್ತೆ, ಸಾಲೆ, ಬಾವಿಗಳನ್ನು ಮಾಡಿಸಲಾಯಿತು. ಆದರೆ ಈ ಊರಿಗೆ ಮಾತ್ರ ಕನಸು ಕನಸಾಗಿಯೇ ಉಳಿಯಿತು. ಮೊದಲನೆ ಯೋಜನೆ ಮುಗಿದು ಎರಡನೇ ಪಂಚ ವಾರ್ಷಿಕ ಯೋಜನೆ ಆರಂಭವಾದರೂ ಈ ಊರಿನ ಪಾಲಿಗೆ ಬರೇ ಶೂನ್ಯವೇ! ಪಾಪ ರೈತ ಜನರು ಇವರ ದಾರಿ ಕಾಯ್ದು ಕಾಯ್ದು ಬೇಸತ್ತು ಒಂದು ಸಾಲೆಯನ್ನು ಬಹಳ ಶ್ರಮವಹಿಸಿ ಶ್ರಮದಾನದಿಂದ ಕಟ್ಟಲಿಕ್ಕೆ ಪ್ರಾರಂಭ ಮಾಡಿದರು. ಕಟ್ಟಡದ ಅರ್ಧ ಕೆಲಸ ಆದ ಮೇಲೆ ಹಠಾತ್ತನೆ ಈ ತಾಲೂಕಿನ ಮೇ॥ ತಹಶೀಲದಾರ ಸಾಹೇಬರು ಬಂದು ಸಾಲೆಯ ಕಟ್ಟಡವನ್ನು ನೋಡಿದರು. ಊರ ಜನರು ಕೂಡಿಕೊಂಡು ಸರಕಾರದವರ ಕಡೆಯಿಂದ ಸ್ವಲ್ಪವಾದರೂ ಸಹಾಯ ಕೊಡಿರೆಂದು ಕೇಳಿದ ಪ್ರಕಾರ ಸಾಹೇಬರು ಕೊಡುವುದಾಗಿ ಹೇಳಿ ಹೋದರು. ಅದರ ಪ್ರಕಾರ ಅರ್ಜಿಯು ಮುಖಾಂತರ ಕೇಳಿಕೊಳ್ಳಲಾಗಿ ಅದಕ್ಕೆ ಉತ್ತರ: ಕೊಡುವುದಿಲ್ಲ ಅಂತ ಹೇಳಿ ಕಳಿಸಿದರು. ಊರಲ್ಲಿ ಎಲ್ಲರೂ ಬಡವರಿದ್ದ ಕಾರಣ ಸಾಲೆಯ ಮೇಲಿನ ಹಂಚುಗಳನ್ನು ತರಲಿಕ್ಕೆ ಆಗಲಿಲ್ಲ. ಇನ್ನಾದರೂ ಕಟ್ಟಡವು ಮಳೆಯಲ್ಲಿಯೇ ನಿಂತಿರುವುದು. ಇನ್ನು ಮೇಲಾದರೂ ಸರಕಾರದವರು ಹಂಚುಗಳನ್ನು ಕೊಟ್ಟು ಮಳೆಯಲ್ಲಿ ನಿಂತ ಕಟ್ಟಡವನ್ನು ಉಳಿಸಬೇಕು. ಮತ್ತು ಊರ ಮುಂದಿನ ರಸ್ತೆಯನ್ನು ಸಹ ಹೇಳತೀರದು. ಮಳೆಗಾಲದಲ್ಲಿ ಅಲ್ಲಿ ದಾಟುವದೇ ಕಠಿಣವಾಗಿ ಹೋಗುತ್ತದೆ. ಊರಿಂದ ಒಂದು ಫರ್ಲಾಂಗು ಅಂತರದ ಮೇಲೆ ಲೋಕಲ್ ಬೋರ್ಡು ರಸ್ತೆಯು ಇರುವದು. ಅಲ್ಲಿಯ ವರೆಗೆ ರಸ್ತೆ ಮಾಡಬೇಕಾದರೆ ಭೂಮಾಲಿಕರ ಹೊಲಗಳು ಅಡ್ಡ ಬರುತ್ತವೆ. ರಸ್ತೆಯದು ಅತಿ ಜರೂರು ಇರುತ್ತದೆ. ಆದ ಕಾರಣ ಸರಕಾರದವರು ಆ ಹೊಲಗಳನ್ನು ಅಳೆದು ಊರ ಜನರಿಗೆ ಕಿಮ್ಮತ್ ಮಾಡಿ ಕೊಡಿಸಬೇಕು. ಶ್ರಮದಾನದಿಂದ ರಸ್ತೆ ಮಾಡಿಕೊಳ್ಳಲಿಕ್ಕೆ ಜನರು ತಯಾರು ಇರುವರು. ಈ ಊರಿಗೆ ಬಾವಿ ಇಲ್ಲವೇ ಇಲ್ಲ. ಹಳ್ಳದ ನೀರು ಕುಡಿಯಬೇಕಾಗುತ್ತದೆ. ಅದರಿಂದ ಅನೇಕ ಪಿಡುಗು ರೋಗಗಳು ಹಬ್ಬುತ್ತಿವೆ. ಇದರಿಂದಾಗಿ, ಊರಿಗೆ ಬಾವಿಯ ಅವಶ್ಯಕತೆ ಬಹಳ ಜರೂರು ಇರುವದು. ಇದರ ಬಗ್ಗೆ ಮೇ॥ ತಹಶೀಲ್ದಾರ ಸಾಹೇಬ ಗೋಕಾಕ ಇವರಿಗೆ ಒಂದು ಅರ್ಜಿಯನ್ನು ಸಹ ಮಾಡುವದರಲ್ಲಿ ಬಂದಿದೆ. ಇನ್ನು ಮೇಲಾದರೂ ಡೆಪ್ಯೂಟಿ ಕಮೀಶನರರೂ ಮತ್ತು ಎ. ಇ. ಎಸ್. ಅಧಿಕಾರಿಗಳು ಇತ್ತಕಡೆಗೆ ಗಮನವೀಯುವರೇ ?

ದೊಡ್ಡಬಳ್ಳಾಪುರದ ಪವರ್‌ಲೂಂ ಕಾರ್ಮಿಕರ ಮೇಲೆ ಸಾಹುಕಾರ ಬಿ.ಕೆ. ಅರಸಪ್ಪನವರ ದೌರ್ಜನ್ಯ

ಈ ಸಾಹುಕಾರರ ಹುರಿ ಮಿರ್ಷನಲ್ಲಿ ಕೆಲಸಕ್ಕೆ 3 ಜನ ಕಾರ್ಮಿಕರು ರಾಘವಪ್ಪ, ನಾರಾಯಣಪ್ಪ ಮತ್ತು ಕನಕಪ್ಪ ಎನ್ನುವ ಕಾರ್ಮಿಕ ಸಂಘದ ಸದಸ್ಯರುಗಳು ದೊಡ್ಡಬಳ್ಳಾಪುರಧಲ್ಲಿ ನಡೆದ ಕರಗದ ಪ್ರಯುಕ್ತ 4-5 ದಿವಸಗಳು ಮಾಲೀಕರ ಅನುಮತಿ ಪಡೆದು ಕೆಲಸಕ್ಕೆ ಹೋಗಲಿಲ್ಲವಂತೆ. ತಾರೀಖು 9—5—58ನೇ ಶುಕ್ರವಾರ ಬೆಳಿಗ್ಗೆ ಮೇಸ್ತ್ರಿಯನ್ನು ಕಳಿಸಿ ಮನೆಯಲ್ಲಿದ್ದ ಈ ಮೂವರನ್ನು ಕರಸಿಕೊಂಡು ಆಫೀಸು ರೂಮಿನಲ್ಲಿ ಹಾಕಿ, ಗಜದ ಕಡ್ಡಿಯಿಂದ ಹೊಡೆದು, ಕಾಲಿನಿಂದ ಒದ್ದು ನೀವು ಬೇರಿಂಗುಗಳನ್ನು ಕದ್ದಿದ್ದೀರಿ. ಒಪ್ಪಿಕೊಳ್ಳದಿದ್ದರೆ ಪೋಲೀಸಿಗೆ ಕೊಟ್ಟು ಸಜಾ ಮಾಡಿಸುವುದಾಗಿ ಹೇಳಿದರಂತೆ. ಅವರು ನಿರಪರಾಧಿಗಳೆಂದು ಎಷ್ಟು ಹೇಳಿದರೂ ಕೇಳದೆ ಪೋಲೀಸ್ ಸಬ್‌ಇನ್ಸ್‌ಪೆಕ್ಟರನ್ನು ಮನೆಗೇ ಕರಸಿಕೊಂಡು ಅವರ ಸುಬರ್ದಿಗೆ ಕೊಟ್ಟರಂತೆ. ಸದರಿ ರಾಘವಪ್ಪ ವಗೈರೆಯವರು ನಾವು ಕೆಲಸಕ್ಕೆ ಬರುವುದಿಲ್ಲವೆಂದು ಮೇಸ್ತ್ರಿಗಳಿಗೆ ತಿಳಿಸಿದ್ದರು. ಈ ರೀತಿ ಸುಳ್ಳು ಆರೋಪಣೆ ನಮ್ಮ ಮೇಲೆ ಹಾಕಿ ಹೊಡೆದಿದ್ದಾರೆಂದು, ಮೈಮೇಲೆ ಆಗಿದ್ದ ಗಾಯಗಳನ್ನ ತೋರಿಸಿದರಂತೆ. ಇಷ್ಟಾದರೂ ಸಬ್ ಇನ್‌ಪೆಕ್ಟರ ಜೊತೆಯಲ್ಲಿ ಬಂದಿದ್ದ ಪೋಲೀಸ್ ಕಾನ್ಸ್‌ಟೇಬಲ್ ಸಾಹುಕಾರರ ಶಹಭಾಸ್‌ಗಿರಿ ಪಡೆಯಲು ಸದರಿ ಕಾರ್ಮಿಕರನ್ನು ಕುತ್ತಿಗೆಯ ಮೇಲೆ ಬಲವಾಗಿ ಹೊಡೆದು ಪೋಲೀಸ್ ಠಾಣೆಗೆ ಎಳೆದುಕೊಂಡು ಹೋದರಂತೆ. ಆ ದಿನ ಪೂರ್ಣ ಅನ್ನ ನೀರು ಕೊಡದೆ ಅವರನ್ನು ಸ್ಟೇಷನ್ನಲ್ಲೆ ಇಟ್ಟುಕೊಂಡಿದ್ದರು. ಸಂಜೆ 6 ಘಂಟೆ ಸುಮಾರಿಗೆ ಶ್ರೀಮಂತ ಅರಸಪ್ಪನವರು ಅವರ ಸ್ನೇಹಿತರಾದ ಜನಾಬ್ ಹಕೀಂ ಸಾಹೇಬರೊಂದಿಗೆ ಸ್ಟೇಷನಿಗೆ ಹೋದ ತಕ್ಷಣ ಸಬ್‌ಇನ್ಸ್‌ಪೆಕ್ಟರವರು ಸದರಿ ಮೂರು ಜನ ಬಡಕಾರ್ಮಿಕರನ್ನು ಆಫೀಸಿಗೆ ಕರೆಸಿ ಬೂಟ್ಸ್ ಕಾಲಿನಲ್ಲಿ ಒದ್ದು, ಇವರನ್ನ ಲಾಕಪ್ಪಿನಲ್ಲಿ ಹಾಕಿ ಅರಸಪ್ಪನವರು ಹೇಳಿಕಳಿಸುವ ವರೆಗೂ ಬಿಡಬೇಡಿರೆಂದು ಆರ್ಡರ್‌ಮಾಡಿ ಒಳಕ್ಕೆ ಕಳಿಸಿದರಂತೆ. ರಾತ್ರಿ 9 ಘಂಟೆ ವರೆಗೆ ಅವರನ್ನು ಅಲ್ಲಿ ಇಟ್ಟುಕೊಂಡು ನಂತರ ಬಿಟ್ಟುಬಿಟ್ಟರು. ಈ ಸಾಹುಕಾರರು ಕಾಂಗ್ರೆಸ್ಸಿನ ಹೊಸ ಭಕ್ತರು. ಹನ್ನೊಂದೂಕಾಲು ರೂಪಾಯಿ ಸದಸ್ಯರಾಗಿದ್ದಾರೆ. ಇವರ ಫ್ಯಾಕ್ಟರಿ ಇಂಥಾ ದೌರ್ಜನ್ಯಕ್ಕೆ ಎತ್ತಿದ ಕೈ. ಅನೇಕ ಬಡ ಕಾರ್ಮಿಕರು ಇದನ್ನು ಅನುಭವಿಸಿದ್ದಾರೆ. ಫ್ಯಾಕ್ಟರಿ ಕಾನೂನಿಗೆ ವಿರುದ್ಧ ಕೆಲಸಗಾರರನ್ನ ಫ್ಯಾಕ್ಟರಿ ಒಳಗೆ ಬಿಟ್ಟ ಕೂಡಲೇ ಬೀಗಹಾಕುತ್ತಾರೆ ಮತ್ತು ರಾತ್ರಿ ವೇಳೆ ಹೆಂಗಸರು ಮಕ್ಕಳನ್ನ ಒಳಗಡೆ ಬಿಟ್ಟುಬೀಗ ಹಾಕಿ ಬೆಳಿಗ್ಗೆ ಮಾತ್ರ ಬೀಗ ತೆಗೆಯುತ್ತಾರೆ. ಲೇಬರ್ ಇಲಾಖೆಯವರು ಮತ್ತು ಪೋಲೀಸ್ ಅಧಿಕಾರಿಗಳು ಇತ್ತ ಕಡೆ ಗಮನಕೊಡುವರೆ?

ರಬಕವಿ ಬನಹಟ್ಟಿ ನಗರಸಭೆ ಆಸ್ಪತ್ರೆಯ ಬಗ್ಗೆ ಅಲಕ್ಷ್ಯ ದೂರವಾಗಬೇಕು!

ರಬಕವಿ-ಬನಹಟ್ಟಿ ,ಸಂಯುಕ್ತ ನಗರ ಸಭೆಯಿಂದ ನಡೆಸಲ್ಪಡತಕ್ಕ ಒಂದೇ ಒಂದಾದ ಆಸ್ಪತ್ರೆಯು ಯಾವುದೋ ಕಾರಣಕ್ಕಾಗಿ ಅವ್ಯವಸ್ಥೆಗೆ ಒಳಗಾಗಿ ರೋಗಿಗಳ ಬೇಸರಕ್ಕೆ ಅವಕಾಶವನ್ನುಂಟುಮಾಡಿದೆ.

ಇಪ್ಪತ್ತೆಂಟು ಸಾವಿರ ಜನಸಂಖ್ಯೆಯುಳ್ಳ ಉದ್ಯೋಗ—ವ್ಯಾಪಾರಿ ಕೇಂದ್ರಗಳಾದ ರಬಕವಿ-ಬನಹಟ್ಟಿ ನಗರ ಸಭೆಯ ಸಾಂಪತ್ತಿಕ ಸ್ಥಿತಿಯು ಸಾಕಷ್ಟು ಚನ್ನಾಗಿರುವಾಗ ಆಸ್ಪತ್ರೆಯಲ್ಲಿ ಇಲ್ಲಿಯ ವರೆಗೂ ಕಾಂಪೌಂಡರ್ ಇಲ್ಲ; ಕಾಗದ ಪತ್ರಗಳನ್ನು ಡಲು ಕ್ಲಾರ್ಕ ಇಲ್ಲ; ಡ್ರೆಸ್ಸರ್ ಇಲ್ಲ; [illegible] ಷಧಿಗಳು ಸರಿಯಾಗಿ ಪೂರೈಸಲ್ಪಡುತ್ತಿಲ್ಲ.

ಸದರೀ ಆಸ್ಪತ್ರೆಗೆ ಓರ್ವ ಉತ್ಸಾಹಿ ತರುಣ ಡಾಕ್ಟರರು ಮಾತ್ರ ಸಿಕ್ಕಿದ್ದಾರೆ. ಈ ಡಾಕ್ಟರರು ಬರುವ ಮೊದಲು ಇಪ್ಪತ್ತೋ ಹೆಚ್ಚಾದರೆ ಇಪ್ಪತ್ತೈದೋ 'ಅಟೆಂಡೆನ್ಸ್' ಇದ್ದಿದ್ದರೆ, ಈಗ ಒಂದೂವರೆ ನೂರರಿಂದ ಇನ್ನೂರು ವರೆಗೆ 'ಅಟೆಂಡೆನ್ಸ್' ಆಗಿದ್ದು, ಆಗುತ್ತಿದ್ದುದು ದಿನದ ವರದಿಯಿಂದ ತಿಳಿದುಬಂದ ವಿಷಯವಾಗಿದೆ.

([illegible]ನೇ ಪುಟ ನೋಡಿ)

ಅಮೆರಿಕದ ಆರ್ಥಿಕ ಇಳಿವರಿಯು ಬೆಳೆಯುತ್ತಲೇ ಇದೆ !

ಅಮೆರಿಕದ ಸಂಯುಕ್ತ ರಾಜ್ಯಗಳ ಆರ್ಥಿಕ ವ್ಯವಸ್ಥೆಯಲ್ಲಿನ ಇಳಿವರಿಯ ಸ್ಥಿತಿಯು ವಿಕಾಸಗೊಂಡು, ವಿಸ್ತಾರವಾಗುವ ಸಂಭವವಿದೆಯೆಂದು 'ಪ್ರಾವ್ಡಾ' ಪತ್ರಿಕೆಯಲ್ಲಿ ವಿಶ್ಲೇಷಿಸಲಾಗಿದೆ. ಉದ್ಯಮಗಳಿಗಾಗಿ ತೊಡಗಿಸಲಾದ ಹಣವು ತಗ್ಗಿದೆ, ಲೋಹಗಳ ಮತ್ತು ಯಂತ್ರೋಪಕರಣಗಳ ಹೊಸಬೇಡಿಕೆಗಳು ಕಡಮೆಯಾಗಿವೆ, ಕೈಗಾರಿಕೋದ್ಯಮದಲ್ಲಿಯೂ, ವಾಣಿಜ್ಯದಲ್ಲಿ ಇರುವ ಭಾರೀ ಸರಕು ಸಂಗ್ರಹಕ್ಕೆ ಬೇಡಿಕೆಗಳಿಲ್ಲ, ಜನತೆಯ ಕ್ರಯ ಶಕ್ತಿಯಲ್ಲಿಯೂ ಇಳಿತಾಯವಾಗಿರುವುದರಿಂದ ಉತ್ಪಾದನೆಯು ಇನ್ನೂ ಕಡಮೆಯಾಗಬೇಕಾಗುವುದು.

1958ರ ಮೊದಲ ಮೂರು ತಿಂಗಳಲ್ಲಿ ಅಮೆರಿಕದ ಸಂಯುಕ್ತ ರಾಜ್ಯಗಳಲ್ಲಿದ್ದ ಪರಿಸ್ಥಿತಿಯ ಬಗ್ಗೆ ವ್ಯಾಖ್ಯೆ ಮಾಡುತ್ತಾ, ಉದ್ಯಮದ ಎಲ್ಲ ಶಾಖೆಗಳಲ್ಲಿಯೂ ಉತ್ಪಾದನೆಯಲ್ಲಿ ಕಡಿತಗಳುಂಟಾಗಿವೆಯೆಂದೂ, ಭಾರೀ ಕೈಗಾರಿಕೋದ್ಯಮದಲ್ಲಿ ಅತ್ಯಂತ ಹೆಚ್ಚಾದ ಇಳಿತಾಯ ಕಂಡುಬರುತ್ತಿದೆಯೆಂದೂ, 'ಪ್ರಾವ್ಡಾ' ಪತ್ರಿಕೆಯು ತಿಳಿಸುತ್ತದೆ. ಉದಾಹರಣೆಗೆ ಹೇಳುವುದಾದರೆ, ಉಕ್ಕಿನ ಹುಟ್ಟುವಳಿಯು ಶೇಕಡ 40ರಷ್ಟು ಕಡಮೆಯಾಯಿತು. ಯಂತ್ರ ನಿರ್ಮಾಣೋದ್ಯಮವು ಕಳೆದ ವರ್ಷ ಇದೇ ಅವಧಿಯಲ್ಲಿ ತಯಾರಿಸಿದುದಕ್ಕಿಂತ ಮೂರರಲ್ಲೊಂದು ಪಾಲು ಕಡಮೆ ಉತ್ಪಾದಿಸಿತು. ಬೇಡಿಕೆಗಳಿಲ್ಲದ ಕಾರಣ ಅನೇಕ ಕಂಪೆನಿ (ವಾಣಿಜ್ಯ ಸಂಸ್ಥೆ)ಗಳು ತಮ್ಮ ಯಂತ್ರಸ್ಥಾಪಕಗಳನ್ನು ಮುಚ್ಚತೊಡಗಿವೆ, ಸಾವಿರಾರುಜನ ಕಾರ್ಮಿಕರನ್ನು ಕೆಲಸಗಳಿಂದ ತೆಗೆದು ಹಾಕುತ್ತಿವೆ. ಅಧಿಕೃತ ಅಂಕೆ-ಸಂಖ್ಯೆಗಳ ಪ್ರಕಾರ, ಈಗ ಅಲ್ಲಿನ ನಿರುದ್ಯೋಗಿಗಳ ಸಂಖ್ಯೆಯು 52 ಲಕ್ಷಕ್ಕೇರಿದೆ. ಈ ಸಂಖ್ಯೆಯು ಕಳೆದ 16 ವರ್ಷಗಳಲ್ಲಿ ಅತ್ಯಂತ ಉನ್ನತ ಪರಮಾವಧಿಯನ್ನು ತೋರಿಸುತ್ತದೆ—ಎಂದು 'ಪ್ರಾವ್ಡ' ಪತ್ರಿಕೆಯು ತಿಳಿಸುತ್ತದೆ.

ರಬಕವಿ ಬನಹಟ್ಟಿ ನಗರಸಭೆ ಆಸ್ಪತ್ರೆಯ ಬಗ್ಗೆ ಅಲಕ್ಷ್ಯ ದೂರವಾಗಬೇಕು

(೭ನೇ ಪುಟದಿಂದ)

ಇದು ಕೇವಲ ಸದರೀ ತರುಣ ಡಾಕ್ಟರರ ಕೆಲಸದ—ಸ್ವಭಾವದ ಬಲವತ್ತರದ ಮೇಲಿಂದ ಎಂದು ಸ್ಪಷ್ಟವಾಗಿಯೇ ಹೇಳಬೇಕಾಗಿದೆ.

ಆಸ್ಪತ್ರೆಗೂ, ವಾಚನಾಲಯಕ್ಕೂ ಅಂತ ನೇಮಿಲ್ಪಟ್ಟ ಒಬ್ಬ 'ಪ್ಯೋನ್' ಮಾತ್ರ ಇದ್ದಾನೆ. ಆತನೇ ಕಾಂಪೌಂಡಿಂಗ್, ಡ್ರೆಸ್ಸಿಂಗ್, ಲೆಕ್ಕ ಪತ್ರ ಬರೆಯುವದು. ಆಫೀಸ ಪ್ಯೋನ ಕೆಲಸ ಎಲ್ಲವನ್ನೂ ನೋಡಿಕೊಳ್ಳಬೇಕು.

ಪ್ರಾಥಮಿಕ ಶಿಕ್ಷಣ ಕೂಡಾ ಮುಗಿಯದ ಒಬ್ಬ ಸಿಪಾಯಿಗೆ ಇಂಗ್ಲೀಷ ಔಷಧಿಗಳ ಜ್ಞಾನ ಕೊಟ್ಟು ಆತನ ಕೈಯಿಂದ ಕೆಲಸ ಮಾಡಿಸಿಕೊಳ್ಳುತ್ತ ಹಾಗೇ ಗಾಡಿಯನ್ನು ನೂಕುತ್ತಿದ್ದಾರೆ. ಇದಕ್ಕೇನು ಕಾರಣ ?

ಇಂದು ರಬಕವಿ ಬನಹಟ್ಟಿ ನಗರ ಸಭೆಯ ಈ ಆಸ್ಪತ್ರೆಗೆ ಈ ಮೇಲಿನ ಅನಾನುಕೂಲತೆ ಅಡಚಣೆಗಳಿದ್ದರೂ 'ಕರ್ಣನ ರಥದಂತೆ' ಡಾಕ್ಟರರು ಪತ್ತಿ ನಡೆಸುತ್ತಿರುವುದು ಕಂಡುಬರುವುದು. ಇದಲ್ಲದೆ ಬನಹಟ್ಟಿಯಲ್ಲಿ ಹೊಸದಾಗಿ ಸುರು ಮಾಡಿದ ಹೆಂಗೆ ಆಸ್ಪತ್ರೆ (ಮೆಟರ್ನಿಟಿ ವಾರ್ಡ)ಯ ನಡೆಸಿಕೊಂಡುಹೋಗುವ ಜವಾಬುದಾರಿಯನ್ನೂ ಡಾಕ್ಟರರ ತಲೆಯ ಮೇಲೆಯೇ ಹೊರಿಸಿದ್ದಾರೆ.

ಹೆಚ್ಚು ಕೆಲಸ ಮಾಡಿ ಮುಂದುವರಿಯಬೇಕೆಂದು ಇಚ್ಛಿಸುವ ತರುಣ ಹುಮ್ಮಸ್ಸಿನ ಇಂಥ ಡಾಕ್ಟರುಗಳಿಗೆ ಪ್ರೋತ್ಸಾಹ ಕೊಡುವದನ್ನು ಬಿಟ್ಟು ಹೊರುವನೆಂದು ಮತ್ತಷ್ಟು ಹೊರೆ ಹೊರಿಸುತ್ತ ಹೋಗುವುದು ಅನ್ಯಾಯವಲ್ಲದೆ ಮತ್ತೇನು ?

ಇನ್ನು ಮೇಲಾದರೂ ಸದರೀ ಆಸ್ಪತ್ರೆಯ ಬಗ್ಗೆ ಇದ್ದ ಅಲಕ್ಷ್ಯತೆ, ಸಂಕುಚಿತತೆ ಅಲ್ಲದೆ ಇನ್ನಾವ 'ತೆ'ಗಳಿದ್ದರೂ ಅವುಗಳನ್ನು ಬದಿಗೊತ್ತಿ, ಉತ್ತಮವಾಗಿ ನಡೆಯತಕ್ಕ ಸಾರ್ವಜನಿಕ ಅತ್ಯಗತ್ಯವಾದ ಒಂದು ಆಸ್ಪತ್ರೆಯ ಬಗ್ಗೆ ಮತ್ತು ಪ್ರಗತಿಯ ಬಗ್ಗೆ ಮಾನ್ಯ ನಗರ ಸಭೆ ಸದಸ್ಯರು ಸಂಬಂಧಿಸಿದ ಮೇಲಾಧಿಕಾರಿಗಳು ಇತ್ತ ಲಕ್ಷ್ಯ ವಹಿಸಿ ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗುವಂತೆ ಎಚ್ಚರ ವಹಿಸುವದು ರಬಕವಿ-ಬನಹಟ್ಟಿ ಸರ್ವಸಾಮಾನ್ಯ ನಾಗರೀಕತೆಗೆ ಅತ್ಯಗತ್ಯದ ಮಾತಾಗಿರುತ್ತದೆ.

೨೦೦೦ ವರ್ಷಗಳ ಪರಂಪರೆಯ

ಭಾರತ—ರಷ್ಯಾ ಸಂಬಂಧ ಅಜರ್ ಬೈಜಾನಿನಲ್ಲಿ ಇತಿಹಾಸ ಸಂಶೋಧನೆ

ಭಾರತ ದೇಶದ ಮತ್ತು ಅಜರ್‌ಬೈಜಾನ್ ದೇಶದ ಮಧ್ಯೆ ಈಗ್ಗೆ 2,000 ವರ್ಷಗಳ ಹಿಂದೆಯೇ ಆರ್ಥಿಕ, ಸಾಂಸ್ಕೃತಿಕ ಸಂಪರ್ಕಗಳು ಸ್ಥಾಪಿತವಾಗಿದ್ದುವೆಂದು ಅಜರ್ಬೈಜಾನಿನ ಸುವಿಖ್ಯಾತ ಇತಿಹಾಸಕಾರರಾದ ಅಕೆಡೆಮಿಷಿಯನ್ ಅಲೆಕ್ಸಾಂಡರ್ ಮಾಕೊವೆಲ್‌ಸ್ಕಿಯವರು ನಂಬುತ್ತಾರೆ, ಮಧ್ಯಏಶಿಯಾ, ಕಾಸ್ಪಿಯನ್, ಕಾಕಸಸ್ ಪ್ರದೇಶಗಳ ಮುಖಾಂತರ, ಭಾರತ ದೇಶದಿಂದ ಕಪ್ಪು ಕಡಲಿಗೆ ಮಾರ್ಗವಿದ್ದಿತೆಂದೂ, ಪ್ರಾಚೀನ ಕಾಲದ ಗ್ರೀಕರು ಮತ್ತು ರೋಮನರು ಭಾರತ ದೇಶಕ್ಕೆ ಈ ನೆಲಜಲ ಮಾರ್ಗಗಳನ್ನನುಸರಿಸುತ್ತಿದ್ದರೆಂಬ ಬಗ್ಗೆ ದಾಖಲೆಗಳಿವೆಯೆಂದೂ, ಅವರು ಹೇಳಿದ್ದಾರೆ. ಭಾರತೀಯ ಸರಕುಗಳನ್ನು ಒಂಟೆಗಳ ಮೇಲೆ ಹೇರಿಕೊಂಡು, ಕಾಕಸಸ್ಸಿನಲ್ಲಿರುವ ಇಂದಿನ ಅಜರ್ಬೈಜಾನಿಗೆ ಒಯ್ಯಲಾಗುತ್ತಿತ್ತೆಂದು ಗ್ರೀಕ್ ಭೂಗೋಳ ಶಾಸ್ತ್ರಜ್ಞ ಸ್ಟ್ರಾಬೋನ್‌ರವರು ಕ್ರಿಸ್ತಪೂರ್ವ ಮೊದಲನೆಯ ಶತಮಾನದಲ್ಲಿ ಬರೆದಿದ್ದಾರೆ. ಅಜರ್ಬೈಜಾನಿನ ನಗರಗಳಲ್ಲಿ ತಾವು ಸಂಧಿಸಿದ್ದ ಭಾರತೀಯ ವ್ಯಾಪಾರಿಗಳ ವಸತಿ ಕ್ಷೇತ್ರಗಳನ್ನು ಅನೇಕ ಮಂದಿ ಸಾಹಸಯಾತ್ರಿಕರು 16ನೆಯ ಶತಮಾನದಲ್ಲಿ ಬರೆದಿಟ್ಟಿದ್ದಾರೆ. ಬಾಕೂ ಬಳಿಯಲ್ಲಿರುವ ಸುರಾಹಾನಿ ಎಂಬ ಹಳ್ಳಿಯಲ್ಲಿ ಸನ್ಯಾಸಿಗಳ ಸಲುವಾಗಿಯೇ ಭಾರತೀಯ ಅಗ್ನಿಪೂಜಕರು ಒಂದು ಮಂದಿರವನ್ನು ನಿರ್ಮಿಸಿಕೊಂಡಿದ್ದರೆಂದೂ, ಅಲ್ಲಿ ಭೂಗರ್ಭದೊಳಗಿನಿಂದ ದಾಹಕ ಅನಿಲವು ಬರುತ್ತಿತ್ತೆಂದೂ ಅಕೆಡೆಮಿಷಿಯನ್ ಮಾಕೊವೆಲ್‌ಸ್ಕಿಯವರು ಈ ಸಂಬಂಧದಲ್ಲಿ ತಿಳಿಸಿದ್ದಾರೆ. ಈ ಮಂದಿರದ ಅವಶೇಷಗಳೂ ಈಗಲೂ ಇವೆ. ಇತಿಹಾಸಿಕ ಸ್ಮಾರಕವೆಂದು ಈ ಮಂದಿರವನ್ನು ಸರಕಾರದವರು ರಕ್ಷಿಸಿಟ್ಟಿದ್ದಾರೆ.

ಪುರಾತನ ಸಾಮಂತ ಕಾಲದಿಂದಲೂ ಭಾರತೀಯ ಸಾಹಿತ್ಯದ ಅತ್ಯುತ್ತಮ ಕೃತಿಗಳು ಅಜರ್‌ಬೈಜಾನಿನಲ್ಲಿ ಜನಪ್ರಿಯವಾಗಿದ್ದುವು. 12ನೆಯ ಶತಮಾನದಲ್ಲಿ ಅಜರ್‌ಬೈಜಾನಿನ ಮಹಾಕವಿ ನಿಜಾಮಿ ಗ್ಯಾಂಡ್ಜೇವಿಯು ಭಾರತ ದೇಶದ ಬಗ್ಗೆ ಅನೇಕ ಸ್ಫೂರ್ತಿಗೀತೆಗಳನ್ನು ರಚಿಸಿದರು. "ಮೌರ್ ಹಿಂದಿ" ಎಂಬುದು ಪುರಾತನ ಜಾನಪದ ಸಂಗೀತ ಕೃತಿಗಳಲ್ಲೊಂದಾಗಿದೆ. ಪುರಾತನ ಭಾರತೀಯ ಮೌರ್ಯ ವಂಶದೊಂದಿಗೆ (ಕ್ರಿಸ್ತಪೂರ್ವ 2ನೆಯ ಶತಮಾನ) ಈ ಶೀರ್ಷಿಕೆ ಸಂಬಂಧವನ್ನು ಹೊಂದಿರಬಹುದೆಂದು ಈ ಪಂಡಿತರು ಅಭಿಪ್ರಾಯಪಡುತ್ತಾರೆ. ಇದು ನಿಜವಾದರೆ, "ಮೌರ್‌ಹಿಂದಿ"ಯು 2,000 ವರ್ಷಗಳಿಗಿಂತಲೂ ಹಿಂದೆ ಭಾರತ ದೇಶದಲ್ಲಿಯೋ ಅಥವ ಅಜರ್‌ಬೈಜಾನಿನಲ್ಲಿಯೋ ರಚಿತವಾದ ಸಂಗೀತವನ್ನು ಪ್ರತಿಧ್ವನಿಸುತ್ತದೆಯೆಂದು ಅವರು ಹೇಳುತ್ತಾರೆ, 'ಹುಂ ಸುನ್' ಎಂಬ ಇನ್ನೊಂದು ಸಂಗೀತ ಕೃತಿಯು ಕೂಡ (16ನೆಯ ಶತಮಾನದ ಭಾರತೀಯ ದೊರೆ ಹುಮಾಯೂನ್ ಹೆಸರಿನದು ಈ ಸಂಗೀತ) ಭಾರತೀಯ ರಾಗಗಳ ಮೇಲೆಯೇ ರಚಿತವಾಗಿದೆ.

—"ತಾಸ್"

ಓದುಗರ ಓಲೆ

ಸರ್ಕಾರದ ಗಮನಕ್ಕೆ ಬರುವುದೇ ?

ಕಡೂರು ತಾಲ್ಲೂಕು ದೇವನೂರು ಫಿರ್ಕಾ ಹೊನ್ನೇನಹಳ್ಳಿ ಎಂಬ ಗ್ರಾಮವು ನಾಶವಾಗಿ ಕಾಡು ಬೆಳೆದಿತ್ತು. ಜಮೀನು ಇಲ್ಲದ ಬಡವರು ಆ ಕಾಡನ್ನು ಕಡಿದು ಹೊಸದಾಗಿ ಊರನ್ನು ಕಟ್ಟಿದರು. ಸರಕಾರದವರು ಸುತ್ತಮುತ್ತಿನ ಪ್ರದೇಶವನ್ನು ಹಂಗಾಮಿ ಸಾಗುವಳಿಗೆ ಕೊಟ್ಟರು. ಈ ಗ್ರಾಮಕ್ಕೆ ಸೇರಿದ 18 ಮತ್ತು 19 ನೇ ಸರ್ವೆ ನಂಬರುಗಳನ್ನು ಕಾಮೇನಹಳ್ಳಿಯವರಿಗೆ ಹಂಗಾಮಿ ಸಾಗುವಳಿಗೆ ಕೊಟ್ಟು ಇವರು ಉಳುಮೆ ಮಾಡದ ಕಾರಣ ರದ್ದು ಮಾಡಿ ಹೊನ್ನೇನಹಳ್ಳಿಯವರಿಗೆ ಹಂಗಾಮಿ ಸಾಗುವಳಿಗೆ ಕೊಟ್ಟರು. ಈ ವಿವಾದ ರೆವಿನ್ಯೂ ಮಂತ್ರಿಗಳಲ್ಲಿ ನಡೆಯುತ್ತಿರುವಾಗ ಪುನಃ ಅದೇ ಕಾಮೇನಹಳ್ಳಿಯವರಿಗೆ ದರಖಾಸ್ತು ರೂಲ್ಸು ಮೇರೆ ಕೊಟ್ಟರು. ಈ ರೀತಿ ಎರಡು ಬಾರಿ ಮಂಜೂರು ಮಾಡಿರುವುದು ಕಾನೂನಿಗೆ ವಿರೋಧ ಈ ವಿಚಾರವಾಗಿ ಪ್ರತಿಭಟಿಸಲು ಕೆ. ಎಲ್. ಹುಚ್ಚಪ್ಪನನ್ನು ದಸ್ತಗಿರಿ ಮಾಡಿ ನೇರ್ ಚಾಲ್ ಕೇಸಾಕಿದರು. ಅದು ಖುಲಾಸೆ ಆಯ್ತು ಅನಂತರ ಹಾಸನ ಜಿಲ್ಲೆಗೆ ಸೇರಿದ ಬಾಣಾವರದ ಪೋಲೀಸು ಸಬ್ ಇನ್ಸ್‌ಪೆಕ್ಟರ್ ಶ್ರೀ ಗುರುಸಿದ್ದಪ್ಪನವರು ಅಕ್ರಮ ಕೂಟ, ಅಕ್ರಮ ಪ್ರವೇಶ ಎಂದು ಹಾಸನ ೨ನೇ ಮ್ಯಾಜಿಸ್ಟ್ರೇಟರ ಕೊರ್ಟಿನಲ್ಲಿ ಕೇಸಾಕಿ ಮ್ಯಾಜಿಸ್ಟ್ರೇಟರು ಹಾಸನ ಕೋರ್ಟು ಸರಹದ್ದಿಗೆ ಸೇರಿಲ್ಲವೆಂದು ಇದು ಚಿಕ್ಕಮಂಗಳೂರು ಸರಹದ್ದು ಕೋರ್ಟು ವ್ಯವಹಾರವೆಂದು ಕೇಸು ಖುಲಾಸೆ ಮಾಡಿದರು. ಈ ವಿಚಾರವಾಗಿ ಅಪರಾಧಿಗಳಲ್ಲಿದ್ದ 18–19 ನೇ ಸರ್ವೆ ನಂಬರು ಕಾರ್ಡು ಬಟ್ಟೆ ಬರೆ ಜಪ್ತಿ ಮಾಡಿರುವುದು ಸರಿಯಲ್ಲವೆಂದು ಬಟ್ಟೆಬರೆ ವಾಪಸು ಕೊಡಿಸಿದರು. ಹಾಲಿ ಈ ಗ್ರಾಮದಲ್ಲಿರುವವರೆಲ್ಲಾ ಬಡವರು ಹುಲ್ಲು ಜೋಪಡಿಯಲ್ಲಿ ವಾಸವಾಗಿರುತ್ತಾರೆ. ಕೂಲಿಯಿಂದ ಜೀವನ ಮಾಡುತ್ತಾರೆ. ಶ್ರೀಮಂತರಿಗೆ ಸಹಾಯ ಮಾಡುವ ಮತ್ತು ಈ ಗ್ರಾಮದಿಂದ ಬಡವರನ್ನು ಓಡಿಸುವುದಕ್ಕೋಸ್ಕರ ಪೋಲೀಸಿನವರು ಸುಳ್ಳು ಕೇಸಾಕಿ ತುಂಬಾ ತೊಂದರೆ ಪಡಿಸುತ್ತಾ ಇರುತ್ತಾರೆ. ಚಿಕ್ಕಮಂಗಳೂರು ಜಿಲ್ಲಾಧಿಕಾರಿಗಳು ಈ ಸಂಬಂಧವಾದ ರಿಕಾರ್ಡು ಪೆಂಡಿಂಗ್ ಇಟ್ಟುಕೊಂಡಿರುತ್ತಾರೆ ಆದಷ್ಟು ಜಾಗ್ರತೆ ಫೈಸಲ್ ಮಾಡಿದರೆ ಬಡವರು ಉದ್ಧಾರವಾಗುತ್ತಾರೆ ಬಡವರ ಮೇಲೆ ಸುಳ್ಳು ಕೇಸಾಕದಂತೆ ಏರ್ಪಾಡು ಮಾಡಲು ಅರಿಕೆ.

—ಹುಚ್ಚಪ್ಪ.

ದಾವಣಗೆರೆ ನಗರದಲ್ಲಿ ಫೆಬ್ರುವರಿ ತಿಂಗಳಿಂದ ಗಣೇಶರ್ ಟೆಕ್ಸ್‌ಟೈಲ್ ಮಿಲ್ಲಿನಿಂದ ಈವರೆಗೆ ಸುಮಾರು 300 ಕ್ಕಿಂತಲೂ ಮೇಲೆ ಕೂಲಿಕಾರರನ್ನು ಕೆಲಸದಿಂದ ತೆಗೆದಿದ್ದಾರೆ. ಇದರ ಸಂಬಂಧವಾಗಿ ಇಲ್ಲಿಯ ಅಧಿಕಾರಿಗಳು ಏನೊಂದು ಕ್ರಮವನ್ನು ಕೈಕೊಳ್ಳಲಿಲ್ಲ. ತಿಂಗಳಲ್ಲಿ ಮೂವರು ಮಂತ್ರಿಗಳಂತೆ ಪ್ರವಾಸ ಮಾಡುತ್ತಾರೆ. ಯಾರೊಬ್ಬರೂ ಇತ್ತ ಗಮನಿಸಲಿಲ್ಲ. ಕೇಂದ್ರ ಅರಸಾಂಗ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಲಕ್ಷಗಟ್ಟಲೆ ಕೆಲಸಗಾರರಿಗೆ ಕೆಲಸ ಕೊಟ್ಟಿದ್ದೇವೆಂದು ಸಾರುವಾಗ ಈ ದಾವಣಗೆರೆಯಲ್ಲಿ ಇದ್ದ ಕೆಲಸಗಾರನಿಗೂ ಕೆಲಸವಿಲ್ಲ. ಇದಕ್ಕೆ ಸಂಬಂಧ ಪಟ್ಟ ಮ್ಯಾನೇಜ್‌ಮೆಂಟಿನ ಮೇಲೆ ಕೂಡಲೇ ಕ್ರಮ ಕೈ ಕೊಳ್ಳಬೇಕು.

—"ಕಾರ್ಮಿಕ"

ಯುಗೋಸ್ಲಾವಿಯ ಕಮ್ಯೂನಿಸ್ಟ್ ಲೀಗಿನ ಧೋರಣೆ ಮತ್ತು ಮಾರ್ಕ್ಸ್ ಸಿದ್ಧಾಂತ

(೨ನೇ ಪುಟದಿಂದ)

ರೆ. ಈಗ ಪ್ರಪಂಚವು ಸಮಾಜವಾದಿ ಮತ್ತು ಬಂಡವಾಳ ಶಾಹಿ ಎಂಬುದಾಗಿ ಎರಡು ಸಮಾಜ ಪದ್ಧತಿಗಳಲ್ಲಿ ಇಬ್ಭಾಗವಾಗಿದೆಂಬ ಮಹತ್ವದ ಅಂಶವನ್ನೇ ಅವರು ಗಮನಕ್ಕೆ ತೆಗೆದುಕೊಂಡಿಲ್ಲ. ಇಂದಿನ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ದಿನೇ ದಿನೇ ಬೆಳೆಯುತ್ತಿರುವ ಮತ್ತು ಬಲಗೊಳ್ಳುತ್ತಿರುವ ಸಮಾಜವಾದಿ ಪ್ರಪಂಚ ವ್ಯವಸ್ಥೆಗೂ, ಸಾಯುತ್ತಿರುವ ಬಂಡವಾಳ ಶಾಹಿ ವ್ಯವಸ್ಥೆಗೂ ನಡೆಯುತ್ತಿರುವ ಹೋರಾಟವೇ ಮುಖ್ಯವೆಂಬುದನ್ನು ಅವರು ಹೇಳಿಲ್ಲ.

ಇದರಿಂದ ಅವರು ಎರಡು ಪ್ರಪಂಚ ಪದ್ಧತಿಗಳಿವೆಂಬುದನ್ನು ಹೇಳುವ ಬದಲು ಎರಡು ಮಿಲಿಟರಿ–ರಾಜಕೀಯ ಗುಂಪುಗಳಿವೆಂದು ಹೇಳಿದ್ದಾರೆ. ಈ ಎರಡು ಗುಂಪುಗಳ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಗುಣಗಳ ಬಗ್ಗೆ ಭಿನ್ನತೆಗಳಿವೆಂದು ಅವರು ಹೇಳಿದ್ದರೂ, ಇಂದಿನ ಅಂತರಾಷ್ಟ್ರೀಯ ಬಿಕ್ಕಟ್ಟಿಗೆ ಕಾರಣವೇನೆಂದು ಹೇಳುವಾಗ ಈ ಎರಡು ಗುಂಪುಗಳ ಭಿನ್ನತೆಯನ್ನು ತೋರಿಸಿಲ್ಲ. ಯುದ್ಧದ ಭೀತಿಗೆ ಕಾರಣ ಈ ಎರಡು ಗುಂಪುಗಳಿರುವುದರಿಂದವೆಂದು ಅವರು ಹೇಳಿರುವುದು ಸರಿಯಲ್ಲ. ಸಮಾಜವಾದಿ ರಾಷ್ಟ್ರಗಳ ಶಾಂತಿಯುತ ಧೋರಣೆಯನ್ನು, ಸಾಮ್ರಾಜ್ಯಶಾಹಿಗಳ ಆಕ್ರಮಣಕಾರಿ ಧೋರಣೆಯನ್ನು ಒಂದೇ ಮಟ್ಟಕ್ಕಿಳಿಸುವ ತಪ್ಪನ್ನು ಮಾಡಿದ್ದಾರೆ. ತಮ್ಮ "ನಾಯಕತ್ವ" ಸ್ಥಾಪಿಸಲು ಹೋರಾಟ ನಡೆದಿದೆಂದು ಶಬ್ಧ ಪ್ರಯೋಗದಿಂದ ಸಾಮ್ರಾಜ್ಯಶಾಹಿಗಳ ವಿರುದ್ಧ ಶಾಂತಿಪ್ರಿಯ ಜನತೆ ಮಾಡುವ ಆರೋಪಗಳನ್ನು ಶಾಂತಿಯುತ ಧೋರಣೆಯನ್ನನ್ನುಸರಿಸುವ ಸಮಾಜವಾದಿ ರಾಷ್ಟ್ರಗಳ ಮೇಲೂ ಹೊರಿಸಲವಕಾಶ ನೀಡಿದ್ದಾರೆ.

ಸಮಾಜವಾದ ಸ್ಥಾಪನೆಗೆ ಸೋವಿಯತ್ ರಷ್ಯದ ಅನುಭವದ ಬಗ್ಗೆಯೂ ಅವರು ಸರಿಯಾದ ವಿಮರ್ಶೆ ಮಾಡಲಿಲ್ಲ.

ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆ ಈಗ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಹಲವು ಸಮಾಜವಾದಿ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದಿರುವಾಗ ಅವರೊಳಗಿನ ಪರಸ್ಪರ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಹಾಯ, ಸಂಬಂಧ ಮತ್ತು ತಮ್ಮ ಸಾಧನೆಗಳ ಅನುಭವ ತಮ್ಮೊಳಗೆ ಪರಸ್ಪರ ತಿಳಿಯಪಡಿಸುವುದು ಅಂತರ್ರಾಷ್ಟ್ರೀಯತೆಯ ಮುಖ್ಯ ಲಕ್ಷಣವಾಗಿದ್ದರೂ ಇದರ ಬಗ್ಗೆ ಲೀಗಿನ ಕಾರ್ಯಕ್ರಮ ಸುಮ್ಮನಿದೆ. ಅದರ ದೃಷ್ಟಿಯಲ್ಲಿ ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಯೆಂದರೆ ಸಮಾಜವಾದಿ ರಾಷ್ಟ್ರಗಳೊಳಗಿನ ಸಮಾನತೆ ಮತ್ತು ಆಂತರಿಕ ವಿಷಯಗಳಲ್ಲಿ ಕೈಹಾಕದಿರುವಿಕೆ ಮಾತ್ರ. ಸಮಾಜವಾದಿ ರಾಷ್ಟ್ರಗಳ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಐಕ್ಯತೆ ಮತ್ತು ಸಹಕಾರವನ್ನು ಬಲಪಡಿಸುವುದು ಅವರಿಗೆ ಬೇಕಾಗಿಲ್ಲ. ಇದರ ಬಗ್ಗೆ ತಿರಸ್ಕಾರ ಮನೋಭಾವನೆಯಿದ್ದು ಕಾಣುತ್ತದೆ. ಹಳೆಯ ಕಾಲದ ಒಂದು ಘಟನೆಯನ್ನು ಮುಂದುಮಾಡಿ ತಮ್ಮ ಏಕಪಕ್ಷೀಯ ಧೋರಣೆಯನ್ನು ಪ್ರತಿಪಾದಿಸಿದ್ದಾರೆ. ಹಿಂದೆ ಆದ ತಪ್ಪನ್ನು ತಿದ್ದಿಯಾಗಿದೆ. ಆ ತಪ್ಪು ಸಮಾಜವಾದಿ ಪದ್ಧತಿಯ ತಪ್ಪಲ್ಲ; ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಯಿಂದ ಆದ ತಪ್ಪಲ್ಲವೆಂದು ತಿಳಿಯುವುದಗತ್ಯ "ಸೈದ್ಧಾಂತಿಕ ಗುತ್ತೇದಾರಿ", "ರಾಜಕೀಯ ನಾಯಕತ್ವ" ಮುಂತಾದ ಶಬ್ಧಗಳನ್ನು ಕಾರ್ಯಕ್ರಮದಲ್ಲುಪಯೋಗಿಸಿ ಯುಗೊಸ್ಲಾವಿಯದವರು ಸಮಾಜವಾದಿ ಕ್ರಾಂತಿಯ ಮತ್ತು ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ತಾತ್ವಿಕ ಮತ್ತು ರಾಜಕೀಯ ಐಕ್ಯತೆಯನ್ನೇ ವಿರೋಧಿಸಿದ್ದಾರೆ.

ಇದಲ್ಲದೆ, ಕಾರ್ಯಕ್ರಮದಲ್ಲಿ "ರಾಷ್ಟ್ರೀಯ ಕಮ್ಯೂನಿಸಂ" ವಾದವನ್ನು ಮಂಡಿಸಲಾಗಿದೆ. ಇದೂ ನಮ್ಮ ವಿಶ್ವ ಚಳುವಳಿಯ ಅನುಭವಕ್ಕೆ ವಿರೋಧನಾಗಿದೆ. ಒಂದೊಂದು ಕಾಲ ಘಟ್ಟದಲ್ಲಿ ಒಂದೊಂದು ರಾಷ್ಟ್ರ ಮತ್ತು ಅದರ ಪಾರ್ಟಿ ಅಂತರಾಷ್ಟ್ರೀಯ ಚಳುವಳಿಗೆ ನಾಯಕತ್ವ ಕೊಟ್ಟಿರುವುದನ್ನು ಚರಿತ್ರೆ ತೋರಿಸುತ್ತದೆ. 19ನೇ ಶತಮಾನದ ಮಧ್ಯದಲ್ಲಿ ಜರ್ಮನಿಯ ಕಾರ್ಮಿಕ ವರ್ಗ ಮತ್ತಿದರ ನಾಯಕರಾದ ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ವಿಶ್ವ ಕಾರ್ಮಿಕರ ನಾಯಕರಾಗಿ ವೈಜ್ಞಾನಿಕ ಸಮಾಜವಾದವನ್ನು ಸ್ಥಾಪಿಸಿದರು. 19ರ ಕೊನೆ ಭಾಗ ಮತ್ತು 20ರ ಮೊದಲ ಭಾಗದಲ್ಲಿ ವಿಶ್ವ ಕ್ರಾಂತಿಯ ಕೇಂದ್ರ ರಷ್ಯಕ್ಕೆ ಬದಲಾವಣೆಯಾಯಿತು. ಅಲ್ಲಿಯ ಕಾರ್ಮಿಕ ವರ್ಗ ಮುಂದೆ ಬಂತು ಮತ್ತದರ ನಾಯಕರಾದ ಲೆನಿನ್‌ರವರು ಇಡೀ ಪ್ರಪಂಚದ ಕಾರ್ಮಿಕ ವರ್ಗದ ನಾಯಕರಾದರು. ಇದನ್ನು ಗಮನಿಸಿ ಕಳೆದ ನವಂಬರ್ ತಿಂಗಳಲ್ಲಿ ಸೇರಿದ ವಿಶ್ವದ ಎಲ್ಲಾ ಕಮ್ಯೂನಿಸ್ಟ್ ಪಕ್ಷಗಳ ಸಭೆಯು ಸಮಾಜವಾದಿ ರಾಷ್ಟ್ರಗಳ ನಾಯಕ ಸೋವಿಯತ್ ಯೂನಿಯನ್ ಆಗಿದೆಯೆಂದು ಸಾರಿದೆ. ಪ್ರಪಂಚದ ಸಾಮಾಜಿಕ ಪ್ರಗತಿ, ಸ್ವಾತಂತ್ರ್ಯ ಮತ್ತು ಶಾಂತಿ ಚಳುವಳಿಯಲ್ಲಿ ರಷ್ಯದ ಅಗ್ರ ಪಾತ್ರವನ್ನು ಎಲ್ಲರೂ ಒಪ್ಪಿದ್ದಾರೆ. ಇದು ಸಾಮಾನ್ಯ ಪ್ರಶ್ನೆಯಲ್ಲ. ಈ ಮೂಲಭೂತ ಪ್ರಶ್ನೆಯನ್ನೂ ಯುಗೊಸ್ಲಾವಿಯಾ ಮಾನ್ಯಮಾಡುತ್ತಿಲ್ಲ. ಸೋವಿಯತ್ ಯೂನಿಯನ್ನಿನ ನಾಯಕತ್ವವನ್ನು, ಸಮಾಜವಾದಿ ರಾಷ್ಟ್ರಗಳೊಳಗಿನ ಐಕ್ಯತೆಯನ್ನು ಅಲ್ಲಗಳೆದರೆ ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾದಂತಾಗಿರುತ್ತದೆ.

ಯುಗೋಸ್ಲಾವಿಯ ಕಮ್ಯೂನಿಸ್ಟ್ ನಾಯಕರ ಈ ವಾದ ಮಾರ್ಕ್ಸ್–ಲೆನಿನ್ ಸಿದ್ಧಾಂತಕ್ಕೆ ವಿರೋಧವಾಗಿರುತ್ತದೆ. ತಮ್ಮ ದಾರಿಯೇ ಬೇರೆ ತಮಗೆ ಇತರ ಸಮಾಜವಾದಿ ರಾಷ್ಟ್ರಗಳಿಂದ ಪಾಠ ಕಲಿಯುವ ಅವಶ್ಯಕತೆಯೇ ಇಲ್ಲವೆಂಬ ಅಭಿಪ್ರಾಯವನ್ನು ಅವರು ತಾಳಿದಂತಿದೆ. ಸಾಮ್ರಾಜ್ಯಶಾಹಿಗಳನ್ನೆದುರಿಸಬೇಕಾದರೆ ಸಮಾಜವಾದಿ ರಾಷ್ಟ್ರಗಳೊಳಗೆ ಐಕ್ಯತೆ ಬಲಗೊಳ್ಳಬೇಕಾಗಿರುವಾಗ ಯುಗೊಸ್ಲಾವಿಯದ ಈ ಧೋರಣೆಯಿಂದ ಧಕ್ಕೆ ತಗಲಿದೆ. ಅವರ ಧೋರಣೆಯನ್ನು ರಷ್ಯಾ, ಚೀನಾ, ಮತ್ತಿತರ ಕಮ್ಯೂನಿಸ್ಟ್ ಪಕ್ಷಗಳು ಸಹ ತೀವ್ರವಾಗಿ ಖಂಡಿಸಿವೆ. ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯನ್ನೊಪ್ಪಿರುವ ಭಾರತದ ಕಮ್ಯೂನಿಸ್ಟ್ ಪಕ್ಷವೂ ಯುಗೋಸ್ಲಾವಿಯದ ಕಾರ್ಮಿಕ ವಿರೋಧ ಧೋರಣೆಯನ್ನು ಖಂಡಿಸಿರುವುದು ನ್ಯಾಯವಾಗಿದೆ. ಈಗ ನಡೆಯುತ್ತಿರುವ ಈ ಚರ್ಚೆಯಿಂದ ಮಾರ್ಕ್ಸ್–ಲೆನಿನ್ ಸಿದ್ಧಾಂತವು ಬಲವಾಗಿ ಅಂತರ್ರಾಷ್ಟ್ರೀಯ ಸಮಾಜವಾದಿ ಶಕ್ತಿಗಳ ಬೆಳವಣಿಗೆಗೆ ಸಹಾಯವಾಗುವುದು ಖಂಡಿತ. ಈಗ ನಡೆದಿರುವ ವಿವಾದ ಪಕ್ಷ ಪಕ್ಷಗಳೊಳಗಿನ ವಿವಾದವಲ್ಲದೆ ಯುಗೋಸ್ಲಾವಿಯ ಮತ್ತಿತರ ರಾಷ್ಟ್ರಗಳ ನಡುವಿನ ವಿವಾದವಲ್ಲ.

ರಾಷ್ಟ್ರೀಯ

ಒರಿಸ್ಸಾದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯೇ?

ಕಾಂಗ್ರೆಸ್ ಹೈಕಮಾಂಡಿನ ಆದೇಶದ ಮೇಲೆ ಒರಿಸ್ಸಾದಲ್ಲಿ ಹರೆಕೃಷ್ಣ ಮೆಹ್ತಾಬ್ ಮಂತ್ರಿಮಂಡಲ ರಾಜೀನಾಮೆ ಸಲ್ಲಿಸಿದೆ. 138 ಮಂದಿ ಸದಸ್ಯರಿರುವ ಒರಿಸ್ಸಾ ಶಾಸನ ಸಭೆಯಲ್ಲಿ 65 ಮಂದಿ ಕಾಂಗ್ರೆಸ್ ಪಕ್ಷದವರಿದ್ದಾರೆ, 45 ಮಂದಿ ಗಣತಂತ್ರ ಪರಿಷತ್‌ನವರೂ, ಜರ್‌ಖಂಡ್ ಪಕ್ಷ 5, ಪ್ರಜಾ ಸೋಷಲಿಸ್ಟ್ ಪಕ್ಷ 11, ಕಮ್ಯೂನಿಸ್ಟ್ ಪಕ್ಷ 8. ಕಾಂಗ್ರೆಸ್ ಬಹುಮತವಿಲ್ಲದಿದ್ದರೂ ಜರ್‌ಖಂಡ ಪಕ್ಷದ ಬೆಂಬಲದಿಂದ ಅಧಿಕಾರ ನಡೆಸುತ್ತಿತ್ತು.

ಒರಿಸ್ಸಾದ ರಾಜ್ಯಪಾಲರು ಗಣತಂತ್ರ ಪರಿಷತ್ತಿನ ನಾಯಕರನ್ನು ಸರಕಾರ ರಚಿಸಲು ಆಹ್ವಾನಿಸಿದ್ದಾರೆ. ಗಣತಂತ್ರ ಪರಿಷತ್ 7 ಅಂಶಗಳ ಕಾರ್ಯಕ್ರಮ ಪ್ರಜಾ ಸೋಷಲಿಸ್ಟ್ ಪಕ್ಷದ ಬೆಂಬಲವನ್ನು ಪಡೆದು ಸರಕಾರ ರಚಿಸಲು ಮುಂದೆ ಬಂದಿದೆ. ಕಮ್ಯೂನಿಸ್ಟ್ ಪಕ್ಷವು ಗಣತಂತ್ರ ಪರಿಷತ್ ರಚಿಸುವ ಸರಕಾರಕ್ಕೆ ಬೆಂಬಲವೀಯಲು ತೀರ್ಮಾನಿಸಿದೆ. ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ತಡೆಯುವುದೇ ಉದ್ದಿಶ್ಯವಾಗಿದೆ ಎಂದು ಕಮ್ಯೂನಿಸ್ಟ್ ಪಕ್ಷ ತಿಳಿಸಿದೆ. ಆದರೆ ಈ ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ಬರುವುದು ಸಂದೇಹವಾಗಿದೆ. ರಾಜ್ಯಪಾಲರು ದೆಹಲಿಯಲ್ಲಿ ಚರ್ಚೆ ನಡೆಸಲು ಹೋಗಿದ್ದಾರೆ. ಯಾವ ಪಕ್ಷಕ್ಕೂ ಸರಕಾರ ರಚಿಸಲು ಸ್ಪಷ್ಟ ಬಹುಮತ ಇಲ್ಲದಿರುವುದರಿಂದ, ರಾಷ್ಟ್ರಾಧ್ಯಕ್ಷರ ಆಳ್ವಿಕೆಯೇ ಖಂಡಿತವೆಂದು ಹೇಳಲಾಗುತ್ತಿದೆ.

ಕೇರಳ ವಿದ್ಯಾ ಮಸೂದೆ ಸುಪ್ರೀಂ ಕೋರ್ಟು ತೀರ್ಪು ಕಾದಿರಿಸಿದೆ

ಹತ್ತು ದಿನಗಳ ವಾದ—ಪ್ರತಿವಾದಗಳ ನಂತರ ಕೇರಳ ವಿದ್ಯಾ ಮಸೂದೆಯ ಬಗ್ಗೆ ಸುಪ್ರೀಂ ಕೋರ್ಟು ತನ್ನ ತೀರ್ಪನ್ನು ಕಾದಿರಿಸಿದೆ.

ಏಪ್ರಿಲ್ 29ರಂದು ಆರಂಭವಾದ ವಾದ–ವಿವಾದಗಳು ಮಾರ್ಚ 12ರಂದು ಮುಕ್ತಾಯಗೊಂಡಿತು. ಭಾರತ ಸರಕಾರದ ಪರವಾಗಿ ಅಟರ್ನಿ ಜನರಲ್ ಶ್ರೀ ಎಂ. ಸಿ. ಸೆಟಲ್‌ವಾಡ್‌ರವರೂ, ಕೇರಳ ರಾಜ್ಯ ಸರಕಾರದ ಪರವಾಗಿ ಸುಪ್ರಸಿದ್ಧ ಬ್ರಿಟಿಷ್ ವಕೀಲರಾದ ಶ್ರೀ ಡಿ. ಎನ್. ಪ್ರಿಟ್‌ರವರೂ ವಾದಿಸಿದರು.

ಆಚಾರ್ಯ ಭನ್ಸಾಲಿಯವರ ಉಪವಾಸ

ಅರುವತ್ತೆರಡು ವಯಸ್ಸಿನ ವೃದ್ಧ ಪ್ರಮುಖ ಸರ್ವೋದಯ ಕಾರ್ಯಕರ್ತರಾದ ಆಚಾರ್ಯ ಭನ್ಸಾಲಿಯವರು ನಾಗಪುರದಲ್ಲಿ ಮಾನವತೆಯನ್ನು ಸರ್ವನಾಶಕ್ಕೆ ಈಡುಮಾಡುವ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ವಿರುದ್ಧ ಪ್ರತಿಭಟಿಸಲು ಉಪವಾಸ ವ್ರತವನ್ನಾಚರಿಸುತ್ತಿದ್ದಾರೆ. ಅವರು ಉಪವಾಸ ಆರಂಭಿಸಿ 44 ದಿನಗಳಾಗಿವೆ. ಇನ್ನು 22 ದಿನಗಳು ಅವರು ತಮ್ಮ ಉಪವಾಸವ್ರತವನ್ನು ಮುಂದುವರಿಸಲಿದ್ದಾರೆ. ಏಪ್ರಿಲ್ 1ರಿಂದ ಆರಂಭಿಸಿದ ತಮ್ಮ ಉಪವಾಸ ವ್ರತವನ್ನು ಜೂನ್ 6ರಂದು ಮುರಿಯಲಿದ್ದಾರೆ. ಈಗಾಗಲೇ ಅವರ ದೇಹದ ತೂಕ 34 ಪೌಂಡುಗಳಷ್ಟು ಕಡಿಮೆಯಾಗಿದೆ ಎಂದು ತಿಳಿದುಬಂದಿದೆ. ಅವರ ಈ ಉಪವಾಸವು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ದೇವಿಕುಲಂ ಉಪಚುನಾವಣೆ

ಪತ್ರಿಕೆ ಓದುಗರ ಕೈಸೇರುವ ವೇಳೆಗೆ ದೇಶಾದ್ಯಂತ ಕುತೂಹಲಯುಕ್ತವಾದ ಗಮನ ಸೆಳೆದಿರುವ ದೇವಿಕುಲಂ ಉಪಚುನಾವಣೆ ನಡೆದು ಫಲಿತಾಂಶವೂ ಹೊರಬಿದ್ದಿರುತ್ತದೆ. ಚುನಾವಣೆ ಫಲಿತಾಂಶಗಳು ಏನೇ ಇದ್ದರೂ ಕಾಂಗ್ರೆಸ್ಸಿನ ಪ್ರಚಾರ ವೈಖರಿಯನ್ನು ಮಾತ್ರ ಇಲ್ಲಿ ಹೇಳಬೇಕಾಗಿದೆ. ಕಾಂಗ್ರೆಸ್ಸಿಗೆ ಈ ಉಪಚುನಾವಣೆಯಲ್ಲಿ ಜಯವು ಸಿದ್ಧವೆಂದೂ, ಕಮ್ಯೂನಿಸ್ಟ್ ಸರಕಾರ ಉರುಳುವುದೆಂದೂ ತೀವ್ರವಾದ ಪ್ರಚಾರವನ್ನು ಮಾಡಲಾಗುತ್ತಿದೆ. ಕೇರಳ ಮಂತ್ರಿಗಳು ಚುನಾವಣೆಯ ಪ್ರಚಾರದಲ್ಲಿ ಭಾಗವಹಿಸುವುದಿಲ್ಲವೆಂದು ತೀರ್ಮಾನಿಸಿರುವುದನ್ನು ಅಲ್ಲಗಳೆದು ಅದಕ್ಕೆ ಕಾರಣ ಮಂತ್ರಿಗಳಿಗೆ ಜನತೆಗೆ ಮುಖ ತೋರಿಸಲು ಹೆದರಿಕೆಯೆಂದು ಪ್ರಚಾರ ಮಾಡಲಾಗುತ್ತಿದೆ. ಪ್ಲಾಂಟೇಶನ್ ಕೆಲಸಗಾರರೆಲ್ಲರೂ ತಮಗೇ ಬೆಂಬಲ ಕೊಡುವರೆಂದೂ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಕೆಲವೇ ಕೆಲಸಗಾರರ ಸಂಘದ ಸದಸ್ಯತ್ವವು ಕೇವಲ 7000ದಷ್ಟಿದೆಯೆಂದೂ ಕಾಂಗ್ರೆಸ್ಸಿನ ನೇತೃತ್ವದಲ್ಲಿರುವ ಸಂಘವು 45,000 ಸದಸ್ಯತ್ವವನ್ನು ಹೊಂದಿದೆಯೆಂದೂ, ಅವರೆಲ್ಲಾ ತಮಗೇ ಮತವೀಯುವುದಾಗಿಯೂ ಹೇಳಲಾಗುತ್ತಿದೆ. ತಮಿಳುನಾಡ್ ಇಂಟಕ್ ನಾಯಕ ರಾಮಾನುಜಂರವರನ್ನು ಕರೆಸಿ ಮೂರು ಸಂಘಗಳನ್ನು ಒಟ್ಟುಗೂಡಿಸಿದ ನಾಟಕ ಹೂಡಿ ಈ ಮೇಲಿನ ಹೇಳಿಕೆಯನ್ನೀಯಲಾಗಿದೆ.

ಪ್ರಚಾರ ಕಾರ್ಯದಲ್ಲಿ ಹೇರಳವಾಗಿ ಹಣ ಖರ್ಚು ಮಾಡಲಾಗುತ್ತಿದೆ. ಕಾರುಗಳು ಜೀಪುಗಳು ಬೇಕಾದಷ್ಟು ಓಡಾಡುತ್ತಿವೆ. ಚುನಾವಣೆ ಪ್ರಚಾರ ಇಷ್ಟು ರಭಸವಾಗಿದ್ದರೂ ಯಾವೊಂದು ಬಗೆಯ ಘರ್ಷಣೆಯು ಈ ವರೆಗೆ ಸಂಭವಿಸದಿರುವುದು ಶ್ಲಾಘನೀಯವಾತದೆ.

ಈ ಉಪಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಉಮೇದುವಾರರಾದ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರು ದಿಗ್ವಿಜಯ ಗಳಿಸಿ ಪ್ರತಿಗಾಮಿ ಶಕ್ತಿಗಳಿಗೆ ಸರಿಯಾದ ಪ್ರತ್ಯುತ್ತರ ದೊರಕುವುದೆಂದು ನಂಬಿದ್ದೇವೆ.

(ಕೊನೇ ಪುಟ ನೋಡಿ)

ಮಂಗಳೂರು—

ಉಳ್ಳಾಲ ಪಂಚಾಯತ್ ಬೋರ್ಡ್ ಅಧ್ಯಕ್ಷ ಸ್ಥಾನಕ್ಕೆ

ಶ್ರೀ ಎ. ಕೃಷ್ಣ ಶೆಟ್ಟರ ಆಯ್ಕೆ

ಉಳ್ಳಾಲ ಮೇಜರ್ ಪಂಚಾಯತ್ ಬೋರ್ಡಿಗೆ ಕಳೆದ ತಾ. 8—5—58ರಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಉಳ್ಳಾಲ ನಾಗರಿಕ ಸಮಿತಿಯ ಪರವಾಗಿ ಸ್ಪರ್ಧಿಸಿದ ಶ್ರೀ ಎ. ಕೃಷ್ಣ ಶೆಟ್ಟರು ಪ್ರಚಂಡ ಬಹುಮತದಿಂದ ಆರಿಸಿ ಬಂದಿದ್ದಾರೆ. ಅವರ ಪ್ರತಿಸ್ಪರ್ಧಿ ಜ| ಪಳ್ಳಿ ಬ್ಯಾರಿಯವರಿಗಿಂತ ಸುಮಾರು 9000 ಓಟುಗಳಷ್ಟು ಹೆಚ್ಚು ಪಡೆದು ಶ್ರೀ ಎ. ಕೃಷ್ಣ ಶೆಟ್ಟರು ಚುನಾಯಿಸಲ್ಪಟ್ಟಿದ್ದಾರೆ.

ಈ ಚುನಾವಣೆಯು ಅತ್ಯಂತ ಬಿರುಸಿನ ಚುನಾವಣೆಯಾಗಿದ್ದು, ಎಸೆಂಬ್ಲಿ ಪಾರ್ಲಿಮೆಂಟ್ ಚುನಾವಣೆಗಳ ನೆನಪನ್ನು ತರುತ್ತಿತ್ತು. ಈ ಪಂಚಾಯತ್ ಕ್ಷೇತ್ರದಲ್ಲಿ ಸುಮಾರು 12 ಸಾವಿರ ಮತದಾರರಿದ್ದು 5300ಕ್ಕೂ ಮಿಕ್ಕಿ ಮತದಾರರು ಮತದಾನವಿತ್ತಿದ್ದರು.

ನಾಗರಿಕ ಸಮಿತಿಯ 6 ಮಂದಿ ಹುರಿಯಾಳುಗಳು ಸದಸ್ಯತನಕ್ಕೆ ಅವಿರೋಧವಾಗಿ ಮೊದಲೇ ಆರಿಸಿ ಬಂದಿದ್ದರು. ಆದರೆ ಉಳಿದ 6 ಸ್ಥಾನಗಳಿಗೆ ಸ್ಪರ್ಧಿಸಿದ ನಾಗರಿಕ ಸಮಿತಿಯ ಉಮೇದ್ವಾರರಿಗೆ ಸೋಲಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ನಾಗರಿಕ ಸಮಿತಿಯ ಉಮೇದ್ವಾರರ ವಿರುದ್ಧ ಸ್ಪರ್ಧಿಸಿದ ಹುರಿಯಾಳುಗಳ ಕಡೆಯಿಂದ ಈ ಸೀಟನ್ನು ಪಡೆಯಲು ಸರ್ವಯತ್ನವನ್ನೂ ಮಾಡಲಾಗಿತ್ತು. ಜಾತೀಯತೆ, ಪ್ರಾದೇಶಿಕತೆ ಮನೋಭಾವವನ್ನು ಜನರಲ್ಲಿ ಉಂಟುಮಾಡಲಾಗಿತ್ತು. ಕಳೆದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಶ್ರೀ ಎ. ಕೃಷ್ಣ ಶೆಟ್ಟರ ವಿರುದ್ಧ ಸ್ಪರ್ಧಿಸಿ ಸೋತಿದ್ದ ಶ್ರೀ ವೆಂಕಟ್ರಾಯ ಕಿಣಿಯವರು ಮತ್ತು ಜನಾಬ್ ಯು. ಟ್. ಸಿದ್ದಿಯಬ್ಬ ಅತಿ ಹೆಚ್ಚಿನ ಮೆಹನತ್ತಿನಿಂದ ಪ್ರತಿಸ್ಪರ್ಧಿಗೆ ತನುಮನ ಧನ ಸಹಾಯ ನೀಡಿ ಸಹಕರಿಸಿದರು.

ಮೈಸೂರು ವಿಧಾನ ಪರಿಷತ್‌ಗೆ ಅಧ್ಯಾಪಕರ ವಿಜಯ

ಕಳೆದ ತಾ|| 4ರಂದು ಮೈಸೂರು ವಿಧಾನ ಪರಿಷತ್ತಿಗೆ ಅಧ್ಯಾಪಕ ಮತದಾರ ಕ್ಷೇತ್ರದಿಂದ ಎರಡು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಒಂದು ಸ್ಥಾನಕ್ಕೆ ದ. ಕ. ಜಿಲ್ಲಾ ಟೀಚರ್ಸ್‌ಗಿಲ್ಡ್‌ನ ಅಧ್ಯಕ್ಷ ಶ್ರೀ ಯಸ್. ಮುಕುಂದರಾಯರು ಉಳಿದೆಲ್ಲ ಹುರಿಯಾಳುಗಳಿಗಿಂತ ಅತಿ ಹೆಚ್ಚು ಮತ ಪಡೆದು ಆರಿಸಿ ಬಂದಿದ್ದಾರೆ.

ಅಧ್ಯಾಪಕ ಮತದಾರ ಕ್ಷೇತ್ರದಲ್ಲಿ ರಾಜಕೀಯ ಪಕ್ಷಗಳು ಪ್ರವೇಶಿಸಿ ಸ್ಪರ್ಧಿಸಿ, ಅಧ್ಯಾಪಕ ವರ್ಗಕ್ಕಾಗಿ ಮೀಸಲಾಗಿರಿಸಿದ ಸ್ಥಾನಗಳನ್ನು ಕಸಿದುಕೊಳ್ಳುವ ನೀತಿಯನ್ನು ದ. ಕ. ಜಿಲ್ಲಾ ಟೀಚರ್ಸ್‌ಗಿಲ್ಡ್ ಪ್ರಾರಂಭದಲ್ಲೇ ಪ್ರತಿಷೇಧಿಸಿತ್ತು.

ಶ್ರೀ ಮುಕುಂದರಾಯರು ಸ್ವತಃ ಅಧ್ಯಾಪಕರು. ಟೀಚರ್ಸ್‌ಗಿಲ್ಡ್‌ನ ಮುಖಪತ್ರಿಕೆ "ವಿದ್ಯೋದಯ" ದ ಸಂಪಾದಕರಾಗಿ ದುಡಿದಿದ್ದು ಇದೀಗ ಟೀಚರ್ಸ್‌ಗಿಲ್ಡ್‌ನ ಅಧ್ಯಕ್ಷರಾಗಿದ್ದಾರೆ. ಎಂತಲೇ ಜಿಲ್ಲೆಯ ಎಲ್ಲ ವಿಭಾಗದ ಎಲ್ಲ ರಾಜಕೀಯ ಅಭಿಪ್ರಾಯದ ಅಧ್ಯಾಪಕರೂ ಇವರಿಗೆ ಮತವಿತ್ತಿದ್ದರಲ್ಲದೆ ಜಿಲ್ಲೆಯ ಹೊರಗೂ ಇವರಿಗೆ ಬೆಂಬಲ ದೊರೆತಿತ್ತು. ಜಿಲ್ಲಾ ಕಾಂಗ್ರೆಸ್‌ನ ಮುಖಂಡರು ಕಾಂಗ್ರೆಸ್ ಹುರಿಯಾಳುಗಳಿಗಾಗಿ ಬಹಿರಂಗವಾಗಿ ದುಡಿದಿದ್ದರೂ ಅದು ಪ್ರಯೋಜನವಾಗಲಿಲ್ಲ.

ಶ್ರೀ ಮುಕುಂದರಾಯರ ಜಯವನ್ನು ಅಧ್ಯಾಪಕರು ತಮ್ಮ ವರ್ಗದ ವಿಜಯವೆಂದು ತಿಳಿದಿದ್ದಾರೆ.

ಬೆಂಗಳೂರು—

ಹೆಚ್. ಎಂ. ಟಿ. ನೌಕರರ ಸಂಘದ ಚುನಾವಣೆ

ಬೆಂಗಳೂರಿನ ಹಿಂದುಸ್ಥಾನ್ ಮೆಷಿನ್ ಟೂಲ್ಸ್ ಕಾರ್ಖಾನೆ ನೌಕರರ ಸಂಘದ ಚುನಾವಣೆಯು ಮೇ 9ರಂದು ನಡೆಯಿತು. ಸಂಘದ ಅಧ್ಯಕ್ಷರಾಗಿ ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಖಜಾಂಚಿಯಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ಅಧಿಕ ಮತ ಗಳಿಸಿ ಆಯ್ಕೆಯಾಗಿದ್ದಾರೆ. ಶ್ರೀ ಜಾರ್ಜ್ ಜೇಕಬ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಎ. ಬಿ. ಭಟ್ಟಾಚಾರ್ಜಿಯವರು ಕಾರ್ಯದರ್ಶಿಯಾಗಿಯೂ, ಶ್ರೀ ಕೆ. ಎಂ. ಮುನಿಯಪ್ಪನವರು ಸಹಕಾರ್ಯದರ್ಶಿಯಾಗಿಯೂ, ಶ್ರೀ ಎಸ್. ಕೆ. ಬ್ಯಾನರ್ಜಿಯವರು ಖಜಾಂಚಿಯೂ, ಶ್ರೀಗಳಾದ ಬಿ. ಎನ್. ರಾಮರಾವ್, ಸಿ. ಎಸ್. ರೆಡ್ಡಿ, ಎ. ವಿ. ನಾಗರಾಜ ರಾವ್, ಸಿ. ಬೈಲಪ್ಪ, ಎನ್. ಎಸ್. ಆಚಾರ್ಯ, ಎಂ. ರಾಘವನ್ ನಾಯರ್, ಡಿ. ಸೋಮನಾಥನ್, ಎನ್. ಎಸ್. ಜಯರಾಮನ್, ಜಿ. ವೇಣುಗೋಪಾಲ್, ಎಸ್. ರಾಮಚಂದ್ರಯ್ಯ, ಆರ್. ಕೆ. ಚಕ್ರವರ್ತಿ ಮತ್ತು ಕೆ. ಮಾಧವ ರಾವ್ ಇವರುಗಳು ಕಾರ್ಯಕಾರಿ ಸಮಿತಿಯ ಸದಸ್ಯರುಗಳಾಗಿ ಆಯ್ಕೆಯಾಗಿದ್ದಾರೆ.

ರಷ್ಯದ ಮೂರನೆ ಭಾರೀ ಉಪ ಗ್ರಹದ ಪ್ರಯೋಗ

ಮೇ 15ರಂದು ಸೋವಿಯತ್ ಯೂನಿಯನ್ ಅತ್ಯಂತ ಭಾರೀ ಉಪಗ್ರಹವನ್ನು ಹಾರಿಸಿದೆ. ಇಲ್ಲಿಯ ವರೆಗೆ ಪ್ರಯೋಗಿಸಲಾಗಿರುವ ಉಪಗ್ರಹಗಳೆಲ್ಲವಕ್ಕಿಂತಲೂ ಈಗ ಹಾರಿಸಿರುವ ಮೂರನೆಯ 'ಸ್ಪೂಟ್ನಿಕ್' ಅತ್ಯಂತ ಭಾರವಾಗಿದೆ, ಅಲ್ಲದೆ ವಿನೊಂದೂ ಅಪಾಯವಿಲ್ಲದೆ ಭೂಮಿಗೆ ಮರಳಿ ಬರುವ ನಿರೀಕ್ಷೆ ಇದೆ.

ಅರ್ಧ ಟನ್ನಿನ ಎರಡನೆಯ ಸ್ಪೂಟ್ನಿಕ್‌ಗಿಂತ ಇದು 1800 ಪೌಂಡುಗಳಷ್ಟು ಹೆಚ್ಚು ಭಾರವಾಗಿದೆ. ಶಂಖುವಿನ ಆಕಾರದಲ್ಲಿರುವ ಮೂರನೆಯ ಸ್ಪೂಟ್ನಿಕ್ 2900 ಪೌಂಡು ಭಾರವಿದೆ. ಇದು ಭೂಮಿಯನ್ನು 106 ಮಿನಿಟುಗಳಿಗೊಮ್ಮೆ ಸುತ್ತುತ್ತದೆ. ಇದರಲ್ಲಿ ಜೀವಂತವಾಗಿರುವ ಪ್ರಾಣಿ ಯಾವುದನ್ನೂ ಇಟ್ಟಿಲ್ಲವೆಂದು ತಿಳಿದುಬಂದಿದೆ.

ಹನ್ನೆರಡು ಅಡಿ ಉದ್ದವಿರುವ ಈ ಉಪಗ್ರಹ ಗುರುತ್ವಾಕರ್ಷಣೆಯನ್ನು ಜಯಿಸುವುದರಲ್ಲಿ ಸಾಧನೆಯನ್ನು ಇದರ ತೂಕ ಸೂಚಿಸಬಹುದಾಗಿದೆ.

ಭೂಭೌತಿಕ ವರ್ಷದ ಕಾರ್ಯಕ್ರಮದ ಅಂಗವಾಗಿ ವಾತಾವರಣ ಹಾಗೂ ಕಾಸ್ಮಿಕ್ ಅಂತರಿಕ್ಷದಲ್ಲಿ ಸಂಶೋಧನೆ ನಡೆಸುವ ಉದ್ದೇಶದಿಂದ ತೃತೀಯ ಸ್ಪೂಟ್ನಿಕ್ ಪ್ರಯೋಗಿಸಲಾಗಿದೆಯೆಂದು 'ತಾಸ್' ಪ್ರಕಟಣೆಯೊಂದು ತಿಳಿಸಿದೆ.

ಕರ್ನಾಟಕ ಪ್ರಾಂತೀಯ ರೈತ ಸಂಘಕ್ಕೆ ಸದಸ್ಯರಾಗಿರಿ

ನಮ್ಮ ಪ್ರಾಂತದ ರೈತರ ಮುಂದಿರುವ ಸಮಸ್ಯೆಗಳನ್ನು ಬಗೆಹರಿಸಲು ಬಲವಾದ ರೈತ ಸಂಘಟನೆ ಅತ್ಯಗತ್ಯವೆಂಬುದನ್ನರಿತು ಕಳೆದ ನವಂಬರ ತಿಂಗಳಲ್ಲಿ ಕರ್ನಾಟಕ ಪ್ರಾಂತೀಯ ರೈತ ಸಂಘವನ್ನು ಸ್ಥಾಪಿಸಲಾಗಿದೆ. ಇದನ್ನು ಅಖಿಲ ಭಾರತ ಕಿಸಾನ್ ಸಭೆಗೂ ಸೇರಿಸಲಾಗಿದೆ.

ಪ್ರಾಂತೀಯ ರೈತ ಸಂಘಕ್ಕೆ ಸದಸ್ಯರನ್ನು ಸೇರಿಸಲು ಪ್ರಾಂತೀಯ ಕಚೇರಿಯಿಂದ ರಶೀದಿ ಪುಸ್ತಕಗಳನ್ನು ಜಿಲ್ಲೆಗಳಿಗೆ ಕಳಿಸಲಾಗಿದೆ. ಮತ್ತು ಹಲವು ಕಡೆಗಳಲ್ಲಿ ಸದಸ್ಯರನ್ನು ಸೇರಿಸುವ ಕೆಲಸವೂ ಭರದಿಂದ ಸಾಗಿದೆ.

ಜುಲೈ 31ರ ತನಕ ಸದಸ್ಯರನ್ನು ಸೇರಿಸಬಹುದೆಂದು ಅಖಿಲ ಭಾರತ ಕಿಸಾನ್ ಸಭೆಯು ತಿಳಿಸಿರುತ್ತದೆ. ಇನ್ನುಳಿದ ಅಲ್ಪ ಕಾಲಾವಧಿಯಲ್ಲಿ ನಮ್ಮ ಪ್ರಾಂತದ ಎಲ್ಲ ಭಾಗಗಳಲ್ಲೂ ಸದಸ್ಯರನ್ನು ಸೇರಿಸುವ ಕೆಲಸವನ್ನು ಅತ್ಯಂತ ಬಿರುಸಾಗಿ ನಡೆಸಬೇಕೆಂದು ವಿನಂತಿಸುತ್ತೇವೆ.

ಈ ತನಕ ಸದಸ್ಯರನ್ನು ಸೇರಿಸಿದ ಬಗ್ಗೆ ವರದಿಯನ್ನೂ, ಸದಸ್ಯರ ಸಂಖ್ಯೆ ಮತ್ತು ಪ್ರಾಂತೀಯ ಸಂಘಕ್ಕೆ ತಲುಪಬೇಕಾದ ಹಣವನ್ನೂ ಕೂಡಲೇ ಕಳಿಸಬೇಕಾಗಿ ವಿನಂತಿ.

ಕಳೆದ ಆರು ತಿಂಗಳಲ್ಲಿ ನಮ್ಮ ಸಂಘಟನೆ ಬೆಳೆದಿದೆ ಮತ್ತು ಹೊಸ ಪ್ರದೇಶಗಳಿಗೂ ಹರಡಿದೆ. ನಮ್ಮ ಮುಂದಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸಂಘಟನೆ ಬಲಗೊಳ್ಳಬೇಕಾಗಿದೆ. ಆದ್ದರಿಂದ ಎಲ್ಲ ಕಾರ್ಯಕರ್ತರೂ ಅಧಿಕ ಸಂಖ್ಯೆಯಲ್ಲಿ ಪ್ರಾಂತೀಯ ರೈತ ಸಂಘಕ್ಕೆ ಸದಸ್ಯರನ್ನು ಸೇರಿಸಲು ತೀವ್ರ ಕ್ರಮ ತೆಗೆದುಕೊಳ್ಳಲು ಪ್ರಾಂತೀಯ ರೈತ ಸಂಘಕ್ಕೆ ಸದಸ್ಯರನ್ನು ಸೇರಿಸಲು ತೀವ್ರ ಕ್ರಮ ತೆಗೆದುಕೊಳ್ಳಲು ಪ್ರಾಂತೀಯ ಸಮಿತಿಯು ಕರೆ ಕೊಡುತ್ತದೆ. ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ

ಕರ್ನಾಟಕ ಪ್ರಾಂತೀಯ ರೈತ ಸಂಘ,
ಕಾಶೀ ವಿಶ್ವೇಶ್ವರ ಗುಡಿ ಬೀದಿ,
ಬೆಂಗಳೂರು 2

ರಾಷ್ಟ್ರೀಯ—

ತಾತಾ ಉಕ್ಕಿನ ಕಾರ್ಖಾನೆಯಲ್ಲಿ ಮುಷ್ಕರ

(1ನೇ ಪುಟದಿಂದ)

ಸಂಘದ ಮಾನ್ಯತೆಗಾಗಿ ಮತ್ತು ಕಾರ್ಮಿಕರ ಇತರ 15 ಬೇಡಿಕೆಗಳಿಗಾಗಿ ಎ. ಐ. ಟಿ. ಯು. ಸಿ. ನಾಯಕತ್ವದಲ್ಲಿರುವ ಜಮ್‌ಷೆಡ್‌ಪುರ ಕೆಲಸಗಾರರ ಸಂಘದ ಕರೆಯ ಮೇರೆಗೆ ಮೇ 12ರಂದು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದರು. ಮುಷ್ಕರವು ಸಂಪೂರ್ಣವಾಗಿ ಯಶಸ್ವಿಯಾಗಿ ನಡೆಯಿತು. ಐ ಎ. ಟಿ. ಯು. ಸಿ. ನಾಯಕತ್ವದಲ್ಲಿರುವ ತಾತಾ ಉಕ್ಕಿನ ಕೆಲಸಗಾರರ ಸಂಘವು ಮುಷ್ಕರವನ್ನು ವಿರೋಧಿಸಿ, ಮುಷ್ಕರ ಮುರಿಯಲು ಯತ್ನಿಸಿದರೂ ಸಹ ಮುಷ್ಕರ ಯಶಸ್ವಿಯಾಯಿತೆಂದು ತಿಳಿದುಬಂದಿದೆ. ಇದು ತಮ್ಮ ಬೇಡಿಕೆಗಳನ್ನು ಪಡೆದುಕೊಳ್ಳಲು ಕೆಲಸಗಾರರ ದೃಢ ನಿರ್ಧಾರವನ್ನು ಸೂಚಿಸುತ್ತದೆ. ಬಿಹಾರ್ ಸರಕಾರವು, ಮುಷ್ಕರವು ನ್ಯಾಯ ಬಾಹಿರವಾಗುವುದೆಂದು ಘೋಷಿಸಿದ್ದರೂ, 144ನೇ ಸೆಕ್ಷನ್ ಜಾರಿಗೊಳಿಸಿದ್ದರೂ ಮುಷ್ಕರ ಯಶಸ್ವಿಯಾಗಿದೆ. ತಾತಾ ಉಕ್ಕಿನ ಕಾರ್ಖಾನೆ ಕೆಲಸಗಾರರು ಪ್ರದರ್ಶಿಸಿರುವ ಐಕ್ಯತೆಯು, ಅವರ ಬೇಡಿಕೆಗಳನ್ನು ಪಡೆದುಕೊಳ್ಳುವುದರಲ್ಲಿ ವಿಜಯಿಗಳಾಗುವರು ಎಂಬುದನ್ನೂ ಸೂಚಿಸುತ್ತದೆ.

ಅಲ್ಜೀರಿಯ ಪ್ರಶ್ನೆಯ ಮೇಲೆ ಫ್ರಾನ್ಸ್‌ನಲ್ಲಿ ಅಂತರ್ಯುದ್ಧ ಪರಿಸ್ಥಿತಿ

(ಮೊದಲನೇ ಪುಟದಿಂದ)

ತ್ಯ ಹೋರಾಟವನ್ನು ನೆತ್ತರಿನಲ್ಲಿ ಮುಳುಗಿಸಲು ಯತ್ನಿಸುತ್ತಿದ್ದಾರೆ. ಅಲ್ಜೀರಿಯದ ಈ ಘಟನೆಗಳು ಫ್ರೆಂಚ್ ರಾಷ್ಟ್ರೀಯ ಸಭೆಯಲ್ಲಿ ಪರಿಸ್ಥಿತಿಯನ್ನೇ ಬದಲಿಸಿದು 29 ದಿನಗಳ ರಾಜಕೀಯ ಬಿಕ್ಕಟ್ಟಿನ ನಂತರ ಅಧಿಕಾರಕ್ಕೆ ಬಂದಿರುವ ಫ್ಲಿಮ್‌ಲಿನ್ ಸರಕಾರಕ್ಕೆ ಭವಿಷ್ಯವೇ ಇಲ್ಲವೆಂದು ಕಾಣುತ್ತಿದೆ. ಈ ತುರ್ತು ಪರಿಸ್ಥಿತಿಯನ್ನು ಚರ್ಚಿಸಲು ಮುಂದುವರಿಸಲಾಗಿದ್ದ ರಾಷ್ಟ್ರೀಯ ಸಭೆಯನ್ನು ಪುನಃ ಕರೆಯಲಾಗಿದೆ. ಫ್ರಾನ್ಸ್‌ನ ರಾಜಕೀಯ ಇತಿಹಾಸದಲ್ಲಿ ಇಂಥ ಬಿಕ್ಕಟ್ಟು ಇದೇ ಮೊದಲನೆಯಲಾದಾಗಿದೆ.

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2
phone 3810